prajavani.net | prajavani
ಮಂಗಳವಾರ, ಮೇ 12, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 131 | ಪುಟ 12
www.prajavani.net



ಬದುಕು...
ಪಶ್ಚಿಮ ಬಂಗಾಳದ ನಾದಿಯಾದಲ್ಲಿ, ಮಹಿಳಾ ಕಾರ್ಮಿಕರೊಬ್ಬರು ಹಸುಗೂಸನ್ನು ಬೆನ್ನಲ್ಲಿ ಹೊತ್ತುಕೊಂಡೇ ಕಲ್ಲಿದ್ದಲು ಒಡೆದರು...

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 76,015 | ನಿಫ್ಟಿ 23,815 | $/₹ 95.28 | ಚಿನ್ನ (Std. 10g) ₹1,56,900 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,72,400 (ಬೆಂಗಳೂರು)

ಕಳವಳ ಮೂಡಿಸಿದ ಪ್ರಧಾನಿ ಸಲಹೆ

ದೇಶದ ಷೇರುಪೇಟೆ ಸೂಚ್ಯಂಕಗಳ ಕುಸಿತ, ಡಾಲರ್ ಎದುರು ರೂಪಾಯಿ ಮತ್ತಷ್ಟು ದುರ್ಬಲ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ವಿದೇಶಿ ವಿನಿಮಯ ಸಂಗ್ರಹವನ್ನು ಉಳಿಸುವ ಉದ್ದೇಶದಿಂದ ಮಿತವ್ಯಯದ ವಿವಿಧ ಕ್ರಮಗಳನ್ನು ಅನುಸರಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಕರೆ ನೀಡಿದ ನಂತರದಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಕುಸಿದಿವೆ, ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಮತ್ತಷ್ಟು ದುರ್ಬಲಗೊಂಡಿದೆ.

ಸೋಮವಾರದ ವಹಿವಾಟಿನಲ್ಲಿ ಹೂಡಿಕೆದಾರರ ₹6 ಲಕ್ಷ ಕೋಟಿಗಿಂತ ಹೆಚ್ಚಿನ ಸಂಪತ್ತು ಕರಗಿದೆ. ಮೋದಿ ಅವರು ನೀಡಿರುವ ಕರೆಯು ದೇಶದ ಅರ್ಥ ವ್ಯವಸ್ಥೆ ಹಾಗೂ ರೂಪಾಯಿಯ ಸ್ಥಿರತೆ ಬಗ್ಗೆ ಕಳವಳ ಮೂಡಿಸಿದೆ.

ಸೋಮವಾರ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು 79 ಪೈಸೆಯಷ್ಟು ಕುಸಿದಿದ್ದು, 95.28ರ ಮಟ್ಟಕ್ಕೆ ತಲುಪಿದೆ.

ಷೇರುಪೇಟೆಗಳ ಪ್ರಮುಖ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಕುಸಿತ ಕಂಡಿವೆ. ಸೆನ್ಸೆಕ್ಸ್ 1,312 ಅಂಶ ಹಾಗೂ ನಿಫ್ಟಿ 360 ಅಂಶ ಇಳಿಕೆ ಕಂಡಿವೆ. ಗುರುವಾರ, ಶುಕ್ರವಾರ ಮತ್ತು ಸೋಮವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ ಶೇ 2.5ರಷ್ಟು ಹಾಗೂ ನಿಫ್ಟಿ ಶೇ 2.1ರಷ್ಟು ಇಳಿಕೆ ಕಂಡಿವೆ.

ಅಮೆರಿಕ ಮತ್ತು ಇಸ್ರೇಲ್ ಜೊತೆಯಾಗಿ ಇರಾನ್ ಮೇಲೆ ಫೆಬ್ರುವರಿ 28ರಂದು ಸಮರ ಸಾರಿದಾಗಿನಿಂದಲೂ ಭಾರತದ ರೂಪಾಯಿ ಮೌಲ್ಯವು ಕುಸಿಯುತ್ತಿದೆ. ಆದರೆ ಮೋದಿ ಅವರು ಭಾನುವಾರ ನೀಡಿದ ಕರೆಯು ಅರ್ಥ ವ್ಯವಸ್ಥೆಯ ಮೇಲೆ ಉಂಟಾಗಿರುವ ಒತ್ತಡದ ಬಗ್ಗೆ ಕಳವಳ ಮೂಡುವಂತೆ ಮಾಡಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

▸8

ಇಂಧನ ಪೂರೈಕೆಗೆ ಮಿತಿ ವಿಧಿಸಿಲ್ಲ: ಕೇಂದ್ರ

ನವದೆಹಲಿ (ಪಿಟಿಐ): ಇಂಧನ ಪೂರೈಕೆಯ ಮೇಲೆ ಮಿತಿ ಹೇರುವ ಯಾವುದೇ ಆಲೋಚನೆ ಕೇಂದ್ರ ಸರ್ಕಾರಕ್ಕೆ ಇಲ್ಲ ಎಂದು ಪೆಟ್ರೋಲಿಯಂ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಸ್ಪಷ್ಟಪಡಿಸಿದ್ದಾರೆ.

‘ಭೀತಿಗೆ ಒಳಗಾಗುವ ಅಗತ್ಯ ಇಲ್ಲ. ಇಂಧನ ಪೂರೈಕೆ ಸಾಕಷ್ಟಿದೆ. ಒಬ್ಬರಿಗೆ ಇಂತಿಷ್ಟೇ ಇಂಧನ ಎಂಬ ನಿಯಮ ಇಲ್ಲ. ಆ ರೀತಿ ಆಗುವುದಿಲ್ಲ’ ಎಂದು ತೈಲ ಸಚಿವಾಲಯದ ಕಾರ್ಯದರ್ಶಿ ನೀರಜ್ ಮಿತ್ತಲ್ ತಿಳಿಸಿದ್ದಾರೆ.

ಇಂಧನ ಬೆಲೆ ಹಾಗೂ ಪೂರೈಕೆಯನ್ನು ಸ್ಥಿರವಾಗಿ ಇರಿಸುವುದು ಸರ್ಕಾರದ ಆದ್ಯತೆಯಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

‘ಆನ್‌ಲೈನ್ ತರಗತಿ ನಡೆಸಿ’

ವಡೋದರಾ (ಪಿಟಿಐ): ‘ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ತಾತ್ಕಾಲಿಕವಾಗಿ ಆನ್‌ಲೈನ್ ತರಗತಿ ನಡೆಸಲು ಆದ್ಯತೆ ನೀಡಬೇಕು’ ಎಂದು ಪ್ರಧಾನಿ ನರೇಂದ್ರ ಮೋದಿ ಸಲಹೆ ನೀಡಿದ್ದಾರೆ.

ವಡೋದರಾದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಜನರು ಖಾದ್ಯ ತೈಲ ಬಳಕೆ ಕಡಿಮೆ ಮಾಡಬೇಕು. ವಿದೇಶಗಳಿಗೆ ಪ್ರಯಾಣ ಮಾಡುವುದನ್ನು ತಪ್ಪಿಸಬೇಕು. ಸರ್ಕಾರಿ ಮತ್ತು ಖಾಸಗಿ ಕಚೇರಿಗಳಲ್ಲಿ ವರ್ಚುವಲ್ ಸಭೆ ನಡೆಸಲು ಹಾಗೂ ಮನೆಯಿಂದಲೇ ಕೆಲಸ ಮಾಡುವ ವ್ಯವಸ್ಥೆಗೆ ಆದ್ಯತೆ ನೀಡಬೇಕು’ ಎಂದು ಹೇಳಿದ್ದಾರೆ.

‘ಜನಸಾಮಾನ್ಯರ ಮೇಲೆ ಬಿಕ್ಕಟ್ಟಿನ ಪರಿಣಾಮವನ್ನು ಕಡಿಮೆ ಮಾಡುವಂತೆ ನೋಡಿಕೊಳ್ಳಲು ನಮ್ಮ ಸರ್ಕಾರ ನಿರಂತರ ಪ್ರಯತ್ನ ಮಾಡುತ್ತಿದೆ. ಆದರೆ, ಜನರ ಪಾಲ್ಗೊಳ್ಳುವಿಕೆಯೂ ಮುಖ್ಯ’ ಎಂದು ತಿಳಿಸಿದ್ದಾರೆ.

‘ಕೋವಿಡ್‌–19 ನಂತರ ಜಾಗತಿಕ ಆರ್ಥಿಕ ಸವಾಲುಗಳು ಎದುರಾದವು. ಈಗ ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಹೆಚ್ಚುತ್ತಿದೆ. ಈ ಎಲ್ಲ ಪರಿಸ್ಥಿತಿಗಳ ಪ್ರಭಾವವು ಜಗತ್ತಿನಾದ್ಯಂತ ಕಂಡುಬರುತ್ತಿದೆ. ಇದರಿಂದ ಭಾರತವೂ ಹೊರತಾಗಿಲ್ಲ’ ಎಂದು ಹೇಳಿದ್ದಾರೆ.

ವೆಚ್ಚ ತಗ್ಗಿಸಲು ಬದ್ಧ: ನಾಸ್ಕಾಂ



ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಹಿನ್ನೆಲೆಯಲ್ಲಿ ದೇಶದ ತಂತ್ರಜ್ಞಾನ ವಲಯದ ಕಂಪನಿಗಳು ಬಹಳ ವಿವೇಕಯುತವಾದ ಇಂಧನ ನಿರ್ವಹಣಾ ಕ್ರಮಗಳನ್ನು ಪಾಲಿಸುತ್ತಿವೆ ಎಂದು ಐ.ಟಿ. ಉದ್ಯಮದ ಪ್ರಾತಿನಿಧಿಕ ಸಂಸ್ಥೆ ನಾಸ್ಕಾಂ ಸೋಮವಾರ ಹೇಳಿದೆ. ಮನೆಯಿಂದಲೇ ಕೆಲಸ ಮಾಡಲು ಅವಕಾಶ ಕಲ್ಪಿಸುವುದು, ಹೈಬ್ರಿಡ್ ಮಾದರಿಯಲ್ಲಿ ಕೆಲಸ ಮಾಡುವುದು ಕೂಡ ಈ ಕ್ರಮಗಳಲ್ಲಿ ಸೇರಿವೆ ಎಂದು ಅದು ತಿಳಿಸಿದೆ.

‘ತೀರಾ ಅಗತ್ಯವಲ್ಲದ ಬಳಕೆಗಳನ್ನು ಕಡಿಮೆ ಮಾಡುವುದು, ಸೌಲಭ್ಯಗಳನ್ನು ಮಿತವಾಗಿ ಬಳಕೆ ಮಾಡುವ ಕ್ರಮಗಳನ್ನು ಕಂಪನಿಗಳು ಕೈಗೊಂಡಿವೆ’ ಎಂದು ನಾಸ್ಕಾಂ ಪ್ರಕಟಣೆ ಹೇಳಿದೆ. ದೇಶದ 3,500ಕ್ಕೂ ಹೆಚ್ಚು ಕಂಪನಿಗಳು ಈ ಸಂಸ್ಥೆಯ ಸದಸ್ಯತ್ವ ಹೊಂದಿವೆ.

ವಿದೇಶಿ ವಿನಿಮಯವನ್ನು ಉಳಿಸಲು ನಾಗರಿಕರು ಹಲವು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿಕೆ ನೀಡಿದ ನಂತರದಲ್ಲಿ ನಾಸ್ಕಾಂ ಈ ಪ್ರಕಟಣೆ ಹೊರಡಿಸಿದೆ.

ಸೋಮನಾಥನ ಸನ್ನಿಧಿಯಲ್ಲಿ

ಪಿಟಿಐ ಚಿತ್ರ



ಗುಜರಾತ್‌ನ ಸೋಮನಾಥ ದೇವಸ್ಥಾನದ ಪುನರ್ ನಿರ್ಮಾಣದ ಅಮೃತ ಮಹೋತ್ಸವದ ಅಂಗವಾಗಿ ಸೋಮವಾರ ನಡೆದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ

ಪ್ರಜಾಪ್ರಭುತ್ವ ಹೈಜಾಕ್ ಮಾಡಲು ಸಾಧ್ಯವಿಲ್ಲ: ‘ಸುಪ್ರೀಂ’

ರಾಜೇಗೌಡ ಶಾಸಕತ್ವ ಮರುಸ್ಥಾಪನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಶೃಂಗೇರಿ ಶಾಸಕರನ್ನಾಗಿ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಅವರನ್ನು ಸೋಮವಾರ ಮರುಸ್ಥಾಪಿಸಿದ ಸುಪ್ರೀಂ ಕೋರ್ಟ್, ‘ಪ್ರಜಾಪ್ರಭುತ್ವವನ್ನು ಈ ರೀತಿ ಹೈಜಾಕ್ ಮಾಡಲು ಸಾಧ್ಯವಿಲ್ಲ’ ಎಂದು ಕಟುವಾಗಿ ಎಚ್ಚರಿಸಿದೆ.

ಬಿಜೆಪಿಯ ಡಿ.ಎನ್. ಜೀವರಾಜ್ ಅವರನ್ನು ಚುನಾಯಿತ ಎಂದು ಚುನಾವಣಾ ಆಯೋಗ ಘೋಷಿಸಿ ಪ್ರಮಾಣವಚನ ಬೋಧಿಸಿದ್ದರೂ, ಕಾಂಗ್ರೆಸ್ ನಾಯಕ ರಾಜೇಗೌಡ ಅವರಿಗೆ ನ್ಯಾಯಪೀಠ ಮಧ್ಯಂತರ ಪರಿಹಾರ ನೀಡಿದೆ. ಅವರು ಸದ್ಯಕ್ಕೆ ಕ್ಷೇತ್ರದ ಶಾಸಕರಾಗಿ ಉಳಿಯಬೇಕೆಂದು ಆದೇಶಿಸಿದೆ.

ರಾಜೇಗೌಡ ಸಲ್ಲಿಸಿದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಕೆ. ವಿನೋದ್ ಚಂದ್ರನ್ ಅವರ ಪೀಠವು, ಬಿಜೆಪಿ ಅಭ್ಯರ್ಥಿಯ ವಿರುದ್ಧ ಕೆಲವು ಕಟುವಾದ ಅವಲೋಕನಗಳನ್ನು ಮಾಡಿತು.

ಕರ್ನಾಟಕ ಹೈಕೋರ್ಟ್‌ನ ಏಪ್ರಿಲ್ 6ರ ಆದೇಶದ ಪ್ರಕಾರ ತೆಗೆದುಕೊಂಡ ಎಲ್ಲ ಕ್ರಮಗಳನ್ನು ಸ್ಥಗಿತಗೊಳಿಸುವಂತೆ ತಾಕೀತು ಮಾಡಿತು. ಮತ ಮರು ಎಣಿಕೆಯ ಮೊದಲು ಅಸ್ತಿತ್ವದಲ್ಲಿದ್ದ ಸ್ಥಿತಿಗತಿಯನ್ನು ಕಾಯ್ದುಕೊಳ್ಳುವಂತೆ ನಿರ್ದೇಶಿಸುವ ಮಧ್ಯಂತರ ಆದೇಶವನ್ನೂ ಪೀಠ ಹೊರಡಿಸಿತು.




ರಾಜೇಗೌಡ ಅವರನ್ನು ಪ್ರತಿನಿಧಿಸಿದ ಹಿರಿಯ ವಕೀಲರಾದ ಕಪಿಲ್ ಸಿಬಲ್, ಮುಕುಲ್ ರೋಹಟಗಿ ಮತ್ತು ದೇವದತ್ತ ಕಾಮತ್ ಅವರು ಹೈಕೋರ್ಟ್ ಆದೇಶದ ಸಿಂಧುತ್ವ ಪ್ರಶ್ನಿಸಿದರು. ಜೀವರಾಜ್ ಪರ ವಾದ ಮಂಡಿಸಿದ ಹಿರಿಯ ವಕೀಲ ವಿ. ಗಿರಿ, ‘ಶಾಸಕರಾಗಿ ವಿಧಾನಸಭಾಧ್ಯಕ್ಷರಿಂದ ನನ್ನ ಕಕ್ಷಿದಾರರು ಪ್ರಮಾಣ ವಚನ ಸ್ವೀಕರಿಸಿದ್ದಾರೆ’ ಎಂದು ವಾದಿಸಿದರು.

ಪ್ರತಿವಾದಿಗಳಾದ ಕರ್ನಾಟಕ ಸರ್ಕಾರ, ಚುನಾವಣಾ ಆಯೋಗ ಮತ್ತು ಇತರರಿಗೆ ನ್ಯಾಯಪೀಠ ನೋಟಿಸ್ ಜಾರಿ ಮಾಡಿತು. ಮುಂದಿನ ವಿಚಾರಣೆ ಇದೇ 21ರಂದು ನಡೆಯಲಿದೆ.

2023ರ ವಿಧಾನಸಭಾ ಚುನಾವಣೆಯಲ್ಲಿ ರಾಜೇಗೌಡ ಅವರು ಜೀವರಾಜ್ ಅವರನ್ನು 201 ಮತಗಳ ಅಂತರದಿಂದ ಸೋಲಿಸಿದ್ದರು. 1,811 ಅಂಚೆಮತಗಳು ಚಲಾವಣೆಯಾಗಿದ್ದವು.

▸3B

ನ್ಯಾಯ ಸಿಕ್ಕಿದೆ: ರಾಜೇಗೌಡ



ಹೈಕೋರ್ಟ್‌ನ ಎಲ್ಲ ಪ್ರಕ್ರಿಯೆಗಳಿಗೂ ಸುಪ್ರೀಂ ಕೋರ್ಟ್ ತಡೆ ನೀಡಿದೆ. ಅಂಚೆ ಮತಗಳ ಎಣಿಕೆಯಲ್ಲಿ ಹಿಂದಿಗಿಂತಲೂ ಎರಡು ಹೆಚ್ಚುವರಿ ಮತಗಳು ನನ್ನ ಪರವಾಗಿ ಬಂದಿದ್ದವು. ಆದರೆ, ಕಡಿಮೆ ಎಂದು ತೋರಿಸಲಾಯಿತು. ಹೀಗಾಗಿ, ಎಣಿಕೆಯಲ್ಲಿ ಅಕ್ರಮ ನಡೆದಿದೆ ಎಂದು ಅನುಮಾನ ಮೂಡಿತು. ಇದೇ ಕಾರಣದಿಂದ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ. ನನಗೆ ಈಗ ನ್ಯಾಯ ಸಿಕ್ಕಿದೆ.

ಟಿ.ಡಿ.ರಾಜೇಗೌಡ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಜುಲೈ 1ರಿಂದ ವಿಬಿ–ಜಿ ರಾಮ್ ಜಿ

ನವದೆಹಲಿ (ಪಿಟಿಐ): ‘ವಿಕಸಿತ ಭಾರತ– ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) (ವಿಬಿ–ಜಿ ರಾಮ್ ಜಿ) ಕಾಯ್ದೆಯು ದೇಶದಾದ್ಯಂತ ಜುಲೈ 1ರಿಂದ ಜಾರಿಯಾಗಲಿದೆ’ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು ಸೋಮವಾರ ಅಧಿಸೂಚನೆ ಹೊರಡಿಸಿದೆ.

‘ಜುಲೈ 1ರಂದು ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಕಾಯ್ದೆಯು (ನರೇಗಾ) ರದ್ದಾಗಲಿದ್ದು, ಇದರ ಬದಲಿಗೆ ವಿಬಿ–ಜಿ ರಾಮ್ ಜಿ ಜಾರಿಯಾಗಲಿದೆ. ನರೇಗಾದಿಂದ ವಿಬಿ–ಜಿ ರಾಮ್ ಜಿ ಬದಲಾವಣೆ ಪ್ರಕ್ರಿಯೆಯು ಯಾವುದೇ ತೊಡಕಿಲ್ಲದೆಯೇ ನಡೆಯಲಿದೆ. ಕಾರ್ಮಿಕರಿಗೆ ಯಾವುದೇ ತೊಂದರೆಯಾಗುವುದಿಲ್ಲ’ ಎಂದು ಕೇಂದ್ರ ಸರ್ಕಾರ ಹೇಳಿದೆ.

‘ನರೇಗಾ ಅಡಿಯಲ್ಲಿ ಜೂನ್ 30ರವರೆಗೆ ನಡೆಯುವ ಎಲ್ಲ ಕಾಮಗಾರಿಗಳು ಹೊಸ ಕಾಯ್ದೆಯ ಅಡಿ ತಡೆರಹಿತವಾಗಿಯೇ ಮುಂದುವರಿಯಲಿವೆ’ ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ.

▸5

‘ನಿಯಮಗಳನ್ನು ರೂಪಿಸಲಾಗುತ್ತಿದೆ’



‘ಕೂಲಿ ನೀಡುವುದು, ಕುಂದುಕೊರತೆ ಪರಿಹಾರ, ಕಾಮಗಾರಿ ಹಂಚಿಕೆ ನಿಯಮಗಳು ಮತ್ತು ಹಳೇ ಕಾಯ್ದೆಯಿಂದ ಹೊಸ ಕಾಯ್ದೆಗೆ ಬದಲಾವಣೆಯಾಗುವ ಸಂಬಂಧ ಅಗತ್ಯವಿರುವ ಎಲ್ಲ ನಿಯಮಗಳನ್ನು ರೂಪಿಸುವ ಪ್ರಕ್ರಿಯೆ ನಡೆಯುತ್ತಿದೆ. ಈ ಬಗ್ಗೆ ಕೇಂದ್ರಾಡಳಿತ ಪ್ರದೇಶಗಳು ಮತ್ತು ಎಲ್ಲ ರಾಜ್ಯ ಗಳೊಂದಿಗೆ ಮಾತುಕತೆ ನಡೆಸಲಾಗುತ್ತಿದೆ. ಶೀಘ್ರದಲ್ಲಿಯೇ ಎಲ್ಲ ನಿಯಮಗಳನ್ನು ಸಾರ್ವಜನಿಕರ ಪ್ರತಿಕ್ರಿಯೆಗಾಗಿ ಪ್ರಕಟಿಸಲಾಗುವುದು’ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ ಅಧಿಸೂಚನೆಯಲ್ಲಿ ಹೇಳಿದೆ.

ತುಟ್ಟಿಭತ್ಯೆ ಶೇ 1.5 ಹೆಚ್ಚಳ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರು ಹಾಗೂ ನಿವೃತ್ತರ ತುಟ್ಟಿಭತ್ಯೆಯನ್ನು 2026ರ ಜನವರಿ 1ರಿಂದಲೇ ಪೂರ್ವಾನ್ವಯವಾಗುವಂತೆ ಶೇ 1.5ರಷ್ಟು ಹೆಚ್ಚಳ ಮಾಡಿ ಆರ್ಥಿಕ ಇಲಾಖೆ ಆದೇಶ ಹೊರಡಿಸಿದೆ.

ನೌಕರರು ತಮ್ಮ ಮೂಲ ವೇತನದ ಶೇ 14.25ರಷ್ಟು ತುಟ್ಟಿಭತ್ಯೆ ಪಡೆಯುತ್ತಿದ್ದಾರೆ. ಹೊಸ ಆದೇಶದಿಂದಾಗಿ ಒಟ್ಟು ತುಟ್ಟಿಭತ್ಯೆ ಪ್ರಮಾಣ ಶೇ 15.75ಕ್ಕೆ ಏರಿಕೆಯಾಗಿದೆ. ರಾಜ್ಯದ ಸುಮಾರು 5.25 ಲಕ್ಷ ಸರ್ಕಾರಿ ನೌಕರರು, ನಿಗಮ, ಮಂಡಳಿ, ಅನುದಾನಿತ ಸಂಸ್ಥೆಗಳ 3 ಲಕ್ಷ ಸಿಬ್ಬಂದಿ, 4.50 ಲಕ್ಷ ನಿವೃತ್ತ ನೌಕರರಿಗೆ ಇದು ಅನ್ವಯವಾಗಲಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ.

₹1.58 ಕೋಟಿ ಸೈಬರ್ ವಂಚನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಹೂಡಿಕೆಯ ಹೆಸರಿನಲ್ಲಿ ಹಣ ವರ್ಗಾವಣೆ ಮಾಡಿಸಿಕೊಂಡು ವೃದ್ಧರೊಬ್ಬರಿಗೆ ₹1.58 ಕೋಟಿ ವಂಚಿಸಲಾಗಿದ್ದು, ಈ ಸಂಬಂಧ ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಠಾಣಾ ವ್ಯಾಪ್ತಿಯಲ್ಲಿ ನೆಲಸಿರುವ 72 ವರ್ಷದ ವೃದ್ಧರೊಬ್ಬರು ನೀಡಿರುವ ದೂರಿನ ಮೇಲೆ ಪ್ರಿಯಾಂಕಾ ಎಂಬುವವರ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಬಿಎನ್‌ಎಸ್‌ನ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ದೂರುದಾರರ ವಾಟ್ಸ್‌ಆ್ಯಪ್ ಸಂಖ್ಯೆಯನ್ನು 'ಎಸಿಎಂಇ ವಿಐಪಿ-58' ಹೆಸರಿನ ಗ್ರೂಪ್‌ಗೆ ಪ್ರಿಯಾಂಕಾ ಸೇರ್ಪಡೆ ಮಾಡಿದ್ದರು. ಅದಾದ ಕೆಲವು ದಿನಗಳ ಬಳಿಕ ದೂರುದಾರರನ್ನು ಸೈಬರ್ ವಂಚಕರು ಸಂಪರ್ಕಿಸಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಹಣ ಲಭಿಸಲಿದೆ ಎಂಬುದಾಗಿ ನಂಬಿಸಿದ್ದರು. ಅಲ್ಲದೇ ಪ್ಲೇ ಸ್ಟೋರ್‌ನಿಂದ 'ಎಸಿಎಂಇ' ಹೆಸರಿನ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳುವಂತೆಯೂ ಮನವೊಲಿಸಿದ್ದರು. ವಂಚಕರ ಸೂಚನೆಯಂತೆ ಆ್ಯಪ್ ಡೌನ್‌ಲೋಡ್ ಮಾಡಿಕೊಂಡಿದ್ದ ದೂರುದಾರ, ಆರಂಭದಲ್ಲಿ ₹50 ಸಾವಿರ ಹೂಡಿಕೆ ಮಾಡಿದ್ದರು. ಇನ್ನೂ ಹೆಚ್ಚಿನ ಹಣವನ್ನು ಹೂಡಿಕೆ ಮಾಡುವಂತೆ ಹೇಳಿದ್ದರು. ವಂಚಕರ ಮಾತು ನಂಬಿದ್ದ ದೂರುದಾರ, ತಮ್ಮ ಎರಡು ಬ್ಯಾಂಕ್ ಖಾತೆಗಳಿಂದ ಅಪರಿಚಿತರು ಕಳುಹಿಸಿದ್ದ ಬೇರೆ ಬೇರೆ ಬ್ಯಾಂಕ್ ಖಾತೆಗಳಿಗೆ ಹಂತಹಂತವಾಗಿ ₹1.58 ಕೋಟಿ ವರ್ಗಾವಣೆ ಮಾಡಿದ್ದರು' ಎಂದು ಸೈಬರ್ ಠಾಣೆಯ ಪೊಲೀಸರು ಹೇಳಿದರು.

'ಕೆಲವು ತಿಂಗಳು ಕಳೆದ ಮೇಲೆ ಹೂಡಿಕೆ ಮಾಡಿದ್ದ ಹಣ ಡ್ರಾ ಮಾಡಿಕೊಳ್ಳಲು ದೂರುದಾರರು ಪ್ರಯತ್ನಿಸಿದ್ದರು. ಹಣ ಡ್ರಾ ಮಾಡಲು 'ಇನ್ನೂ ಹೆಚ್ಚಿನ ಹಣವನ್ನು ವರ್ಗಾವಣೆ ಮಾಡುವಂತೆ ಸೂಚಿಸಿದ್ದರು. ಆಗ ಸೈಬರ್ ವಂಚನೆ ನಡೆದಿರುವುದು ಗೊತ್ತಾಗಿ ದೂರು ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು.

ಬೆಂಗಳೂರು ಓಪನ್ ಟೆನಿಸ್: ಮುಖ್ಯ ಸುತ್ತಿಗೆ ಆದಿತ್ಯ

ಬೆಂಗಳೂರು: ಭಾರತದ ಆದಿತ್ಯ ವಿಶಾಲ್ ಅವರು ಇಲ್ಲಿನ ಕಬ್ಬನ್ ಪಾರ್ಕ್‌ನ ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಕರ್ನಾಟಕ ಓಪನ್' ಟೆನಿಸ್ ಟೂರ್ನಿಯಲ್ಲಿ ಮುಖ್ಯ ಸುತ್ತು ಪ್ರವೇಶಿಸಿದರು.

ಕ್ವಾಲಿಫೈಯರ್ ಹಂತದ ಪಂದ್ಯದಲ್ಲಿ ಮುಂಬೈನ ಆದಿತ್ಯ 6-3, 7-5ರಿಂದ ಕಜಾಕಸ್ತಾನದ ಗ್ರಿಗೋರಿ ಲೊಮಾಕಿನ್ ಅವರನ್ನು ಮಣಿಸಿದರು. ಸೋಮವಾರದ ಸ್ಪರ್ಧೆಯಲ್ಲಿದ್ದ ಭಾರತದ ಆರು ಆಟಗಾರರ ಪೈಕಿ ಆದಿತ್ಯ ಮಾತ್ರ ಮುಂದಿನ ಸುತ್ತು ಪ್ರವೇಶಿಸಿದರು.

ಅರ್ಹತಾ ಸುತ್ತಿನಲ್ಲಿ ಬೆಂಗಳೂರಿನ ಹುಡುಗ ಆದಿಲ್ ಕಲ್ಯಾಣಪುರ ಆರಂಭಿಕ ಸೆಟ್‌ನಲ್ಲಿ ಮುನ್ನಡೆ ಸಾಧಿಸಿದರು. ಆದರೆ, ನಂತರ ಲಯ ತಪ್ಪಿ 7-5, 3-6, 3-6 ಅಂತರದಲ್ಲಿ ಅಮೆರಿಕದ ಕ್ರಿಸ್ಟೋಫರ್ ಪಾಪಾ ಅವರಿಗೆ ಸೋತರು. ಪಾರ್ಥ್ ಅಗರವಾಲ್ 2-6, 1-6 ಅಂತರದಲ್ಲಿ ಅಮೆರಿಕದ ರೋನಿತ್ ಕಾರ್ಕಿ ಅವರಿಗೆ ಮಣಿದರು.

ಮುಖ್ಯಸುತ್ತಿನ 32ರ ಘಟ್ಟದಲ್ಲಿ ಭಾರತದ ಮೂರು ಆಟಗಾರರು ಮೊದಲ ಸುತ್ತಿನಲ್ಲೇ ಸೋಲು [illegible]. ಜೆಕ್ ಗಣರಾಜ್ಯದ ಡೊಮಿನಿಕ್ ಪಾಲನ್ 7-6 (10), 6-4ರಿಂದ ಮಾನ್ ಕೇಶರ್ವಾನಿ ವಿರುದ್ಧ; ಥಾಯ್ಲೆಂಡ್‌ನ ಮ್ಯಾಕ್ಸಿಮಸ್ ಜೋನ್ಸ್ 6-4, 7-6 (3)ರಿಂದ ಸಿದ್ಧಾರ್ಥ್ ರಾವತ್ ವಿರುದ್ಧ; [illegible] 6-1, 7-6 (5)ರಿಂದ ದೇವ್ ಜಾವಿಯಾ ವಿರುದ್ಧ ಸೋಲುಂಡರು.



ಭಾರತದ ಆದಿತ್ಯ ವಿಶಾಲ್ –ಚಿತ್ರ: ಕೆಎಸ್‌ಎಲ್‌ಟಿಎ

ಬೆಂಕಿ ಅವಘಡ: ಇಬ್ಬರು ಮಕ್ಕಳ ಸಾವು

ಕೊತ್ತನೂರು ಪೊಲೀಸ್ ಠಾಣಾ ವ್ಯಾಪ್ತಿಯ ಕೆ.ನಾರಾಯಣಪುರದಲ್ಲಿ ಘಟನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಖಾಲಿಯಿದ್ದ ಶೆಡ್‌ಗೆ ಬೆಂಕಿ
- ರಾಯಚೂರು ಜಿಲ್ಲೆಯ ದೇವದುರ್ಗದ ಕಾರ್ಮಿಕರ ಮಕ್ಕಳು

ಬೆಂಗಳೂರು: ಕೊತ್ತನೂರು ಪೊಲೀಸ್ ಠಾಣಾ ವ್ಯಾಪ್ತಿಯ ಕೆ.ನಾರಾಯಣಪುರದ ಖಾಲಿ ಪ್ರದೇಶದಲ್ಲಿ ಹಾಕಲಾಗಿದ್ದ ಶೆಡ್‌ನಲ್ಲಿ ಸೋಮವಾರ ಮಧ್ಯಾಹ್ನ ಸಂಭವಿಸಿದ ಬೆಂಕಿ ಅವಘಡದಲ್ಲಿ ಉಸಿರುಗಟ್ಟಿ ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ.

ಅರ್ಜುನ್ (5) ಹಾಗೂ ಆಶಾ (3) ಮೃತ ಮಕ್ಕಳು. ಕೃಷ್ಣಮೂರ್ತಿ ಎಂಬುವವರಿಗೆ ಸೇರಿದ ಖಾಲಿ ಜಾಗದಲ್ಲಿ ಹೊರ ಜಿಲ್ಲೆ ಹಾಗೂ ಹೊರ ರಾಜ್ಯದ ಕಾರ್ಮಿಕರು ಹತ್ತು ಶೆಡ್‌ಗಳನ್ನು ನಿರ್ಮಿಸಿಕೊಂಡು ವಾಸ ಮಾಡುತ್ತಿದ್ದರು. ಖಾಲಿಯಿದ್ದ ಶೆಡ್‌ನಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಸೋಮವಾರ ಬೆಳಿಗ್ಗೆ 9ರ ಸುಮಾರಿಗೆ ಮಕ್ಕಳನ್ನು ಅಜ್ಜಿ ಬಳಿ ಬಿಟ್ಟು ಪೋಷಕರು ಕೆಲಸಕ್ಕೆ ತೆರಳಿದ್ದರು. ಅಜ್ಜಿ ಕೆಲಸದಲ್ಲಿ ತಲ್ಲೀನರಾಗಿದ್ದಾಗ ಇಬ್ಬರು ಮಕ್ಕಳು ಖಾಲಿ ಶೆಡ್‌ಗೆ ಹೋಗಿ ಆಟವಾಡುತ್ತಿದ್ದರು. ಆ ಸಂದರ್ಭದಲ್ಲಿ ಶೆಡ್‌ಗೆ ಬೆಂಕಿ ತಗುಲಿ ಮಕ್ಕಳು ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

'ಬೆಂಕಿಯಿಂದ ಮಕ್ಕಳು ಉಸಿರುಗಟ್ಟಿ ಮೃತಪಟ್ಟಿದ್ದಾರೆ. ಇಬ್ಬರು ಮಕ್ಕಳ ಮೈಮೇಲೆ ಸುಟ್ಟ ಗಾಯಗಳಿವೆ. ಒಂದು ಮಗು ಸ್ಥಳದಲ್ಲೇ ಮೃತಪಟ್ಟರೆ, ಮತ್ತೊಂದು ಮಗು ಆಸ್ಪತ್ರೆಯಲ್ಲಿ ಮೃತಪಟ್ಟಿದೆ' ಎಂದು ಪೊಲೀಸರು ಹೇಳಿದರು.

ಬೆಂಕಿ ಅವಘಡದ ಕುರಿತು ಸೋಮವಾರ ಮಧ್ಯಾಹ್ನ 12 ಗಂಟೆಯ ಸುಮಾರಿಗೆ ಮಾಹಿತಿ ಬಂದಿತ್ತು. ಸ್ಥಳಕ್ಕೆ ತಲುಪುವಷ್ಟರಲ್ಲಿ ಮಕ್ಕಳು ಮೃತರಾಗಿದ್ದರು. ಮೃತ ಮಕ್ಕಳ ಪೋಷಕರು, ರಾಯಚೂರು ಜಿಲ್ಲೆಯ ದೇವದುರ್ಗದವರು. ಕೂಲಿ ಕೆಲಸಕ್ಕಾಗಿ ನಾಲ್ಕು ತಿಂಗಳ ಹಿಂದೆ ನಗರಕ್ಕೆ ಬಂದಿದ್ದರು ಎಂದು ಪೊಲೀಸರು ಹೇಳಿದರು.

ಘಟನಾ ಸ್ಥಳಕ್ಕೆ ಸುಕೊ (ಸೀನ್ ಆಫ್ ಕ್ರೈಂ) ಸಿಬ್ಬಂದಿ ಹಾಗೂ ಬೆಸ್ಕಾಂ ಸಿಬ್ಬಂದಿ ಭೇಟಿ ಪರಿಶೀಲನೆ ನಡೆಸಿದರು. ಶೆಡ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಟ್ಟೆಗಳಿದ್ದವು. ಅವುಗಳು ಸಂಪೂರ್ಣ ಸುಟ್ಟು ಹೋಗಿವೆ. ಬೆಂಕಿ ಅವಘಡಕ್ಕೆ ಕಾರಣ ಪತ್ತೆಯಾಗಿಲ್ಲ. ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

ಕೊತ್ತನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೋಜಿನ ಯಾನ: ಬೈಕ್ ಸವಾರ ಸಾವು

ಬೆಂಗಳೂರು: ಸ್ನೇಹಿತರಿಬ್ಬರು ಬೈಕ್‌ನಲ್ಲಿ ಮೋಜಿನ ಯಾನ (ಜಾಲಿರೈಡ್) ಹೋಗುತ್ತಿದ್ದ ವೇಳೆ ನಿಯಂತ್ರಣ ತಪ್ಪಿ ರಸ್ತೆಗೆ ಉರುಳಿಬಿದ್ದು, ಸವಾರ ಮೃತಪಟ್ಟು, ಹಿಂಬದಿ ಸವಾರ ಗಂಭೀರವಾಗಿ ಗಾಯಗೊಂಡಿದ್ದಾರೆ.

ಬಾಣಸವಾಡಿ ಎಚ್‌ಆರ್‌ಬಿಆರ್ ಲೇಔಟ್ ನಿವಾಸಿ ಲಕ್ಷಯ್ ಕುಮಾರ್ (19) ಮೃತಪಟ್ಟ ಬೈಕ್ ಸವಾರ.

ಚಿಕ್ಕಜಾಲ ಸಂಚಾರ ಪೊಲೀಸ್ ಠಾಣೆಯ ವ್ಯಾಪ್ತಿಯಿಂದ ದೇವನಹಳ್ಳಿಯ ವಿಮಾನ ನಿಲ್ದಾಣದ ಕಡೆಗೆ ಸೋಮವಾರ ತಡರಾತ್ರಿ ಲಕ್ಷಯ್ ಅವರು ತಮ್ಮ ಸ್ನೇಹಿತನನ್ನು ಕರೆದುಕೊಂಡು ಮೋಜಿನ ಯಾನಕ್ಕೆ ಹೋಗುತ್ತಿದ್ದರು. ಬೆಂಗಳೂರು–ಬಳ್ಳಾರಿ ರಸ್ತೆಯ ವಿದ್ಯಾನಗರದ ಬಳಿ ಬೈಕ್ ನಿಯಂತ್ರಣ ತಪ್ಪಿ ರಸ್ತೆಗೆ ಉರುಳಿ ಬಿದ್ದಿತ್ತು. ಪರಿಣಾಮ ಲಕ್ಷಯ್ ಗಂಭೀರವಾಗಿ ಗಾಯಗೊಂಡಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಿಂಬದಿ ಸವಾರ ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.



ಮರಣೋತ್ತರ ಪರೀಕ್ಷೆಯ ಬಳಿಕ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಚಿಕ್ಕಜಾಲ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

579 ಮಂದಿ ವಿರುದ್ಧ ಪ್ರಕರಣ ದಾಖಲು

ಬೆಂಗಳೂರು: ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿದ ಸಂಚಾರ ಠಾಣೆಯ ಪೊಲೀಸರು, ತಪ್ಪಿತಸ್ಥ 579 ಚಾಲಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಮೇ 4ರಿಂದ 10ರವರೆಗೆ 53 ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ಈ ಕಾರ್ಯಾಚರಣೆ ವೇಳೆ ಮದ್ಯಪಾನ ಮಾಡಿ ವಾಹನ ಚಾಲನೆ ಹಾಗೂ ಅಪ್ರಾಪ್ತರಿಂದ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ.

ವಿವಿಧ ಮಾದರಿಯ ಒಟ್ಟು 45,272 ವಾಹನಗಳ ಪರಿಶೀಲನೆ ನಡೆಸಲಾಯಿತು. ಆ ಪೈಕಿ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿದ 579 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಯಿತು ಎಂದು ಸಂಚಾರ ಪೊಲೀಸರು ಹೇಳಿದರು. ಇನ್ನು ಅಪ್ರಾಪ್ತರ ವಾಹನ ಚಾಲನೆ ಸಂಬಂಧ 179 ಪ್ರಕರಣ ದಾಖಲಿಸಿಕೊಂಡು ₹1.80 ಲಕ್ಷ ದಂಡ ಸಂಗ್ರಹಿಸಲಾಗಿದೆ ಎಂದು ಸಂಚಾರ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದ್ದಿ,ವಿವರಕ್ಕೆ prajavani.netಗೆ ಭೇಟಿ ಮಾಡಿ

ವಜ್ರಮುನಿ ಜನ್ಮದಿನ: ಸಮವಸ್ತ್ರ ವಿತರಣೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆ, ರಂಗಭೂಮಿಯ ಏಳಿಗೆಗಾಗಿ ದುಡಿದ ಚಿತ್ರನಟ ವಜ್ರಮುನಿ ಅವರಿಂದ ಶ್ರೀಮಂತ ಪರಂಪರೆ ಉಳಿದು ಬೆಳೆಯಲು ಸಾಧ್ಯವಾಗಿದೆ ಎಂದು ಶಾಸಕ ಪ್ರಿಯಕೃಷ್ಣ ಹೇಳಿದರು.

ನಟ ವಜ್ರಮುನಿ ಅವರ 82ನೇ ಜನ್ಮದಿನದ ಅಂಗವಾಗಿ ನಾಗರಬಾವಿ ಸರ್ಕಲ್‌ನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಆಟೊ ಚಾಲಕರಿಗೆ ಸಮವಸ್ತ್ರ ವಿತರಣೆ, ಅನ್ನದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸಿನಿಮಾದಲ್ಲಿ ವಿಭಿನ್ನ ಪಾತ್ರಗಳಲ್ಲಿ ಅಭಿನಯಿಸಿ, ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾಗಿದ್ದರು. ನೊಂದವರು ಹಾಗೂ ಬಡವರಿಗೆ ನೆರವಾಗುತ್ತಿದ್ದರು ಎಂದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ನಾಗರಬಾವಿ ಎಂ.ಮಾರುತಿ ಮಾತನಾಡಿ, ಸಾಹಿತ್ಯ, ರಂಗ ಪರಂಪರೆ, ಗ್ರಾಮೀಣ ಕಲೆ, ಕನ್ನಡ ಭಾಷೆ ಅಭಿವೃದ್ಧಿಗಾಗಿ ಹೋರಾಟ ನಡೆಸಿದ ವಜ್ರಮುನಿ ಅವರು ಕನ್ನಡದ ಹೃದಯವಂತ ನಟ ಎಂದು ಬಣ್ಣಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಎಂ.ಭೈರಪ್ಪ, ಖಜಾಂಚಿ ಆರ್. ನಾಗರಾಜು ಇದ್ದರು.



ಚಿತ್ರನಟ ವಜ್ರಮುನಿ ಅವರ ಜನ್ಮದಿನದ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಾಸಕ ಪ್ರಿಯಕೃಷ್ಣ ಅವರು ಆಟೊ ಚಾಲಕರಿಗೆ ಸಮವಸ್ತ್ರಗಳನ್ನು ವಿತರಿಸಿದರು

'ಚಿದಾನಂದ ಪ್ರಶಸ್ತಿ'ಗೆ ಲಕ್ಷ್ಮಣ ತೆಲಗಾವಿ ಆಯ್ಕೆ



ಬೆಂಗಳೂರು: ನಗರದ ಚಿದಾನಂದ ಪ್ರಶಸ್ತಿ ಪ್ರದಾನ ಸಮಿತಿ ನೀಡುವ 2026ನೇ ಸಾಲಿನ 'ಚಿದಾನಂದ ಪ್ರಶಸ್ತಿ'ಗೆ ಸಂಶೋಧಕ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಲಕ್ಷ್ಮಣ ತೆಲಗಾವಿ ಆಯ್ಕೆ ಆಗಿದ್ದಾರೆ.

ಪ್ರಶಸ್ತಿಯು ₹10 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ.

33 ವರ್ಷಗಳಿಂದ ಪ್ರತಿವರ್ಷ ಒಬ್ಬ ಸಂಶೋಧಕರನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತಿದೆ ಎಂದು ಸಮಿತಿಯ ಕಾರ್ಯದರ್ಶಿ ಎಸ್.ಎಲ್. ಶ್ರೀನಿವಾಸಮೂರ್ತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಧಿರನ್ ಹ್ಯಾಟ್ರಿಕ್ ಆರ್.ಟಿ.ನಗರ ಜಯಭೇರಿ

ಬೆಂಗಳೂರು: ಅಧಿರನ್ ಅವರ ಹ್ಯಾಟ್ರಿಕ್ ಗೋಲುಗಳ ಬಲದಿಂದ ಆರ್.ಟಿ.ನಗರ ತಂಡವು ಸೋಮವಾರ ಆರಂಭಗೊಂಡ ಕೆಎಸ್‌ಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ (ಉತ್ತರ ವಲಯ) ಪಂದ್ಯದಲ್ಲಿ 4–1ರಿಂದ ಬೆಂಗಳೂರು ಉತ್ತರ ತಂಡವನ್ನು ಸೋಲಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಎ ಗುಂಪಿನ ಪಂದ್ಯದಲ್ಲಿ ಆರ್.ಟಿ.ನಗರ ತಂಡದ ಅಧಿರನ್ (4ನೇ, 5ನೇ ಹಾಗೂ 10ನೇ ನಿ.) ಹ್ಯಾಟ್ರಿಕ್ ಸಾಧಿಸಿದರೆ, ಶೆಬಿನ್ (50ನೇ ನಿ.) ಒಂದು ಗೋಲು ಗಳಿಸಿದರು. ಬೆಂಗಳೂರು ಉತ್ತರ ತಂಡದ ಹಕೀಂ ಸಿ.ಎಚ್. (42ನೇ ನಿ.) ಏಕೈಕ ಗೋಲು ದಾಖಲಿಸಿದರು.

ಸಂಘಟಿತ ಆಟವಾಡಿದ ಸಮಂತ್ ಸ್ಪೋರ್ಟ್ಸ್ ಅಕಾಡೆಮಿ ತಂಡವು ಎ ಗುಂಪಿನ ಇನ್ನೊಂದು ಪಂದ್ಯದಲ್ಲಿ 5–0ಯಿಂದ ಜಿಆರ್‌ಕೆ ಯೂತ್ಸ್ ತಂಡವನ್ನು ಏಕಪಕ್ಷೀಯವಾಗಿ ಮಣಿಸಿತು. ಸಮಂತ್ ತಂಡದ ಕವಿಗುಹನಾಳ್ ಎಲ್ (25ನೇ ಹಾಗೂ 40ನೇ ನಿ.) ಅವಳಿ ಗೋಲು ಹೊಡೆದರೆ, ಶ್ರೀಕೃಷ್ಣನ್ ಕೆ. (12ನೇ ನಿ.), ರಾಘವಾಲ್ (37ನೇ ನಿ.) ಹಾಗೂ ಅಮಲ್‌ದೇವ್ ಕೆ.ಪಿ. (50ನೇ ನಿ.) ತಲಾ ಒಂದು ಗೋಲು ಹೊಡೆದರು. ಬೆಂಗಳೂರು ಬಾಲಾಹರ್ಕ ಎಫ್‌ಸಿ ಹಾಗೂ ರಾಮನ್ ಸ್ಪೋರ್ಟ್ಸ್ ಅಕಾಡೆಮಿ ನಡುವಣ ಪಂದ್ಯ ಗೋಲು ರಹಿತ ಡ್ರಾ ಆಯಿತು.

ಬಿ ಗುಂಪಿನ ಪಂದ್ಯಗಳಲ್ಲಿ ಆಲ್ಕೆಮಿ ಇಂಟರ್‌ನ್ಯಾಷನಲ್ ಫುಟ್‌ಬಾಲ್ ಅಸೋಸಿಯೇಶನ್ 6–0ಯಿಂದ ಸಾಂಬಾ ಎಫ್‌ಸಿ ವಿರುದ್ಧ ಹಾಗೂ ಚಿತ್ರದುರ್ಗ ಎಫ್‌ಸಿ ತಂಡವು 2–1ರಿಂದ ಗೋಪಾಲನ್ ಎಫ್‌ಸಿ ವಿರುದ್ಧ ಗೆದ್ದವು.

ಸ್ಟೇಡಿಯಂ ಎಫ್‌ಸಿ ಹಾಗೂ ಹಾಕ್ಸ್ ಯುನೈಟೆಡ್ ಸ್ಪೋರ್ಟ್ಸ್ ಫುಟ್‌ಬಾಲ್ ಅಸೋಸಿಯೇಶನ್ ನಡುವಣ ಪಂದ್ಯ 2–2 ಡ್ರಾ ಆಯಿತು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

PUBLIC NOTICE

PUBLIC NOTICE

The general public is hereby informed that our client **Smt. Amrutha Srinidhi** is intending to purchase the below mentioned Property from Smt. Shobha W/o Late D Chikkaveerappa being owner of the property.

Any entity/person/persons/ having or claiming any right, title, claims, benefits, demands, interests or any objections etc with respect to the Schedule Property, he/She/they may contact the undersigned with documentary proof substantiating his/her/their objections/claims/ disputes within 03 days from the date of publication of this notice , falling our client will proceed to complete the sale transaction with the above mentioned owner as if there are no objections/claims/ dispute with respect to the Schedule Property and thereafter no objections/claims/dispute will be entertained.

Schedule Property

All that piece and parcel of Property bearing Site No.6, formed in Survey No.81/3, having Khata No.325/81/3/6, PID No.006-W0387-108 situated at Nagavara Village, Kasaba Hobli, Bangalore North Taluk, presently coming under Ward No.6 – Thanisandra, measuring East to West 37.5 Feet and North to South (70+52)/2 Feet, totally measuring 2287 Sq. Ft., **East by :** 15 Feet Road, **West by:** N A Narayanaswamy's House, **North by:** Private Property, **South by:** Main Road of Yelahanka.

AMRUTHA SRINIDHI
No 10/C, Vani Vilas Road, Next to SSVM School, VV Puram, Phone No: 9900606660

ADVOCATE
M/s Rays Legal having office at #3824, Ground Floor, 30th Cross, 25th Main, Banashankari 2nd Stage, Bengaluru - 560070

AUTOMOTIVE

Four Wheelers Selling

Tata

TATA HEXA 2017 Model, White. Done 56,000 kms. Three new tyres are in good condition. Single owner, excellent condition. Price expected 8.30 lakhs. No loan, insurance paid. Immediate settlement. No Brokers. Negotiable to some extent. Contact: 9845885199.

BUSINESS

Business Offers

Business For Sale

USED AS good as new-weld mech machine-4nos, wire straightening & cutting machine-16 nos. interested contact on 98866 12942 & 88802 70330 mail ID is: usedmachines2026@gmail.com

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Lost

ದಾಖಲೆ ಕಳೆದುಹೋಗಿದೆ

ನಾನು, ಹರೀಶ ಜಿ, ನಂ. 217, 4ನೇ ಮೇನ್, ಅಗ್ರಹಾರ ಲೇಔಟ್, ಯಲಹಂಕ ಬೆಂಗಳೂರು–560064 ರಲ್ಲಿ ವಾಸಿಸುತ್ತಿದ್ದೇನೆ, ಮೂಲ ಮಾರಾಟ ಪತ್ರ ದಾಖಲೆ / ಗುರುತಿನ ಸಂಖ್ಯೆ **BNS -1-1129-2022-23**, ಬೆಂಗಳೂರು ಪೂರ್ವ, ಬಿದರಹಳ್ಳಿ ಹೋಬಳಿ, ಕಣ್ಣೂರು ಗ್ರಾಮ, ಸರ್ವೆ ನಂ. 181/5, ಹೊಸ ಸರ್ವೆ ನಂ. 181/6, ಬಾಣಸವಾಡಿ ಉಪ ನೋಂದಣಿ ಕಚೇರಿ, ಬೆಂಗಳೂರು–43ನಲ್ಲಿ ನೋಂದಣಿ ಯಾಗಿರುವ ದಾಖಲೆಗಳು ಕಳೆದು ಕೊಂಡಿದ್ದೇನೆ ಈ ಬಗ್ಗೆ ನಾನು ಪೊಲೀಸ್ ಠಾಣೆಗೆ ದೂರು ನೀಡಿದ್ದೇನೆ (ವರದಿ ಸಂಖ್ಯೆ. 2157099 ಅನ್ನು ದಿನಾಂಕ 15.04.2026 ರಂದು) ನಿವಾಸವನ್ನು ಬದಲಾಯಿಸುವಾಗ ಕಳೆದುಹೋಗಿದೆ. ಯಾರಿಗಾದರೂ ಸಿಕ್ಕಲ್ಲಿ ದಯವಿಟ್ಟು ಸಂಪರ್ಕಿಸಿ: **9880429999.**

DOCUMENTS LOST

I, **Manjunatha G,** S/o. Govinda Swamy. B, N. 10/13, 2nd Cross, V,S Garden, J J R Nagar, Bangalore - 560026, have Lost Sale Deed, Registered As **No.1832, Year - 1980-81, Pages. - 23-96, Book No. 1, Volume - 678, Dated - 30-07-1980,** in the Office of Sub Registrar, Srirampura. Bangalore, a complaint is lodged with J J R Nagar Police Station Bangalore, if anyone founds the above please contact 89704 51660

Change of Name

CHANGE OF NAME

I, **ASWATH NARAYAN** S/o P R Kandaswamy, residing at No. 68, 2nd Cross, Venkateshwara Layout Herohalli, Bengaluru-560091, have changed my name to **ASHWATH NARAYAN** vide affidavit dated 06-05-2026 before notary Lakshmaiah Bengaluru. Henceforth I shall be called **ASHWATH NARAYAN** only

ANNOUNCEMENT

I, **CHITTY PRASAD N** S/o **Nagaraj N,** R/at No.27, Thippanna Layout, 2nd Cross, Kariyanapalya, VTC: Lingarajapuram, PO: St. Thomas Town, Bengaluru-560 084, declare that my father's name is wrongly mentioned in some of my documents as NAGARAJ M. instead of correct name **NAGARAJ N.** vide affidavit dated 08-05-2026 before notary Bhagya Kumari N, Bengaluru.

CHANGE OF NAME

I, **SHRUTHI SRINIVAS RAO,** residing at # 297, Srinivasa Nilaya, 11th Cross, 8th Main, Vidyapeeta, Opp to CKA Police Station, Bengaluru-560085 have changed my name to **SHRRUTI RAO** vide affidavit dated 27-04-2026 before notary Ganesh Gowda M.V., Bengaluru. Henceforth I shall be called **SHRRUTI RAO** only

I, JNANAVI GIREESHA #5-8-1, 1st Main, 7th Cross, Govindarajnagar, Vijaynagar, Bengaluru-40, have changed my name to JNANAVI GIRISH Vide affidavit dated- 11/05/2026

CHANGE OF NAME

I, **PARAMESHWAR**, residing at No. 4, 5, Zalaki village and Post Indi Taluk. Bijapur District (Vijayapur), have changed my name to **PARAMESHWAR YASHWANT WALIKAR** vide affidavit dated 11-05-2026 sworn before notary A.M Jakanur, Vijayapur. Henceforth I have Called of as **PARAMESHWAR YASHWANT WALIKAR** only

I, ANITHA Ashwath W/o K. Ashwath aged about 53 Years resident of Raghavendra Nivasa, 3rd Cross, Palasandra layout, Kolar 563101, Have changed my name to Anitha G vide affidavit dated 29.04.2026 before Notary H. Krishne Gowda, Kolar. Henceforth I shall be called as Anitha G only.

PUBLIC NOTICE

The General Public is hereby informed that, our clients intends to PURCHASE the immovable property, which is more fully described in the Schedule Property hereunder from present owner i.e., **Mr. SURAAG KOLLUR NARAYANASWAMY @ K.N SURAAG and Mr. K.S. NARAYANASWAMY,** both are Residing at No.133, 3rd Cross, 3rd Main, 4th Phase, Dollars Colony, J.P. Nagar, Bangalore - 560 078

Any persons, financial institutions having any sort of claim / rights / interest / charge on the below said property or any objections for the said sale of the property may file their objections in writing along with supporting documents, addressed to the undersigned within 07 days from the date of publication of this notice, failing which, it shall be construed that there are no claims of any sort over the below said property and our clients shall be advised to proceed with the proposed transaction. Any claims thereafter shall not be entertained.

SCHEDULE PROPERTY

All that piece and parcel of lands situated at situated at Chikkamaralawadi Village, Maralawadi Hobli, Harohalli Taluk, Bangalore South [earlier Kanakapura Taluk, Ramanagara District], Bangalore, totally admeasuring **4 Acres 06.08 Guntas** and bounded on:

Sl. Nos	Survey Nos.	Extents		Boundaries
		Acres	Guntas	
1	251/2	00	09	East By : land in Survey No.251/7; West By : land in Survey No.241/1 & 249/14; North By : land in Survey No.251/1; South By : land in Survey No.251/3.
2	251/3	00	06	East By : land in Survey No.251/7; West By : land in Survey No.241/1 & 241/2; North By : land in Survey No.251/2; South By : land in Survey No.251/4,
3.	251/6	00	24	East By : land in Survey No.251/7; West By : land in Survey No.251/5; North By : Nakasha Road; South By : land in Survey No.258/10.
4.	251/7	02	05	East By : land in Survey No.253, 252/1 & Kenkeripalya Village, 258/1; West By : land in Survey No.251/1, 251/2, 251/3, 251/4 & 251/6; North By : land in Survey No.254/4; South By : land in Survey No.258/1 & 258/10.
5.	253/2 [Old Sy.No. 253]	00	05.08	East by : Kenkeripalya Road; West by : land in Survey No.251/7 & 252/1; North by : land in Survey No.254/4 & 253/3; South by : land in Survey Nos.252/2,252/3,252/4;
6.	253/5 [Old Sy.No. 253]	00	04.12	East by : Kenkeripalya Road; West by : land in Survey No.251/7 & 252/1; North by : land in Survey No.254/4 & 253/3; South by : land in Survey Nos.252/2,252/3,252/4;
7.	241/3	00	22	East By : land in Survey No.251/4; West By : land in Survey No.242/1; North By : land in Survey No.241/2; South By : land in Survey No.241/4
8.	253/4 [Old Sy.No. 253/1, earlier No. 253	00	10.04	East by : Kenkeripalya Road; West by : land in Survey No.251/7 & 252/1; North by : land in Survey No.254/4 & 253/3; South by : land in Survey Nos.252/2,252/3,252/4;

Sd/- **LAW PARK ASSOCIATES,** Advocate
6th Sector, HSR Layout, Bangalore-560 102.
helpdesk@lawpark.in
+91 80 41715959, +91 98456 65379

PUBLIC NOTICE

Notice is hereby given to General Public at large that my client have negotiated and decided to purchase the Property described in Schedule below from its lawful owners by names Mr.Aarav Deepak S/o Deepak Ramakrishna & Mrs.Megha.B.R, and Kumari Anhiti Deepak D/o S/o Deepak Ramakrishna & Mrs.Megha.B.R, since minor, she is represented by her mother and natural Guardian Mrs.Megha.B.R., who have assured my client that they are in possession of the said properties. They have further assured that they have a clear & marketable title and the said properties are free from all encumbrances & they have the full rights to sell the said properties.

We are investigating the title of the owner(s) of the captioned Schedule property. Any person having any right, title, interest, claim or demand whatsoever in respect of the said property by way of sale, inheritance, bequest, exchange, gift, possession, trust, mortgage, lease, license, lien, charge, tenancy, lis pendency, development rights, maintenance, easement or under any agreement of Sale or Power of Attorney, option, right of first refusal or pre-emption whatsoever or otherwise howsoever, is hereby required to make the same known in writing with documentary proof thereof, to the undersigned at the address mentioned herein below within 7 days from the date of the publication of this notice, failing which the sale transaction shall be completed without any reference to such right, title, interest, claim or demand or else any such claims by anyone shall not be considered and shall be deemed to have been waived and/or abandoned. Claims without documentary proofs and/ or objections directly published in Newspaper shall not be considered as valid.

SCHEDULE OF THE PROPERTY

Schedule : All that piece and parcel of the Property bearing Old No.4, New No.75, presently as pre-computerised E-Aasthi in Form-A the property bearing No.4-75, EPID No.1935341822, situated at K.R.Road, Basavangudi, Bengaluru, presently within the limits of BBMP, Measuring East to West 110Feet and North to South 60 Feet and Bounded on the:- **East by :** Sri.Krishnarajendra Main Road, **West by** : Conservancy, **North by** : D.C. Subbarayappa's Property, **South by** : Property Bearing No.74, in Occupation of Basavanagudi Branch of State. Bank of Mysore (Now SBI).

Sd/- **Manu. N.P.,** Advocate
Office, No.9, Second Floor, Lingaraju Complex, Above Mr. DIY, Gandhi Bazaar Main Road, Basavanagudi, Bengaluru - 560004.
Cell 9036418257
Date: 11-05-2026 Place: Bengaluru

ಪುರಸಭೆ ಕಾರ್ಯಾಲಯ, ಹುಣಸಮಾರನಹಳ್ಳಿ

ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562157 ದೂರವಾಣಿ: 080–23901864
ಇ–ಮೇಲ್: itstaff_ulb_hmhalli@gmail.com ವೆಬ್‌ಸೈಟ್: www.hunasamaranahallitown.mrc.gov.in

ಸಂಖ್ಯೆ: ಹು.ಪು/ತಾ.ಶಾ/ಸಿ.ಆರ್/02/2026–27 ದಿನಾಂಕ: 11–05–2026

ಪೂರ್ಣಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಹುಣಸಮಾರನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿ ಪುರಸಭೆ ನಿಧಿಯಡಿ ಕಾಮಗಾರಿ ನಿರ್ವಹಿಸಲು ಹಾಗೂ ಇ–ಹರಾಜುವಿನಲ್ಲಿ ಭಾಗವಹಿಸಲು ನೊಂದಾಯಿತ ಅರ್ಹ ದರ್ಜೆ ಏಜನ್ಸಿದಾರರು, ಲೋಕೋಪಯೋಗಿ ಇಲಾಖೆ ಹಾಗೂ ವಿದ್ಯುತ್ ಪರಿವೀಕ್ಷಣಾ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಮೊಹರಾದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

–:ಕಾಮಗಾರಿಗಳ ವಿವರ:–

ಕ್ರ.ಸಂ.	ಇಂಡೆಂಟ್ ಸಂಖ್ಯೆಗಳು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ವರ್ಗ	ಯೋಜನೆ
1.	DMA/2026-27/WS/WORK_INDENT57390	19.50	ಸಾಮಾನ್ಯ	ಪುರಸಭೆ ನಿಧಿ
2.	DMA/2026-27/WS/WORK_INDENT57394	20.60	ಸಾಮಾನ್ಯ	ಪುರಸಭೆ ನಿಧಿ
3.	DMA/2026-27/WS/WORK_INDENT57395	18.40	ಸಾಮಾನ್ಯ	ಪುರಸಭೆ ನಿಧಿ
4.	DMA/2025-26/IND6130	8.00	ಸಾಮಾನ್ಯ	ಪುರಸಭೆ ನಿಧಿ
5.	DMA/2025-26/SE6888/CALL-3	13.20	ಸಾಮಾನ್ಯ	ಪುರಸಭೆ ನಿಧಿ

ಟೆಂಡರ್ ಕಾಲಾವಧಿ: ಆಕ್ಷೇಪಣೆ/ಮಾಹಿತಿಯನ್ನು ಸಲ್ಲಿಸಲು ದಿನಾಂಕ: 26–05–2026 ಸಂಜೆ 5.00 ಗಂಟೆ ವರೆಗೆ ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 27–05–2026 ಸಂಜೆ 5.00 ಗಂಟೆ ವರೆಗೆ. ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 29–05–2026 ಬೆಳಿಗ್ಗೆ 10.00 ಗಂಟೆಗೆ. ಆರ್ಥಿಕ ಬಿಡ್ ನ್ನು ತೆರೆಯುವ ದಿನಾಂಕ: 01–06–2026 ರಂದು ಬೆಳಿಗ್ಗೆ 11.00 ಗಂಟೆ ನಂತರ.

–:ಇ–ಹರಾಜು ವಿವರ:–

ಕ್ರ.ಸಂ.	ಇಂಡೆಂಟ್ ಸಂಖ್ಯೆ	ನಿಗಧಿಪಡಿಸಿರುವ ಕನಿಷ್ಠ ದರ ರೂ. ಗಳಲ್ಲಿ	ವರ್ಗ
1.	DMA/2026-27/AUCTION6652	ಕೆ.ಪಿ.ಪಿ ಪೋರ್ಟಲ್‌ನಲ್ಲಿರುವಂತೆ	ಸಾಮಾನ್ಯ

ಇ–ಹರಾಜುವಿನ ಕಾಲಾವಧಿ:– (1) ಆಕ್ಷೇಪಣೆ/ಮಾಹಿತಿಯನ್ನು ಸಲ್ಲಿಸಲು ದಿನಾಂಕ: 26–05–2026 ಸಂಜೆ 5.00 ಗಂಟೆಯವರೆಗೆ. (2) ಇ–ಹರಾಜಿನಲ್ಲಿ ಭಾಗವಹಿಸಲು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 27–05–2026 ಸಂಜೆ 5.00 ಗಂಟೆ ವರೆಗೆ. (3) ಇ–ಹರಾಜು ಪ್ರಕ್ರಿಯೆ ದಿನಾಂಕ: 01–06–2026ರ ಬೆಳಿಗ್ಗೆ 10.00 ರಿಂದ ಸಂಜೆ 05.00 ಗಂಟೆ ವರೆಗೆ (ಡೆಲ್ಟಾ ಸಮಯ: 05 ನಿಮಿಷಗಳು). ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು ಮತ್ತು ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ/ಬದಲಾವಣೆಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್ https://kppp.karnataka.gov.in ನಲ್ಲಿ ಮಾತ್ರ ತಿಳಿಸಲಾಗುವುದು.


ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಹುಣಸಮಾರನಹಳ್ಳಿ
ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ಹುಣಸಮಾರನಹಳ್ಳಿ

DIPR/CP/SPAN/594/2026-27

ಪಾಲಿಕೆಗಳ ಚುನಾವಣೆ: ಮತ್ತೆ ಕಾಲಾವಕಾಶ ಕೋರಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮೂರು ತಿಂಗಳ ಸಮಯ ಕೇಳಿದ ಸರ್ಕಾರ, ಚುನಾವಣಾ ಆಯೋಗ
- ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿ ಮನವಿ



ನವದೆಹಲಿ: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ಪಾಲಿಕೆಗಳ ಚುನಾವಣೆಗಳನ್ನು ಮುಗಿಸಲು ಸೆಪ್ಟೆಂಬರ್ 30ರ ವರೆಗೆ ಸಮಯಾವಕಾಶ ನೀಡಬೇಕು ಎಂದು ಕರ್ನಾಟಕ ಸರ್ಕಾರ ಹಾಗೂ ರಾಜ್ಯ ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ ಅನ್ನು ಸೋಮವಾರ ಕೋರಿವೆ.

ರಾಜ್ಯ ಸರ್ಕಾರ ಮತ್ತು ರಾಜ್ಯ ಚುನಾವಣಾ ಆಯೋಗ ಸಲ್ಲಿಸಿದ ಎರಡು ಪ್ರತ್ಯೇಕ ಅರ್ಜಿಗಳಲ್ಲಿ, ರಾಜ್ಯ ಸಿಬ್ಬಂದಿ ಜನಗಣತಿ, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್), ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಮಂಡಳಿ ಪರೀಕ್ಷೆಗಳು ಇತ್ಯಾದಿಗಳಲ್ಲಿ ನಿರತರಾಗಿದ್ದಾರೆ. ಹೀಗಾಗಿ, ಜೂನ್ 30ರಿಂದ ಅನ್ವಯವಾಗುವಂತೆ ಹೆಚ್ಚುವರಿ ಮೂರು ತಿಂಗಳ ಸಮಯ ನೀಡಬೇಕು ಎಂದು ಮನವಿ ಮಾಡಿವೆ. ಜೂನ್ 30ರೊಳಗೆ ಚುನಾವಣೆಗಳನ್ನು ಪೂರ್ಣಗೊಳಿಸಲು ನಿರ್ದೇಶಿಸಿದ್ದ ಸುಪ್ರೀಂ ಕೋರ್ಟ್‌ನ ಜನವರಿ 12ರ ಆದೇಶವನ್ನು ಮಾರ್ಪಡಿಸುವಂತೆ ಕೋರಿವೆ.

ನ್ಯಾಯಾಲಯದ ನಿರ್ದೇಶನದಂತೆ ಚುನಾವಣೆಗಳನ್ನು ಪೂರ್ಣಗೊಳಿಸಲು ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಆಯೋಗವು ತನ್ನ ಅರ್ಜಿಯಲ್ಲಿ ತಿಳಿಸಿದೆ.

‘ಆದಾಗ್ಯೂ, ಕೇಂದ್ರ ಸರ್ಕಾರವು ಜನಗಣತಿಗೆ ಆದೇಶಿಸಿರುವುದರಿಂದ ರಾಜ್ಯ ಸರ್ಕಾರಿ ಅಧಿಕಾರಿಗಳು ವ್ಯಕ್ತಪಡಿಸಿದ ಕಳವಳಗಳು ಮೇಲ್ನೋಟಕ್ಕೆ ನಿಜವೆಂದು ತೋರುತ್ತವೆ. ಚುನಾವಣೆಗಳನ್ನು ನಡೆಸಲು ರಾಜ್ಯ ಚುನಾವಣಾ ಆಯೋಗಕ್ಕೆ ಸಹಾಯ ಮಾಡುವ ಜವಾಬ್ದಾರಿಗಳನ್ನು ಹೊಂದಿರುವ ಅಧಿಕಾರಿಗಳ ಸಂಪೂರ್ಣ ಸಮಯ ಮತ್ತು ಲಾಜಿಸ್ಟಿಕ್ಸ್ ಅನ್ನು ಎಸ್‌ಐಆರ್ ಆಕ್ರಮಿಸಿಕೊಂಡಿದೆ. ಆದ್ದರಿಂದ, ಚುನಾವಣೆಗಳನ್ನು ನಡೆಸುವಲ್ಲಿ ಕೋರಿದ ಸಮಯ ವಿಸ್ತರಣೆಯು ವಿಶ್ವಾಸಾರ್ಹವಾಗಿದೆ’ ಎಂದು ಆಯೋಗ ಹೇಳಿದೆ.

‘ರಾಜ್ಯ ಸರ್ಕಾರದ ಸಹಾಯದಿಂದ ಆಯೋಗವು ಚುನಾವಣೆಗಳನ್ನು ನಡೆಸುತ್ತದೆ. ಆದರೆ, ಜನಗಣತಿ, ಎಸ್‌ಐಆರ್ ಇತ್ಯಾದಿಗಳನ್ನು ನಡೆಸಲು ರಾಜ್ಯ ಸರ್ಕಾರವು ಮಾನವ ಸಂಪನ್ಮೂಲವನ್ನು ನಿಯೋಜಿಸಿದೆ. ಹೀಗಾಗಿ, ಅಗತ್ಯವಿರುವ ಮಾನವ ಸಂಪನ್ಮೂಲ ಮತ್ತು ಲಾಜಿಸ್ಟಿಕ್ಸ್ ರಾಜ್ಯ ಸರ್ಕಾರದಲ್ಲಿ ಲಭ್ಯವಿಲ್ಲದಿರಬಹುದು’ ಎಂದು ಆಯೋಗ ಅಭಿಪ್ರಾಯಪಟ್ಟಿದೆ.

ರಾಜ್ಯ ಸರ್ಕಾರದ ಬೆಂಬಲವಿಲ್ಲದೆ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಯಾವುದೇ ನಿಧಿ ಅಥವಾ ಸಿಬ್ಬಂದಿ ಇಲ್ಲ ಎಂದು ಆಯೋಗ ಈ ಹಿಂದೆ ಹೇಳಿತ್ತು.

ಚುನಾವಣಾ ಪ್ರಕ್ರಿಯೆಗೆ ಅಗತ್ಯವಾದ ಹಣವನ್ನು ಈಗಾಗಲೇ ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗಿದೆ. ಯಾವುದೇ ಹಣಕಾಸಿನ ಕೊರತೆಯಿಂದಾಗಿ ರಾಜ್ಯವು ಈ ವಿಸ್ತರಣೆ ಕೋರುತ್ತಿಲ್ಲ ಎಂದು ರಾಜ್ಯ ಸರ್ಕಾರ ತನ್ನ ಅರ್ಜಿಯಲ್ಲಿ ತಿಳಿಸಿದೆ.

‘ಬದಲಿಗೆ, ಸಂಪೂರ್ಣ ಆಡಳಿತಾತ್ಮಕ ಮತ್ತು ಕ್ಷೇತ್ರ ಮಟ್ಟದ ಸಿಬ್ಬಂದಿಯನ್ನು ಪ್ರಸ್ತುತ ಜನಗಣತಿ ಚಟುವಟಿಕೆಗಳು, ಎಸ್‌ಐಆರ್ ಮತ್ತು ಪರೀಕ್ಷೆಗಳನ್ನು ನಡೆಸಲು ನಿಯೋಜಿಸಲಾಗಿದೆ. ಸಿಬ್ಬಂದಿಯ ತೀವ್ರ ಕೊರತೆಯಿಂದಾಗಿ ಕಾಲಾವಕಾಶದ ವಿಸ್ತರಣೆ ಅತೀ ಅಗತ್ಯ’ ಎಂದು ಸರ್ಕಾರ ಹೇಳಿದೆ.

ಅಂತಿಮ ವಾರ್ಡ್ ಮೀಸಲಾತಿ ಅಧಿಸೂಚನೆಗಳನ್ನು ಪ್ರಕಟಿಸುವುದು ಸೇರಿದಂತೆ ತನ್ನ ಎಲ್ಲ ಜವಾಬ್ದಾರಿಗಳನ್ನು ಚುನಾವಣಾ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರದಂತೆ ಶ್ರದ್ಧೆಯಿಂದ ಪೂರ್ಣಗೊಳಿಸಲಾಗಿದೆ ಎಂದು ಸರ್ಕಾರ ಹೇಳಿದೆ.

‘ಹಣಕಾಸಿನ ಕೊರತೆ ಇಲ್ಲ’

ಜಿಬಿಎ ವ್ಯಾಪ್ತಿಯ ಐದು ಪಾಲಿಕೆಗಳಿಗೆ ಚುನಾವಣೆಗಳನ್ನು ನಡೆಸಲು ಹಣದ ಕೊರತೆಯಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ರಾಜ್ಯ ಸರ್ಕಾರವು 2026-27ನೇ ಸಾಲಿಗೆ ‘ರಾಜ್ಯಗಳಲ್ಲಿನ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳು’ ಎಂಬ ಶೀರ್ಷಿಕೆಯಡಿಯಲ್ಲಿ ₹150 ಕೋಟಿ ಹಂಚಿಕೆ ಮಾಡಿದೆ ಮತ್ತು ಜಿಬಿಎ ವ್ಯಾಪ್ತಿಯ ಐದು ಪಾಲಿಕೆಗಳಿಗೆ ಚುನಾವಣೆಗಳ ಸಿದ್ಧತೆಗಳನ್ನು ಮಾಡಲು ಮೊದಲ ಕಂತಾಗಿ ₹37.50 ಕೋಟಿ ಬಿಡುಗಡೆ ಮಾಡಲಾಗಿದೆ.

ಹೆಚ್ಚುವರಿಯಾಗಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರವು 2026-27ರ ಹಣಕಾಸು ವರ್ಷಕ್ಕೆ ತನ್ನ ಬಜೆಟ್‌ನಲ್ಲಿ ಚುನಾವಣಾ ಅನುದಾನವಾಗಿ ₹100 ಕೋಟಿ ಹಂಚಿಕೆ ಮಾಡಿದೆ ಎಂದು ಸರ್ಕಾರ ತಿಳಿಸಿದೆ. ಇದಲ್ಲದೆ, ಈ ಚುನಾವಣೆಗಳಿಗೆ ಪ್ರತ್ಯೇಕವಾಗಿ ಮತದಾರರ ಗುರುತಿನ ಚೀಟಿಗಳನ್ನು ಮುದ್ರಿಸಲು ರಾಜ್ಯ ಚುನಾವಣಾ ಆಯೋಗಕ್ಕೆ ಪ್ರಾಧಿಕಾರವು ಈಗಾಗಲೇ ₹25 ಕೋಟಿ ಬಿಡುಗಡೆ ಮಾಡಿದೆ ಎಂದೂ ಸರ್ಕಾರ ಮಾಹಿತಿ ನೀಡಿದೆ.

ನಿಲುವು ಬದಲಿಸಿದ ಆಯೋಗ

‘ಐದು ನಗರ ಪಾಲಿಕೆಗಳಿಗೆ ಜೂನ್ 14ರಿಂದ 24ರ ಅವಧಿಯಲ್ಲಿ ಚುನಾವಣೆ ನಡೆಸಲಾಗುವುದು. ಇನ್ನೊಂದು ವಾರದಲ್ಲಿ ದಿನಾಂಕ ಪ್ರಕಟಿಸಿ, ಅಧಿಸೂಚನೆ ಹೊರಡಿಸಲಾಗುವುದು ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಸಿ.ಎಸ್. ಸಂಗ್ರೇಶಿ ಕಳೆದ ಶುಕ್ರವಾರ ಹೇಳಿಕೆ ನೀಡಿದ್ದರು. ಮೂರೇ ದಿನಗಳಲ್ಲಿ ಆಯೋಗ ಮತ್ತೊಮ್ಮೆ ನಿಲುವು ಬದಲಿಸಿದೆ.

ಇದೇ 15ಕ್ಕೆ ಬೆಂಗಳೂರಿಗೆ ‘ಗ್ಯಾರಂಟಿ’: ಡಿಕೆಶಿ

ಬೆಂಗಳೂರು ನಗರಕ್ಕೆ ದೊಡ್ಡ ಗ್ಯಾರಂಟಿಗಳನ್ನು ನೀಡುವುದಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೋಮವಾರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಜತೆಗಿನ ಸಭೆಯ ನಂತರ ಅಧಿಕಾರಿಗಳನ್ನು ಕರೆದು ಚರ್ಚಿಸಲಾಗಿದೆ. ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಕೆಲ ಸೂಚನೆಗಳನ್ನು ನೀಡಲಾಗಿದೆ. ಮೇ 13ರಂದು ಬೆಂಗಳೂರಿನ ಜನರಿಗೆ ಅನುಕೂಲಕರವಾಗುವ ಗ್ಯಾರಂಟಿ ಯೋಜನೆಗಳನ್ನು ಪ್ರಕಟಿಸಲಾಗುವುದು’ ಎಂದರು.

ಪ್ರಯಾಣಿಕರಿಗೆ ದರ ಏರಿಕೆ ಬಿಸಿ

ಆಟೊ ಎಲ್‌ಪಿಜಿ ದರ ಹೆಚ್ಚಳ • ಕನಿಷ್ಠ ದರ ₹50ಕ್ಕೆ ಏರಿಸಲು ಚಾಲಕರ ಪಟ್ಟು

• ಕೆ.ಎಸ್.ಸುನಿಲ್

ಬೆಂಗಳೂರು: ಎಲ್‌ಪಿಜಿ ದರ ಏರಿಕೆ ಮಾಡಿರುವುದು ಆಟೊ ಚಾಲಕರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದ್ದು, ದರ ಹೆಚ್ಚಳ ಹೆಸರಿನಲ್ಲಿ ಪ್ರಯಾಣಿಕರಿಂದ ಹೆಚ್ಚುವರಿ ಹಣ ಸುಲಿಗೆ ಮಾಡಲಾಗುತ್ತಿದೆ.

ಯುದ್ಧದ ಪರಿಣಾಮ ಕಳೆದ ಕೆಲವು ದಿನಗಳಿಂದ ಎಲ್‌ಪಿಜಿ ಅಭಾವ ಉಂಟಾಗಿತ್ತು. ಗ್ಯಾಸ್ ತುಂಬಿಸಿಕೊಳ್ಳಲು ಚಾಲಕರು ಬಂಕ್‌ಗಳ ಮುಂದೆ ಗಂಟೆಗಟ್ಟಲೆ ಸರದಿ ಸಾಲಿನಲ್ಲಿ ನಿಂತು ಕಂಗಾಲಾಗಿದ್ದರು. ನಿತ್ಯದ ಸಂಪಾದನೆಯ ಸಮಯವನ್ನು ಸರತಿ ಸಾಲಿನಲ್ಲಿ ಕಳೆಯುವಂತಾಗಿತ್ತು.

ಈಗ ಕೇಂದ್ರ ಸರ್ಕಾರ ಎಲ್‌ಪಿಜಿ ದರವನ್ನು ಪ್ರತಿ ಲೀಟರ್‌ಗೆ ₹5.73 ಏರಿಕೆ ಮಾಡಿದೆ. ಪ್ರಸ್ತುತ ಎಲ್‌ಪಿಜಿ ಪ್ರತಿ ಲೀಟರ್‌ಗೆ ₹95.24 ಇದೆ. ಖಾಸಗಿ ಬಂಕ್‌ಗಳಲ್ಲಿ ಪ್ರತಿ ಲೀಟರ್‌ಗೆ ₹120 ರವರೆಗೂ ಇದೆ. ಒಂದೊಂದು ಖಾಸಗಿ ಬಂಕ್‌ನಲ್ಲಿ ಒಂದೊಂದು ಬೆಲೆಗೆ ಮಾರಾಟ ಮಾಡಲಾಗುತ್ತಿದೆ.

ದರ ಹೆಚ್ಚಳದಿಂದ ತತ್ತರಿಸಿ ಹೋಗಿರುವ ಆಟೊ ಚಾಲಕರು, ಅನಧಿಕೃತವಾಗಿ ಪ್ರಯಾಣಿಕರಿಂದ ದುಪ್ಪಟ್ಟು ಪ್ರಯಾಣ ದರ ವಸೂಲು ಮಾಡುತ್ತಿರುವ ಬಗ್ಗೆ ದೂರುಗಳು ಕೇಳಿ ಬಂದಿವೆ.

ದರ ಹೆಚ್ಚಳ ವಿರೋಧಿಸಿರುವ ಆಟೊ ಚಾಲಕರು, ಪ್ರಯಾಣ ದರ ಹೆಚ್ಚಿಸುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಿದ್ದಾರೆ. ಇದರಿಂದಾಗಿ ಆಟೊಗಳಲ್ಲಿ ಸಂಚರಿಸುವ ಲಕ್ಷಾಂತರ ಪ್ರಯಾಣಿಕರಿಗೆ ದರ ಏರಿಕೆಯ ಬಿಸಿ ತಟ್ಟಲಿದೆ.

ಸದ್ಯ, ನಗರದಲ್ಲಿ ಆಟೊ ಪ್ರಯಾಣದ ಕನಿಷ್ಠ ದರ (ಮೊದಲ 2 ಕಿಲೋ ಮೀಟರ್‌ಗೆ) ₹36 ನಿಗದಿಪಡಿಸಲಾಗಿದೆ. ನಂತರದ ಪ್ರತಿ ಕಿಲೋ ಮೀಟರ್‌ಗೆ ₹18 ಇದೆ. ಆದರೆ, ಈಗ ಎಲ್‌ಪಿಜಿ ಬೆಲೆ ಏರಿಕೆ ಆಗಿರುವುದರಿಂದ ಈ ದರದಲ್ಲಿ ಆಟೊ ಓಡಿಸಿದರೆ ಯಾವುದೇ ಲಾಭವಿಲ್ಲವೆಂದು ಕನಿಷ್ಠ ದರವನ್ನು ₹50ಕ್ಕೆ ಹಾಗೂ ನಂತರದ ಪ್ರತಿ ಕಿಲೋ ಮೀಟರ್‌ಗೆ ₹25ಕ್ಕೆ ಏರಿಸಬೇಕು ಎಂದು ವಿವಿಧ ಆಟೊ ಚಾಲಕರ ಸಂಘಟನೆಗಳು ಒತ್ತಾಯಿಸಿವೆ. ಆದರೆ, ದರ ಏರಿಕೆ ಬಗ್ಗೆ ಇನ್ನೂ ಅಂತಿಮ ತೀರ್ಮಾನವಾಗಿಲ್ಲ.

ಆಟೊ ಬಾಡಿಗೆಯಲ್ಲಿ ಮನೆಯ ಖರ್ಚು, ಮಕ್ಕಳ ಶಿಕ್ಷಣ, ಮನೆ ಬಾಡಿಗೆ, ದೈನಂದಿನ ಖರ್ಚು, ವಾಹನದ ನಿರ್ವಹಣೆ, ಇಎಂಐ ಹಾಗೂ ಇತರೆ ಖರ್ಚು, ವೆಚ್ಚ ಭರಿಸುವುದೇ ಸವಾಲಾಗಿದೆ ಎಂದು ಚಾಲಕರು ಆಕ್ರೋಶ ವ್ಯಕ್ತಪಡಿಸಿದರು.

‘ಆಟೊ ಓಡಿಸಿಕೊಂಡು ಹಲವು ವರ್ಷಗಳಿಂದ ಜೀವನ ಸಾಗಿಸುತ್ತಿದ್ದೇನೆ. ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ಇದರ ನಡುವೆ ಎಲ್‌ಪಿಜಿ ಅಭಾವ, ದರ ಏರಿಕೆ. ಅಲ್ಪ ಸ್ವಲ್ಪ ಹಣದಲ್ಲೇ ಕುಟುಂಬ ನಿರ್ವಹಣೆ ಮಾಡಬೇಕಾಗಿದೆ. ಕೂಡಲೇ ಎಲ್‌ಪಿಜಿ ದರ ಇಳಿಸಬೇಕು’ ಎಂದು ಚಾಲಕ ರವೀಶ್ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

‘ನಗರದಲ್ಲಿ 2.60 ಲಕ್ಷ ಆಟೊಗಳಿವೆ. ಈ ಪೈಕಿ 90 ಸಾವಿರ ಎಲ್‌ಪಿಜಿ ಬಳಸುವ ಆಟೊಗಳಾಗಿವೆ. ದಿನಕ್ಕೆ 12 ಗಂಟೆ ಆಟೊ ಓಡಿಸಿದರೆ ಲಾಭವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಆಟೊ ವ್ಯಾಪಾರವಿಲ್ಲದೆ ಜೀವನ ನಡೆಸುವುದೇ ಕಷ್ಟವಾಗಿದೆ. ಎಲ್‌ಪಿಜಿಯಿಂದ ಸಿಎನ್‌ಜಿಗೆ ಪರಿವರ್ತಿಸಿಕೊಳ್ಳಲು ಅನುಮತಿ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ. ದಟ್ಟಣೆ ಅವಧಿಯಾದ ಬೆಳಿಗ್ಗೆ ಮತ್ತು ಸಂಜೆ ಮಾತ್ರ ಕೆಲವು ಚಾಲಕರು ಹೆಚ್ಚು ಹಣ ಕೇಳುತ್ತಿದ್ದಾರೆ’ ಎಂದು ಆಟೊ ಚಾಲಕ ಬಾಬು ಹೇಳಿದರು.

‘ಕೆಲವರಿಗೆ ತಮ್ಮ ವಾಹನಗಳ ಸಾಲದ ಕಂತು ಕಟ್ಟಲು ಆಗುತ್ತಿಲ್ಲ. ಹೀಗಾಗಿ ಸಾಲ ನೀಡಿರುವ ಸಂಸ್ಥೆಗಳು ಆಟೊಗಳನ್ನು ಜಪ್ತಿ ಮಾಡುತ್ತಿವೆ. ಓಲಾ, ಊಬರ್, ರ್‍ಯಾಪಿಡೊ ಸಂಸ್ಥೆಗಳು ಪ್ರಯಾಣ ದರ ಹೆಚ್ಚಿಸಿದರೆ ಪ್ರಯಾಣಿಕರ ಸಂಖ್ಯೆ ಕ್ಷೀಣಿಸುವ ಭಯವಿದೆ. ಚಾಲಕರು ಕುಟುಂಬ ನಿರ್ವಹಣೆಗೂ ಪರದಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಎಲ್‌ಪಿಜಿ ದರ ಏರಿಕೆ ಮಾಡಲಾಗಿದೆ. ರಾಜ್ಯ ಸರ್ಕಾರ ತಕ್ಷಣ ಮಧ್ಯೆ ಪ್ರವೇಶಿಸಿ ದರ ಇಳಿಕೆ ಮಾಡಬೇಕು. ಇಲ್ಲವಾದರೆ ಪ್ರಯಾಣಿಕರಿಂದ ಅಧಿಕ ದರ ಪಡೆಯುವುದು ಅನಿವಾರ್ಯವಾಗಲಿದೆ’ ಎಂದು ಚಾಲಕರು ಹೇಳಿದರು.

ಮೀಟರ್ ದರ ಪರಿಷ್ಕರಿಸಿ: ‘ಅಗತ್ಯ ವಸ್ತುಗಳ ಬೆಲೆ ಏರಿಕೆ ಜತೆಗೆ ಎಲ್‌ಪಿಜಿ ದರ ಹೆಚ್ಚಿಸಲಾಗಿದೆ. ಇದರಿಂದ ಜೀವನ ನಡೆಸುವುದು ಕಷ್ಟ. ಬೆಲೆ ಏರಿಕೆಗೆ ತಕ್ಕಂತೆ ಮೀಟರ್ ದರವನ್ನು ಪರಿಷ್ಕರಿಸಬೇಕು. ಕನಿಷ್ಠ ದರ ₹36 ಇದ್ದರೂ ₹50 ನೀಡುವಂತೆ ಪ್ರಯಾಣಿಕರಿಗೆ ಮೊದಲೇ ಹೇಳುತ್ತೇವೆ. ಅಗತ್ಯವಿದ್ದವರು ಬರುತ್ತಾರೆ. ಈಗಾಗಲೇ ಆಟೊ ಚಾಲಕರ ಸಂಘದವರು ಕನಿಷ್ಠ ದರವನ್ನು ₹ 50ಕ್ಕೆ ಏರಿಸುವಂತೆ ಮನವಿ ಮಾಡಿದ್ದಾರೆ. ಇನ್ನೂ ತೀರ್ಮಾನವಾಗಿಲ್ಲ’ ಎಂದು ಆಟೊ ಚಾಲಕ ರಾಜೇಶ್ ಹೇಳಿದರು.


ಆಟೊದಲ್ಲಿ ತೆರಳಲು ಕಾಯುತ್ತಿರುವ ಪ್ರಯಾಣಿಕರು

ಅಧಿಕ ಹಣ ವಸೂಲಿ ಮಾಡುತ್ತಿಲ್ಲ..

‘ಎಲ್‌ಪಿಜಿ ದರ ಹೆಚ್ಚಳದಿಂದ ಆಟೊ ಚಾಲಕರು ಸಂಕಷ್ಟದಲ್ಲಿದ್ದಾರೆ. ಬಹುತೇಕರು ಓಲಾ, ಊಬರ್, ನಮ್ಮ ಯಾತ್ರಿಯಲ್ಲಿ ಬುಕ್ ಮಾಡಿಕೊಂಡು ಪ್ರಯಾಣಿಸುತ್ತಾರೆ. ಮೆಜೆಸ್ಟಿಕ್, ರೈಲು ನಿಲ್ದಾಣದ ಕಡೆ ಮೀಟರ್ ಮೇಲೆ ಹೆಚ್ಚುವರಿ ಹಣ ಕೇಳಬಹುದು. ಆದರೆ, ಯಾವ ಪ್ರಯಾಣಿಕರಿಗೂ ಬಲವಂತ ಮಾಡುವುದಿಲ್ಲ’ ಎಂದು ಬೆಂಗಳೂರು ಸಾರಥಿ ಸೇನೆ ಅಧ್ಯಕ್ಷ ರಾಮೇಗೌಡ ಹೇಳಿದರು.

‘ಸಿಲ್ಕ್ ಬೋರ್ಡ್‌ನಿಂದ ಬೆಳ್ಳಂದೂರಿಗೆ 4 ಕಿ.ಮೀ ಪ್ರಯಾಣಿಸಲು ಒಂದು ತಾಸು ಬೇಕು. ₹40–70 ಬಾಡಿಗೆ ತೆಗೆದುಕೊಳ್ಳುತ್ತೇವೆ. ಸಂಚಾರ ದಟ್ಟಣೆಯ ಕಾರಣಕ್ಕೆ ಚಾಲಕರಿಗೆ ₹100 ನಷ್ಟವಾಗುತ್ತದೆ. ಈ ನಷ್ಟವನ್ನು ಯಾರು ಭರಿಸಿಕೊಡುತ್ತಾರೆ’ ಎಂದು ಪ್ರಶ್ನಿಸಿದರು.

ಆಟೊ ಮಾಲೀಕರಿಗೆ ಹೊಡೆತ

‘ಬೈಕ್ ಟ್ಯಾಕ್ಸಿ ಬಂದ ಮೇಲೆ ಆಟೊ ಮಾಲೀಕರಿಗೆ ಹೊಡೆತ ಬಿದ್ದಿದೆ. ಇದರ ಜತೆಗೆ ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶವಿದೆ. ಎಲ್‌ಪಿಜಿ ದರ ಏರಿಕೆ ಆಗಿದೆ. ಆಟೊ ಚಾಲಕರು ಪ್ರಯಾಣಿಕರಿಂದ ಅಧಿಕ ಹಣ ಕೇಳಿದರೆ ಬೈಕ್ ಟ್ಯಾಕ್ಸಿಯಲ್ಲಿ ಹೋಗುತ್ತಾರೆ. ಯಾರೋ ಒಂದಿಬ್ಬರು ಕೇಳಿದರೆ ಎಲ್ಲಾ ಚಾಲಕರು ಹೆಚ್ಚು ಹಣ ತೆಗೆದುಕೊಳ್ಳುತ್ತಾರೆ ಎಂಬುದು ಸರಿಯಲ್ಲ’ ಎಂದು ಚಾಮರಾಜಪೇಟೆಯ ಆಟೊ ಚಾಲಕರಾದ ಪ್ರಭಾವತಿ ತಿಳಿಸಿದರು.

ಉಪನಗರ ರೈಲು ಯೋಜನೆ: ₹1,513.75 ಕೋಟಿ ವೆಚ್ಚ
153 ಬೋಗಿ ಪೂರೈಕೆಗೆ ಕಾರ್ಯಾದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಂಚಾರ ದಟ್ಟಣೆಗೆ ಮುಕ್ತಿ ನೀಡಲಿರುವ ಬಹುನಿರೀಕ್ಷಿತ ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಟಿಪಿ) ಕಾರಿಡಾರ್-2 ಮತ್ತು ಕಾರಿಡಾರ್-4ಕ್ಕೆ ಅಗತ್ಯವಿರುವ 153 ಹವಾನಿಯಂತ್ರಿತ ‘ಬ್ರಾಡ್-ಗೇಜ್ ಮೆಟ್ರೊ ಮಾದರಿಯ ಬೋಗಿ’ಗಳನ್ನು ಪೂರೈಸುವಂತೆ ಚೆನ್ನೈನ ಇಂಟಿಗ್ರಲ್ ಕೋಚ್ ಫ್ಯಾಕ್ಟರಿಗೆ (ಐಸಿಎಫ್) ಬಿ–ರೈಡ್ ಸಂಸ್ಥೆಯು ಅಧಿಕೃತವಾಗಿ ಕಾರ್ಯಾದೇಶ ನೀಡಿದೆ.

ಈ ಬೃಹತ್ ಕಾರ್ಯಾದೇಶದ ಒಟ್ಟು ಮೊತ್ತ ₹1,513.75 ಕೋಟಿಗಳಾಗಿದ್ದು, ಭವಿಷ್ಯದಲ್ಲಿ ಬೆಂಗಳೂರು ಹಾಗೂ ಸುತ್ತಮುತ್ತಲಿನ ಜನತೆಗೆ ಇದೊಂದು ಅತ್ಯಂತ ವಿಶ್ವಾಸಾರ್ಹ ಮತ್ತು ಸುಸ್ಥಿರ ಸಾರಿಗೆ ವ್ಯವಸ್ಥೆಯಾಗಿ ಹೊರಹೊಮ್ಮಲಿದೆ.

ಈ ಗುತ್ತಿಗೆ ಅನ್ವಯ, ಮುಂದಿನ 18 ತಿಂಗಳೊಳಗೆ ಐಸಿಎಫ್ ಸಂಸ್ಥೆ ಬೋಗಿಗಳ ಪೂರೈಕೆಯನ್ನು ಕಡ್ಡಾಯವಾಗಿ ಆರಂಭಿಸ ಬೇಕಿದೆ. ಕಾರಿಡಾರ್-2ರ ವ್ಯಾಪ್ತಿಗೆ ಬರುವ ಚಿಕ್ಕಬಾಣಾವರ-ಯಶವಂತಪುರ ಮಾರ್ಗವನ್ನು ನಿಗದಿತ ಸಮಯದಲ್ಲಿಯೇ ಸಾರ್ವಜನಿಕ ಸೇವೆಗೆ ಮುಕ್ತಗೊಳಿಸುವ ದೃಷ್ಟಿಯಿಂದ ಈ ಗಡುವು ವಿಧಿಸಲಾಗಿದೆ.

ಅಲ್ಲದೆ, ಡಿಸೆಂಬರ್‌ನಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪ್ರಧಾನಿ ಸೂಚಿಸಿದ್ದ ಕಾಲಮಿತಿಗೂ ಇದು ಪೂರಕವಾಗಿದೆ ಎಂದು ಬಿ–ರೈಡ್ ಸ್ಪಷ್ಟಪಡಿಸಿದೆ. ಶೀಘ್ರದಲ್ಲೇ ಉಭಯ ಸಂಸ್ಥೆಗಳ ನಡುವೆ ಅಧಿಕೃತ ಒಡಂಬಡಿಕೆಗೆ ಸಹಿ ಬೀಳಲಿದೆ.

ಐಸಿಎಫ್‌ಗೆ ನೀಡಿರುವ ಜವಾಬ್ದಾರಿ: ರೈಲು ಬೋಗಿಗಳ ವಿನ್ಯಾಸ ಮತ್ತು ಸಂಪೂರ್ಣ ಉತ್ಪಾದನೆ, ಗುಣಮಟ್ಟ ಪರಿಶೀಲನೆ, ಜೋಡಣೆ, ಪರೀಕ್ಷೆ ಹಾಗೂ ಕಾರ್ಯಾರಂಭ, ಆರ್‌ಡಿಎಸ್‌ಒನಿಂದ ಅಗತ್ಯವಿರುವ ಶಾಸನಬದ್ಧ ಅನುಮೋದನೆ ಪಡೆಯುವಿಕೆ, ಸಿಗ್ನಲಿಂಗ್, ವಿದ್ಯುತ್ ಪೂರೈಕೆ ಹಾಗೂ ಪ್ಲಾಟ್‌ಫಾರ್ಮ್ ಸ್ಕ್ರೀನ್ ಡೋರ್ ಗುತ್ತಿಗೆಗಳೊಂದಿಗೆ ಸುಗಮ ಸಮನ್ವಯ ಹಾಗೂ ಕಾರಿಡಾರ್‌ಗಳ ಯಶಸ್ವಿ ಕಾರ್ಯಾಚರಣೆಗೆ ಕಡ್ಡಾಯವಾಗಿರುವ ಆರ್‌ಎಎಂಎಸ್ (ವಿಶ್ವಾಸಾರ್ಹತೆ, ಲಭ್ಯತೆ, ನಿರ್ವಹಣೆ ಮತ್ತು ಸುರಕ್ಷತೆ) ಮಾನದಂಡ ಪಾಲನೆ ಜವಾಬ್ದಾರಿ ನೀಡಲಾಗಿದೆ.

ಸಂಚಾರ ದಟ್ಟಣೆ ತಗ್ಗಿಸಲು ನೆರವು: ‘ಐಸಿಎಫ್ ಜೊತೆಗಿನ ಈ ಪಾಲುದಾರಿಕೆಯ ಮೂಲಕ, ಕಾರಿಡಾರ್ 2 ಮತ್ತು 4ರ ಟ್ರ್ಯಾಕ್ ಮತ್ತು ವ್ಯವಸ್ಥೆಗಳ ಮೂಲಸೌಕರ್ಯ ಕಾಮಗಾರಿ ಪೂರ್ಣಗೊಳ್ಳುವಷ್ಟರಲ್ಲಿ, ಅಗತ್ಯವಾಗಿರುವ ರೈಲು ಬೋಗಿಗಳ ಲಭ್ಯತೆ ಖಚಿತಪಡಿಸಿಕೊಳ್ಳುತ್ತಿದ್ದೇವೆ. ಈ ಸಮನ್ವಯತೆಯು ನಾಗರಿಕರಿಗೆ ವಿಶ್ವ ದರ್ಜೆಯ ಉಪನಗರ ರೈಲು ಜಾಲವನ್ನು ವಿಳಂಬವಿಲ್ಲದೆ ತಲುಪಿಸಲು, ಸುಸ್ಥಿರ ನಗರ ಸಾರಿಗೆಯ ದೃಷ್ಟಿಕೋನವನ್ನು ಈಡೇರಿಸಲು ಹಾಗೂ ನಗರದ ಟ್ರಾಫಿಕ್ ಸಮಸ್ಯೆ ತಗ್ಗಿಸಲು ನೆರವಾಗಲಿದೆ’ ಎಂದು ಬಿ–ರೈಡ್ (ಕೆ–ರೈಡ್) ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣ್ ಸಿಂಗ್ ತಿಳಿಸಿದ್ದಾರೆ.

> **ಬೆಂಗಳೂರು ಉಪನಗರ ಸಾರಿಗೆ ಯೋಜನೆ ಕಾರ್ಯಗತಗೊಂಡರೆ ಸಂಚಾರ ದಟ್ಟಣೆ ಗಣನೀಯವಾಗಿ ತಗ್ಗಲಿದೆ. ನಿಗದಿತ ಸಮಯದಲ್ಲೇ ಸಾರ್ವಜನಿಕ ಸೇವೆಗೆ ಸಿಗುವಂತೆ ತ್ವರಿತ ಅನುಷ್ಠಾನಕ್ಕೆ ಗಮನ ಹರಿಸಬೇಕು**
> **ಎನ್.ಎಸ್.ಬೋಸರಾಜು,** ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ

‘ಎ.ಐ ತಂತ್ರಜ್ಞಾನ ಭಸ್ಮಾಸುರ ಆಗಬಾರದು’

ಬೆಂಗಳೂರು: ವೇಗವಾಗಿ ಬೆಳೆಯುತ್ತಿರುವ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನವು ಎಲ್ಲ ಕ್ಷೇತ್ರಗಳಲ್ಲಿ ಆಳವಾಗಿ ಬೇರೂರಿದ್ದು, ಭಸ್ಮಾಸುರನಂತೆ ಮಾನವ ಕುಲಕ್ಕೆ ಮಾರಕವಾಗಬಾರದು’ ಎಂದು ಸಿಎಸ್‌ಆರ್ ಫೋರ್ತ್ ಪ್ಯಾರಡೈಮ್ ಇನ್‌ಸ್ಟಿಟ್ಯೂಟ್‌ನ ನಿರ್ದೇಶಕ ಗೋಪಾಲ ಕೃಷ್ಣಪಾತ್ರ ಹೇಳಿದರು.

ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ ಅಂಗವಾಗಿ ಗಾರ್ಡನ್ ಸಿಟಿ ವಿಶ್ವವಿದ್ಯಾಲಯದಲ್ಲಿ ಡಾ.ಎ.ಪಿ.ಜಿ. ಅಬ್ದುಲ್ ಕಲಾಂ ಎಂಜಿನಿಯರಿಂಗ್ ಶಾಲೆಯು ಹಮ್ಮಿಕೊಂಡಿದ್ದ ‘ವಿಜ್ಞಾನ-35’ ಉಪನ್ಯಾಸದಲ್ಲಿ ಮಾತನಾಡಿದರು.

‘ಜೀವನದಲ್ಲಿ ಎ.ಐ ತಂತ್ರಜ್ಞಾನದ ಪ್ರಭಾವ ಹೆಚ್ಚುತ್ತಿದೆ. ಎಂಜಿನಿಯರ್‌ಗಳು, ಸಂಶೋಧಕರು ವಿಮರ್ಶಾತ್ಮಕ ಚಿಂತನೆ, ಹೊಣೆಗಾರಿಕೆ, ನಾವೀಣ್ಯತೆ ಮತ್ತು ಮಾಹಿತಿ ಆಧಾರಿತ ನಿರ್ಧಾರ ಕೈಗೊಳ್ಳುವ ಗುಣಬೆಳೆಸಿಕೊಳ್ಳಬೇಕು. ಭಾರತ ಜಾಗತಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಸ್ಪರ್ಧಾತ್ಮಕವಾಗಿ ಉಳಿಯಲು ತುರ್ತು ಪರಿಹರಿಸುವ ತಂತ್ರಗಾರಿಕೆ ಕೊರತೆ ಕುರಿತು ಗಮನ ಹರಿಸಬೇಕು’ ಎಂದರು.

ಕುಲಪತಿ ರಾಮಚಂದ್ರ ಗೌಡ, ಕುಲಸಚಿವರಾದ ಶೀಜಾ, ಶೈಕ್ಷಣಿಕ ವ್ಯವಹಾರಗಳ ಡೀನ್ ಬಿಜು ಧರ್ಮಪಾಲನ್, ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆಯ ಸಂಯೋಜಕಿ ಎಸ್.ಯಶೋದಮ್ಮ ಉಪಸ್ಥಿತರಿದ್ದರು.

ಉತ್ತರ ನಗರ ಪಾಲಿಕೆ: ಬೀದಿ ದೀಪ ನಿರ್ವಹಣೆಗೆ ಹೊಸ ಏಜೆನ್ಸಿ



ಬೆಂಗಳೂರು: ಸಾಂಪ್ರದಾಯಿಕವಾದ ಬೀದಿ ದೀಪಗಳನ್ನು ತೆರವುಗೊಳಿಸಿ ಎಲ್‌ಇಡಿ ಅಳವಡಿಸುವ ಹಾಗೂ ವಿದ್ಯುತ್ ಉಳಿತಾಯ ಕ್ರಮಗಳನ್ನು ಉತ್ತರ ನಗರ ಪಾಲಿಕೆ ಅನುಷ್ಠಾನಗೊಳಿಸಿದೆ.

ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ 34, 35 ಮತ್ತು 36 ಹೊರತುಪಡಿಸಿ ಎಲ್ಲ ವಾರ್ಡ್‌ಗಳಲ್ಲಿ ಹಾಲಿ ಇದ್ದ ಬೀದಿ ದೀಪಗಳ ನಿರ್ವಹಣಾ ಗುತ್ತಿಗೆಗಳನ್ನು ಹೊಸ ನಿರ್ವಹಣಾ ಏಜೆನ್ಸಿಗಳಿಗೆ ನೀಡಲಾಗಿದೆ.

ಬೀದಿ ದೀಪಗಳನ್ನು ಅಳವಡಿಸಿರುವ ಗುತ್ತಿಗೆದಾರರೇ ನಿರ್ವಹಿಸಲಿದ್ದು, ಸಾರ್ವಜನಿಕರು ಬೀದಿ ದೀಪಗಳಿಗೆ ಸಂಬಂಧಿಸಿದ ದೂರುಗಳನ್ನು ನೇರವಾಗಿ ಸಂಬಂಧಪಟ್ಟ ಏಜೆನ್ಸಿ ಹಾಗೂ ದೂರು ನಿರ್ವಾಹಕರನ್ನು ಸಂಪರ್ಕಿಸಿ ಸಲ್ಲಿಸಬಹುದಾಗಿದೆ ಎಂದು ಉತ್ತರ ನಗರ ಪಾಲಿಕೆಯ ಪ್ರಕಟಣೆ ತಿಳಿಸಿದೆ.

ದೂರು ಇದ್ದಲ್ಲಿ ಸಂಪರ್ಕಿಸಿ:
ಬ್ಯಾಟರಾಯನಪುರ ಹಾಗೂ ಯಲಹಂಕ ಕ್ಷೇತ್ರ ವಾರ್ಡ್: 1 ರಿಂದ 14 ದೂರು ನಿರ್ವಾಹಕ: ಕಾರ್ತಿಕ್ 9900405008
ಪುಲಕೇಶಿನಗರ, ಸರ್ವಜ್ಞನಗರ ಹಾಗೂ ಹೆಬ್ಬಾಳ ಕ್ಷೇತ್ರ ವಾರ್ಡ್: 61 ರಿಂದ 85 ದೂರು ನಿರ್ವಾಹಕರು: ಶಿವರಂಜಿನಿ/ ವಿದ್ಯಾ 7824015785 / 7824015781
ದಾಸರಹಳ್ಳಿ ಕ್ಷೇತ್ರ ವಾರ್ಡ್: 15 ರಿಂದ 19 ದೂರು ನಿರ್ವಾಹಕರು: ಮಂಜುಳಾ/ ರಂಗನಾಥ್ 8951567132/ 9611899159

‘ಜೆಪಿಎಲ್’ ಕ್ರಿಕೆಟ್ ಲೀಗ್ 15ರಿಂದ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಹುಟ್ಟುಹಬ್ಬ ಮತ್ತು ಜೆಡಿಎಸ್‌ನ ರಜತ ಮಹೋತ್ಸವ ಪ್ರಯುಕ್ತ ಮೇ 15 ರಿಂದ 17ರವರೆಗೆ (ಬೆಳಿಗ್ಗೆ 8ರಿಂದ ರಾತ್ರಿ 10ರವರೆಗೆ) ಬೆಂಗಳೂರಿನ ಮಾದಾವರ ನೈಸ್ ಗ್ರೌಂಡ್‌ನಲ್ಲಿ ಜೆಪಿಎಲ್–2026 (ಜನತಾದಳ ಪ್ರೀಮಿಯರ್ ಲೀಗ್) ಹಗಲು ಮತ್ತು ಹೊನಲು ಬೆಳಕಿನ ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ.

ಪಕ್ಷದ ಕಚೇರಿ ಜೆ.ಪಿ. ಭವನದಲ್ಲಿ ಸೋಮವಾರ ಜೆಪಿಎಲ್ ಕ್ರಿಕೆಟ್ ಪಂದ್ಯಾವಳಿಯ ಟ್ರೋಫಿ ಹಾಗೂ ಭಾಗವಹಿಸುವ ಎಲ್ಲ ತಂಡಗಳ ಲೋಗೊ ಮತ್ತು ಜೆರ್ಸಿಯನ್ನು ಬಿಡುಗಡೆಗೊಳಿಸಲಾಯಿತು. 15ರಂದು ಸಂಜೆ 5 ಗಂಟೆಗೆ ಕೇಂದ್ರ ಸಚಿವ ಎಚ್. ಡಿ. ಕುಮಾರಸ್ವಾಮಿ, ಜೆಡಿಎಸ್‌ನ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಪಂದ್ಯಾವಳಿ ಉದ್ಘಾಟಿಸಲಿದ್ದಾರೆ. ಮಾಜಿ ಪ್ರಧಾನಿ ಎಚ್. ಡಿ. ದೇವೇಗೌಡ ಭಾಗವಹಿಸಲಿದ್ದಾರೆ.

ವಿಜೇತ ತಂಡಕ್ಕೆ ₹5 ಲಕ್ಷ ನಗದು, ರನ್ನರ್ ಅಪ್ ತಂಡಕ್ಕೆ ₹2.5 ಲಕ್ಷ ನಗದು, ಮೂರನೇ ತಂಡಕ್ಕೆ ₹1 ಲಕ್ಷ ನಗದು ಬಹುಮಾನ ನೀಡಲಾಗುವುದು. ಆಟಗಾರರ ವಾಸ್ತವ್ಯಕ್ಕಾಗಿ ಕೊಠಡಿ ವ್ಯವಸ್ಥೆ ಮಾಡಲಾಗಿದೆ. ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆಯುವ ಎಲ್ಲಾ ಆಟಗಾರರಿಗೆ ಜೀನಿ ಸಂಸ್ಥೆಯಿಂದ ಕಿಟ್ ನೀಡಲಾಗುತ್ತದೆ.

ಕೋರ್ ಕಮಿಟಿ ಅಧ್ಯಕ್ಷ ಎಂ. ಕೃಷ್ಣಾರೆಡ್ಡಿ, ವಿಧಾನ ಪರಿಷತ್‌ನ ಮಾಜಿ ಸದಸ್ಯರಾದ ಎಚ್.ಎಂ. ರಮೇಶ್ ಗೌಡ, ಕೆ.ಎ. ತಿಪ್ಪೇಸ್ವಾಮಿ, ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ, ಪಕ್ಷದ ಸಾಮಾಜಿಕ ಜಾಲತಾಣ ವಿಭಾಗದ ಅಧ್ಯಕ್ಷ ಎಚ್.ಎಸ್. ಚಂದನ್, ಯುವ ಮುಖಂಡ ಯಲಹಂಕ ಪ್ರವೀಣ್ ಹಾಜರಿದ್ದರು.



ನಗರದ ಜೆ.ಪಿ. ಭವನದಲ್ಲಿ ಜೆಪಿಎಲ್ ಕ್ರಿಕೆಟ್ ಪಂದ್ಯಾವಳಿಯ ಟ್ರೋಫಿ ಹಾಗೂ ಭಾಗವಹಿಸುವ ಎಲ್ಲಾ ತಂಡಗಳ ಲೋಗೊ ಮತ್ತು ಜೆರ್ಸಿಯನ್ನು ಬಿಡುಗಡೆಗೊಳಿಸಲಾಯಿತು. ಎಂ. ಕೃಷ್ಣಾರೆಡ್ಡಿ, ಎಚ್.ಎಂ. ರಮೇಶ್ ಗೌಡ, ಕೆ.ಎ. ತಿಪ್ಪೇಸ್ವಾಮಿ, ಟಿ.ಎ. ಶರವಣ ಇದ್ದಾರೆ.

ನಗರದಲ್ಲಿ ಇಂದು

‘ಮಕ್ಕಳ ಹಕ್ಕುಗಳು ಹಾಗೂ ಮಕ್ಕಳ ಕಾನೂನುಗಳ ರಕ್ಷಣೆಯಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಪಾತ್ರ ಹಾಗೂ ಪೋಕ್ಸೊ ಕಾಯ್ದೆ ಕುರಿತು’ ಅರಿವು– ತರಬೇತಿ: ಉದ್ಘಾಟನೆ: ಜಿ.ಜಗದೀಶ್, ಅಧ್ಯಕ್ಷತೆ: ಬಿ. ರಮೇಶ್, ಉಪಸ್ಥಿತಿ: ಸಿ.ವಿ. ಸ್ನೇಹಾ, ನವೀನ್ ಜೋಸೆಫ್, ಲೀನಾ ಕಲ್ಲಮ್ಮನವರ್, ರೀತಿಕಾ ಸಿನ್ಹಾ, ಆಯೋಜನೆ: ಡಾ.ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿ.ವಿ, ಬೆಂಗಳೂರು ನಗರ ಜಿಲ್ಲಾಡಳಿತ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10.30

30ನೇ ವರ್ಷದ ಬೇಸಿಗೆ ಶಿಬಿರದ ಸಮಾರೋಪ: ಅತಿಥಿಗಳು: ಎಂ.ಆರ್. ಶ್ರೀನಿವಾಸ್, ಶ್ರೀನಿವಾಸ್, ಜಿ.ಎಲ್. ಪೂರ್ಣಿಮಾ, ಅವಿನಾಶ ರತ್ನಾಕರ ಶೆಟ್ಟಿ, ‘ಕೃಷ್ಣ ತುಲಾಭಾರ’ ಬೊಂಬೆಯಾಟ: ರಂಗಪುತ್ಥಳಿ ಬೊಂಬೆಯಾಟದ ಕಲಾವಿದರಿಂದ, ಆಯೋಜನೆ: ಎ.ಜೀಸ್ ಕಲಾಶ್ರೀ ಪಬ್ಲಿಕ್ ಚಾರಿಟಬಲ್ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 4ರಿಂದ

ಭರತನಾಟ್ಯ ಪ್ರದರ್ಶನ: ಸಾಧನ ನೃತ್ಯ ಶಾಲೆಯ ವಿದ್ಯಾರ್ಥಿಗಳು, ನಿರ್ದೇಶನ: ಭಾವನಾ ಶಂಕರ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, 11ನೇ ಮುಖ್ಯರಸ್ತೆ, ಐದನೇ ಬಡಾವಣೆ, ಜಯನಗರ, ಸಂಜೆ 5.15

‘ಮನೆಗೊಂದು ಗ್ರಂಥಾಲಯ ಅನುಷ್ಠಾನ’ ಸಮಾರಂಭದ ಉದ್ಘಾಟನೆ: ಮಾನಸ, ಅಧ್ಯಕ್ಷತೆ: ಸಿ.ಸೋಮಶೇಖರ್, ಉಪಸ್ಥಿತಿ: ಎಸ್. ಮುನಿರಾಜು, ಎಂ.ಪ್ರಕಾಶಮೂರ್ತಿ, ಲಿಂಗರಾಜು ಎ., ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ಎಸ್. ಮುನಿರಾಜು, ಶಾಸಕರ ಭವನ, ಲೇಕ್ ವೀವ್ ಡಿಫೆನ್ಸ್ ಕಾಲೊನಿ, ಶೆಟ್ಟಿಹಳ್ಳಿ, ಜಾಲಹಳ್ಳಿ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಕ್ರಿಕೆಟ್ ಸ್ಟೇಡಿಯಂಗೆ 23ರಂದು ಶಂಕುಸ್ಥಾಪನೆ

ಸೂರ್ಯನಗರ ನಾಲ್ಕನೇ ಹಂತ

• 80 ಸಾವಿರ ಆಸನಗಳ ಸಾಮರ್ಥ್ಯ

• ಎ.ಎಂ.ಸುರೇಶ

ಬೆಂಗಳೂರು: ಸೂರ್ಯನಗರದ ನಾಲ್ಕನೇ ಹಂತದಲ್ಲಿ (ಇಂಡ್ಲವಾಡಿ) 80 ಸಾವಿರ ಆಸನಗಳ ಸಾಮರ್ಥ್ಯವಿರುವ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ 23ರಂದು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಸ್ಟೇಡಿಯಂ ನಿರ್ಮಾಣಕ್ಕೆ ಕರ್ನಾಟಕ ಗೃಹ ಮಂಡಳಿ ಈಗಾಗಲೇ ಟೆಂಡರ್ ಕರೆದಿದ್ದು, ಅದರಲ್ಲಿ ಭಾಗವಹಿಸಲು ನೀಡಿದ್ದ ಗಡುವನ್ನು ಈ ತಿಂಗಳ 16ರವರೆಗೂ ವಿಸ್ತರಿಸಲಾಗಿದೆ. ಇದಾದ ಬಳಿಕ ಟೆಂಡರ್ ಪ್ರಕ್ರಿಯೆ ಅಂತಿಮಗೊಳ್ಳಲಿದೆ ಎಂದು ಮಂಡಳಿಯ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಸೂರ್ಯನಗರ ನಾಲ್ಕನೇ ಹಂತದಲ್ಲಿ ಲಭ್ಯವಿರುವ ಸುಮಾರು 75 ಎಕರೆ ಜಾಗದಲ್ಲಿ ಸುಸಜ್ಜಿತವಾದ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಸಚಿವ ಸಂಪುಟ ಸಭೆ ಈಗಾಗಲೇ ಒಪ್ಪಿಗೆ ನೀಡಿದ್ದು, ಕಾಮಗಾರಿ ಆರಂಭವಾದ ಬಳಿಕ ಮೂರು ವರ್ಷಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಕಳೆದ ಜೂನ್‌ನಲ್ಲಿ ಕಾಲ್ತುಳಿತ ಸಂಭವಿಸಿದ ಬಳಿಕ ಎಚ್ಚೆತ್ತುಕೊಂಡಿರುವ ಸರ್ಕಾರ, ನಗರದ ಹೊರ ಭಾಗದಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗಿದೆ. ಬೆಂಗಳೂರು ಅಂತರ ರಾಷ್ಟ್ರೀಯ ಮಟ್ಟದ ನಗರವಾಗಿದ್ದು, ಕ್ರಿಕೆಟ್ ವೀಕ್ಷಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು ಬರುತ್ತಾರೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ವಿಶಾಲವಾದ ಜಾಗದಲ್ಲಿ ಸ್ಟೇಡಿಯಂ ನಿರ್ಮಾಣ ಮಾಡಲಾಗುತ್ತಿದೆ.

ಮೊದಲ ಹಂತದಲ್ಲಿ ₹950 ಕೋಟಿ ವೆಚ್ಚದಲ್ಲಿ ಸ್ಟೇಡಿಯಂ ಮತ್ತು ಅದಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳ ನಿರ್ಮಾಣ, ವಿದ್ಯುತ್ ಸೌಲಭ್ಯ ಇತ್ಯಾದಿಗಳನ್ನು ಕಲ್ಪಿಸಲಾಗುತ್ತದೆ. ಎರಡನೇ ಹಂತದಲ್ಲಿ ಕ್ರೀಡಾ ಸಂಕೀರ್ಣ ನಿರ್ಮಿಸಲಾಗುತ್ತದೆ. ಇದರಲ್ಲಿ ಒಳಾಂಗಣ, ಹೊರಾಂಗಣ ಕ್ರೀಡೆಗಳಿಗೆ ಅವಕಾಶ ಕಲ್ಪಿಸಲಾಗುತ್ತದೆ. ಇದಲ್ಲದೆ ಸಮಾವೇಶ ಕೇಂದ್ರ, ಸುಸಜ್ಜಿತವಾದ ಹೋಟೆಲ್ ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುತ್ತದೆ. ಇವೆಲ್ಲವುಗಳಿಗೆ ಸುಮಾರು ₹1 ಸಾವಿರ ಕೋಟಿ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ.

ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂ ಅತಿ ದೊಡ್ಡದಾಗಿದ್ದು, ಅದು ಒಟ್ಟು 1,10,000 ಆಸನಗಳ ಸಾಮರ್ಥ್ಯ ಹೊಂದಿದೆ. ಸೂರ್ಯನಗರದಲ್ಲಿ ನಿರ್ಮಾಣವಾಗುವುದು ದೇಶದ ಎರಡನೇ ಅತಿದೊಡ್ಡ ಕ್ರಿಕೆಟ್ ಸ್ಟೇಡಿಯಂ. ಸದ್ಯ, ನಗರದಲ್ಲಿ ಇರುವ ಚಿನ್ನಸ್ವಾಮಿ ಸ್ಟೇಡಿಯಂ 36,000 ಆಸನಗಳ ಸಾಮರ್ಥ್ಯ ಹೊಂದಿದೆ.



ಮೊದಲ ಹಂತದಲ್ಲಿ ಸ್ಟೇಡಿಯಂ ನಿರ್ಮಿಸಲಾಗುವುದು. ಮುಂದಿನ ದಿನಗಳಲ್ಲಿ ಸರ್ಕಾರ ಅನುಮತಿ ನೀಡಿದರೆ ಕ್ರೀಡಾ ಸಂಕೀರ್ಣ ನಿರ್ಮಿಸಲಾಗುವುದು

ಕೆ.ಎ.ದಯಾನಂದ, ಆಯುಕ್ತ, ಕರ್ನಾಟಕ ಗೃಹಮಂಡಳಿ

ಉದ್ದೇಶಿತ ಅಂತರರಾಷ್ಟ್ರೀಯ ಸ್ಟೇಡಿಯಂಗೆ ಇರುವ ಅಂತರ

47.9 ಕಿ.ಮೀ.	72.2 ಕಿ.ಮೀ.	11.2 ಕಿ.ಮೀ.	18.4 ಕಿ.ಮೀ.
ಕೆಂಪೇಗೌಡ ಬಸ್ ನಿಲ್ದಾಣದಿಂದ	ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ	ಆನೇಕಲ್ ರೈಲು ನಿಲ್ದಾಣದಿಂದ	ಬೊಮ್ಮಸಂದ್ರ ಮೆಟ್ರೊ ನಿಲ್ದಾಣದಿಂದ



ಸ್ಟೇಡಿಯಂನ ನೀಲನಕ್ಷೆ

ನಾಲ್ಕು ಸಾವಿರ ನಿವೇಶನಗಳ ಹಂಚಿಕೆ

ಸೂರ್ಯನಗರದ ನಾಲ್ಕನೇ ಹಂತದಲ್ಲಿ ಕರ್ನಾಟಕ ಗೃಹ ಮಂಡಳಿಯು (ಕೆಎಚ್‌ಬಿ), ನಾಲ್ಕು ಸಾವಿರ ನಿವೇಶನಗಳನ್ನು ಅಭಿವೃದ್ಧಿಪಡಿಸಿದ್ದು ಇವುಗಳನ್ನು ಲಾಟರಿ ಮೂಲಕ ಇದೇ 23ರಂದು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗುತ್ತದೆ.

1200 ಎಕರೆ ಪ್ರದೇಶದಲ್ಲಿ ಮಂಡಳಿಯು ಬಡಾವಣೆ ಅಭಿವೃದ್ಧಿಪಡಿಸಿದ್ದು, 50:50ರ ಅನುಪಾತದಲ್ಲಿ ನಿವೇಶನಗಳು ಹಂಚಿಕೆಯಾಗಲಿವೆ. ಶೇ 50ರಷ್ಟು ನಿವೇಶನಗಳನ್ನು ಭೂಮಿ ನೀಡಿದ ರೈತರಿಗೆ ನೀಡಲಾಗುತ್ತದೆ. ಇನ್ನುಳಿದ 50ರಷ್ಟು ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗುತ್ತದೆ.

ನಾಗರಿಕರಿಗೆ ಮೀಸಲಾದ ನಿವೇಶನಗಳಿಗಾಗಿ ಒಟ್ಟು 17 ಸಾವಿರ ಅರ್ಜಿಗಳು ಬಂದಿದ್ದು, ನಾಲ್ಕು ಸಾವಿರ ಮಂದಿಗೆ ಅಷ್ಟೇ ನಿವೇಶನಗಳು ಲಭ್ಯವಾಗಲಿವೆ. ಶೇ 15ರಷ್ಟು ನಿವೇಶನಗಳನ್ನು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಹಂಚಿಕೆ ಮಾಡಲಾಗುತ್ತದೆ ಎಂದು ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಸೂರ್ಯನಗರ ನಾಲ್ಕನೇ ಹಂತದಲ್ಲಿ ಮಂಡಳಿಗೆ ಸೇರಿದ ಇನ್ನೂ 600 ಎಕರೆ ಜಾಗವಿದ್ದು, ಮುಂದಿನ ದಿನಗಳಲ್ಲಿ 3-4 ಸಾವಿರ ನಿವೇಶನಗಳು ಹಂಚಿಕೆಗೆ ಲಭ್ಯವಾಗಲಿವೆ. ಈಗ ಹಂಚಿಕೆಗೆ ಸಿದ್ಧವಿರುವ ನಿವೇಶನಗಳನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಲಾಗಿದೆ ಎಂದು ವಿವರಿಸಿದರು.

ಸುದ್ದಿ 2 ನಿಮಿಷ

'ಶಿಥಿಲಗೊಂಡಿರುವ ಗೋಡೆ, ಕಟ್ಟಡ ತೆರವುಗೊಳಿಸಿ'

ಬೆಂಗಳೂರು: 'ಕೇಂದ್ರ ನಗರಪಾಲಿಕೆ ವ್ಯಾಪ್ತಿಯಲ್ಲಿ ಶಿಥಿಲಗೊಂಡ, ಅಪಾಯಕಾರಿ ಸ್ಥಿತಿಯಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಆಸ್ತಿಗಳ ಕಾಂಪೌಂಡ್, ಕಟ್ಟಡಗಳನ್ನು ಪಟ್ಟಿಮಾಡಿ ತುರ್ತಾಗಿ ತೆರವು ಮಾಡಬೇಕು' ಎಂದು ಆಯುಕ್ತ ರಾಜೇಂದ್ರ ಚೋಳನ್ ಸೂಚಿಸಿದರು.

ಪಾಲಿಕೆಯ ಎಂಜಿನಿಯರಿಂಗ್, ಕಂದಾಯ ವಿಭಾಗದ ಅಧಿಕಾರಿಗಳೊಂದಿಗೆ ಸೋಮವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, 'ಮಳೆಗಾಲದಲ್ಲಿ ತಗ್ಗು ಪ್ರದೇಶ, ಪ್ರವಾಹ ಉಂಟಾಗುವ ಹಾಗೂ ನೀರು ನಿಲ್ಲುವ ಸ್ಥಳಗಳ ಪಟ್ಟಿ ಮಾಡಿ ಅಂತಹ ಸ್ಥಳಗಳಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಕ್ರಮಕೈಗೊಳ್ಳಬೇಕು ಎಂದು ಸೂಚಿಸಿದರು.



ಮುಂಗಾರು ಮಳೆ ಆರಂಭಕ್ಕೂ ಮುಂಚಿತವಾಗಿ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಚರಂಡಿಗಳಲ್ಲಿ ಹೂಳು ತೆಗೆಯುವ ಕಾಮಗಾರಿ ಪೂರ್ಣಗೊಳಿಸುವ ಮೂಲಕ ನೀರು ಸರಾಗವಾಗಿ ಹರಿಯಲು ಕ್ರಮ ವಹಿಸಬೇಕು ಎಂದು ಹೇಳಿದರು.

ಪ್ರಗತಿಯಲ್ಲಿರುವ ಡಾಂಬರೀಕರಣ ಹಾಗೂ ಸಿ.ಸಿ ರಸ್ತೆ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಬೇಕು. ರಸ್ತೆ ಗುಂಡಿಗಳನ್ನು ತುರ್ತಾಗಿ ಮುಚ್ಚಬೇಕು ಎಂದು ಸೂಚಿಸಿದರು.

ಸುಲಭ್ ಶೌಚಾಲಯ ಹಣ ದುರುಪಯೋಗ: ತನಿಖೆಗೆ ಆಗ್ರಹ

ಬೆಂಗಳೂರು: 'ಹಿಂದಿನ ಬಿಬಿಎಂಪಿ ಅವಧಿಯಲ್ಲಿ ಸುಲಭ್ ಶೌಚಾಲಯಗಳ ನಿರ್ವಹಣೆ, ದಂಡ ವಸೂಲಿ ಹೆಸರಿನಲ್ಲಿ ದುರುಪಯೋಗ ನಡೆದಿದ್ದು, ಇದನ್ನು ತನಿಖೆಗೆ ಒಳಪಡಿಸಬೇಕು' ಎಂದು ಆಗ್ರಹಿಸಿ ಕರ್ನಾಟಕ ಲೋಕಾಯುಕ್ತ ಹಾಗೂ ಜಿಬಿಎಗೆ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ದೂರು ನೀಡಿದೆ.

'ಸುಲಭ್ ಶೌಚಾಲಯ ನಿರ್ವಹಣೆ ನಡೆಸುತ್ತಿರುವ ಗುತ್ತಿಗೆದಾರರು ಸಾರ್ವಜನಿಕರಿಂದ ಹಣ ವಸೂಲಿ ಮಾಡುತ್ತಿದ್ದರೂ, ಪಾಲಿಕೆಗೆ ಪಾವತಿಸಬೇಕಾದ ಗುತ್ತಿಗೆ ಮೊತ್ತ ಜಮೆ ಮಾಡದಿರುವುದು, ಅಧಿಕಾರಿಗಳು ಲೆಕ್ಕ ಪರಿಶೋಧಕರಿಗೆ ದಾಖಲೆ ನೀಡದೇ ಕರ್ತವ್ಯಲೋಪ ಎಸಗಿರುವುದು, ಅಕ್ರಮವಾಗಿ ದಂಡ ವಸೂಲಿ ಮಾಡಿರುವುದು 2023-24ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಬಹಿರಂಗವಾಗಿದೆ. ಇದರ ಆಧಾರದ ಮೇಲೆ ಈ ದೂರು ಸಲ್ಲಿಸಲಾಗಿದೆ' ಎಂದು ರಾಜ್ಯ ಜಂಟಿ ಕಾರ್ಯದರ್ಶಿ ಎಲ್.ಜೀವನ್ ತಿಳಿಸಿದ್ದಾರೆ.

ರಾಜಾಜಿನಗರದ ಘನತ್ಯಾಜ್ಯ ನಿರ್ವಹಣೆ ವಿಭಾಗದಲ್ಲಿ ಯಾವುದೇ ಅಧಿಕೃತ ದರಪಟ್ಟಿ, ಸುತ್ತೋಲೆಗಳಿಲ್ಲದೆ ಲಕ್ಷಾಂತರ ರೂಪಾಯಿ ದಂಡ ವಸೂಲಿ ಮಾಡಿ, ಸರ್ಕಾರದ ಖಾತೆಗೆ ಜಮೆ ಮಾಡದೇ ದುರುಪಯೋಗಪಡಿಸಿಕೊಂಡಿರುವುದು ಬೆಳಕಿಗೆ ಬಂದಿದೆ. ಚಾಮರಾಜಪೇಟೆ ಸಹಿತ ಹಲವು ಪ್ರದೇಶಗಳಲ್ಲಿ ಸಾರ್ವಜನಿಕ ಆಸ್ತಿಗಳ ನಿರ್ವಹಣೆಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂದೂ ಅವರು ತಿಳಿಸಿದ್ದಾರೆ.

ಈ ಕುರಿತು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಬಾಕಿ ಹಣವನ್ನು ಬಡ್ಡಿ ಸಮೇತ ವಸೂಲಿ ಮಾಡಿ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಆಗ್ರಹಿಸಿದ್ದಾರೆ.

ಬಿಬಿಎಗೆ ಅರ್ಜಿ ಆಹ್ವಾನ

ಬೆಂಗಳೂರು: ನಗರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ (ಐಐಎಂಬಿ) ಡಿಜಿಟಲ್ ವ್ಯವಹಾರ ಮತ್ತು ಉದ್ಯಮಶೀಲತೆ (ಬಿಬಿಎ) ಕೋರ್ಸ್‌ಗೆ ಪ್ರವೇಶ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಇದು ಆನ್‌ಲೈನ್ ಮೂಲಕ ಕಲಿಯುವ ಕೋರ್ಸ್ ಆಗಿದ್ದು, ಮೊದಲ ಎರಡು ಬ್ಯಾಚ್‌ಗಳಲ್ಲಿ 2,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದಿದ್ದಾರೆ.

ಅರ್ಹರು https://dbe.iimb.ac.in/ ಮೂಲಕ ಜೂನ್ 30ರ ಒಳಗೆ ಅರ್ಜಿ ಸಲ್ಲಿಸಬಹುದು.

'17 ರಿಂದ 50 ವರ್ಷದವರಿಗಾಗಿ ಈ ಕಾರ್ಯಕ್ರಮ ರೂಪಿಸಲಾಗಿದೆ ಎಂದು ಐಐಎಂಬಿಯ ಉದ್ಯಮಶೀಲತೆ ವಿಭಾಗದ ಪ್ರಾಧ್ಯಾಪಕ ಸುರೇಶ್ ಭಾಗವತುಲ ಹೇಳಿದ್ದಾರೆ.

ಶಾಮನೂರು ಶುಗರ್ಸ್–ಕೆಪಿಟಿಸಿಎಲ್ ನಡುವಿನ ದೀರ್ಘ ಕಾಲದ ವ್ಯಾಜ್ಯ ಅಂತ್ಯ

'ಸಿಇಆರ್‌ಸಿ ನಿಯಮ ಮೀರಿದ ಷರತ್ತು ಅಸಾಧ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದು ರಾಜ್ಯದ ಗಡಿಯೊಳಗೆ ವಿದ್ಯುತ್ ಪ್ರಸರಣವಾದ ನಂತರ ಆ ವಿಷಯವು, 'ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗ'ದ (ಸಿಇಆರ್‌ಸಿ) ವ್ಯಾಪ್ತಿಗೆ ಬರುತ್ತದೆಯೇ ಹೊರತು ರಾಜ್ಯದ ಅಧಿಕಾರ ವ್ಯಾಪ್ತಿಗೆ ಅಲ್ಲ' ಎಂಬ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಎತ್ತಿಹಿಡಿದಿದೆ.

ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

ಸಿಇಆರ್‌ಸಿ ಪ್ರಾಮುಖ್ಯವನ್ನು ಎತ್ತಿಹಿಡಿದಿರುವ ನ್ಯಾಯಪೀಠ, ಅಂತರ-ರಾಜ್ಯ ಮುಕ್ತ ಪ್ರವೇಶದಲ್ಲಿ 'ಎಸ್‌ಎಲ್‌ಡಿಸಿ'ಯ ಬೆಲೆ ನಿಗದಿ ಹಸ್ತಕ್ಷೇಪವನ್ನು ರದ್ದುಗೊಳಿಸಿದೆ.

'ರಾಜ್ಯದೊಳಗಿನ ಗ್ರಿಡ್ ಕಾರ್ಯಾಚರಣೆಗಳನ್ನು ನಿರ್ವಹಿಸುವಲ್ಲಿ ರಾಜ್ಯ ಲೋಡ್ ಡಿಸ್‌ಪ್ಯಾಚ್ ಸೆಂಟರ್ (ಎಸ್‌ಎಲ್‌ಡಿಸಿ) ಪ್ರಮುಖ ಅಧಿಕಾರವನ್ನು ಹೊಂದಿದ್ದರೂ, ಅಂತರರಾಜ್ಯ ವಿದ್ಯುತ್ ವಹಿವಾಟುಗಳಿಗಾಗಿ ಸಿಇಆರ್‌ಸಿ ರೂಪಿಸಿದ ನಿಯಮಗಳನ್ನು ಅತಿಕ್ರಮಿಸುವಂತಹ ವಾಣಿಜ್ಯ ಷರತ್ತುಗಳನ್ನು ವಿಧಿಸಲು ಸಾಧ್ಯವಿಲ್ಲ' ಎಂದು ಸ್ಪಷ್ಟಪಡಿಸಿದೆ.

ಪ್ರಕರಣ: ದಾವಣಗೆರೆಯ 'ಶಾಮನೂರು ಶುಗರ್ಸ್'; ಕಬ್ಬಿನ ತ್ಯಾಜ್ಯವನ್ನು ಬಳಸಿ ವಿದ್ಯುತ್ ಉತ್ಪಾದನೆ ಮಾಡುತ್ತಿದೆ. ಕೆಪಿಟಿಸಿಎಲ್ ಜೊತೆಗಿನ ತನ್ನ ವಿದ್ಯುತ್ ಖರೀದಿ ಒಪ್ಪಂದದ ಅವಧಿ ಮುಗಿದ ನಂತರ 'ಮುಕ್ತ ಪ್ರವೇಶ' ವ್ಯವಸ್ಥೆಯ ಮೂಲಕ ಕರ್ನಾಟಕ ರಾಜ್ಯದಿಂದ ಹೊರಗೆ ಹೆಚ್ಚುವರಿ ವಿದ್ಯುತ್ ಮಾರಾಟ ಮಾಡಲು ಪ್ರಾರಂಭಿಸಿತ್ತು.

ಇದರ ಮಾರಾಟಕ್ಕೆ ಅನುಮತಿ ನೀಡುವಾಗ ಕೆಪಿಟಿಸಿಎಲ್, 'ಕಂಪನಿಯು ಹೆಚ್ಚುವರಿ ವಿದ್ಯುತ್ ಉತ್ಪಾದಿಸಿದರೆ, ಅದು ಸಾಮಾನ್ಯ ಮಾರುಕಟ್ಟೆ ಸಂಬಂಧಿತ, ಅನ್‌ಷೆಡ್ಯೂಲ್ಡ್ ಇಂಟರ್‌ಚೇಂಜ್ (ಯುಐ) ದರವನ್ನು ಪಡೆಯುವುದಿಲ್ಲ. ಆದರೆ, ಹಳೆಯ ವಿದ್ಯುತ್ ಸ್ಥಾವರಗಳಿಗೆ ನಿಗದಿಪಡಿಸಿದ ಕಡಿಮೆ ಸುಂಕವನ್ನು ಮಾತ್ರ ಪಡೆಯುತ್ತದೆ' ಎಂಬ ಷರತ್ತನ್ನು ವಿಧಿಸಿತು.

ಈ ಷರತ್ತನ್ನು ಶಾಮನೂರು ಶುಗರ್ಸ್ ಸಿಇಆರ್‌ಸಿ ಮುಂದೆ ಪ್ರಶ್ನಿಸಿತ್ತು. 'ಅಂತರ-ರಾಜ್ಯ ಪ್ರಸರಣಕ್ಕಾಗಿ ಸಿಇಆರ್‌ಸಿ ರೂಪಿಸಿದ ರಾಷ್ಟ್ರೀಯ ವಿದ್ಯುತ್ ನಿಯಮಗಳಿಗೆ ವಿರುದ್ಧವಾಗಿ ಎಸ್‌ಎಲ್‌ಡಿಸಿ ನಿಯಮಗಳನ್ನು ವಿಧಿಸಲು ಸಾಧ್ಯವಿಲ್ಲ' ಎಂದು ಪ್ರತಿಪಾದಿಸಿತ್ತು. ಈ ವಾದಾಂಶವನ್ನು ಮಾನ್ಯ ಮಾಡಿದ ಸಿಇಆರ್‌ಸಿ; 'ಈ ವ್ಯವಸ್ಥೆಯು ಅನಿಯಂತ್ರಿತ ಮತ್ತು ತಾರತಮ್ಯದಿಂದ ಕೂಡಿದೆ' ಎಂಬ ಅಭಿಪ್ರಾಯದೊಂದಿಗೆ ಕೆಪಿಟಿಸಿಎಲ್ ವಿಧಿಸಿದ್ದ ಷರತ್ತನ್ನು 2012ರ ಅಕ್ಟೋಬರ್ 9ರಂದು ರದ್ದುಗೊಳಿಸಿತ್ತು.

ಈ ಆದೇಶವನ್ನು ರದ್ದುಗೊಳಿಸುವಂತೆ ಕೋರಿ ಕೆಪಿಟಿಸಿಎಲ್ ಮತ್ತು ಎಸ್‌ಎಲ್‌ಡಿಸಿ ಹೈಕೋರ್ಟ್ ಮೆಟ್ಟಿಲೇರಿದ್ದವು. 'ಗ್ರಿಡ್ ಶಿಸ್ತನ್ನು ಕಾಪಾಡಿಕೊಳ್ಳಲು ಮತ್ತು ಜನರೇಟರ್‌ಗಳಿಂದ 'ಗೇಮಿಂಗ್' ತಡೆಯಲು ನಿರ್ದೇಶನಗಳನ್ನು ನೀಡುವ ನಿಟ್ಟಿನಲ್ಲಿ ಎಸ್‌ಎಲ್‌ಡಿಸಿ, ವಿದ್ಯುತ್ ಕಾಯ್ದೆ–2003ರ ಅಡಿಯಲ್ಲಿ ಶಾಸನಬದ್ಧ ಅಧಿಕಾರವನ್ನು ಹೊಂದಿದೆ' ಎಂಬ ವಿವರಿಸಿತ್ತು.

'ಸಿಇಆರ್‌ಸಿ, ವಿದ್ಯುತ್ ಕಾಯ್ದೆ ನಿಬಂಧನೆಗಳ ಅಡಿಯಲ್ಲಿ ರಚನೆಯಾಗಿದ್ದು, ಮತ್ತೊಂದು ಶಾಸನಬದ್ಧ ಪ್ರಾಧಿಕಾರವು ತೆಗೆದುಕೊಂಡ ನಿರ್ಧಾರಗಳ ನಿಖರತೆಯನ್ನು ನಿರ್ಧರಿಸಲು ಹಾಗೂ ಮತ್ತೊಂದು ಶಾಸನಬದ್ಧ ಪ್ರಾಧಿಕಾರ ತೆಗೆದುಕೊಳ್ಳುವ ಕ್ರಮಗಳಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ. ಗ್ರಿಡ್ ಸ್ಥಿರತೆಯನ್ನು ರಕ್ಷಿಸುವ ಸಲುವಾಗಿ ಇಂತಹ ಷರತ್ತು ಅಗತ್ಯವಾಗಿದೆ' ಎಂದು ಪ್ರತಿಪಾದಿಸಿತ್ತು.

ಈ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಶಾಮನೂರು ಶುಗರ್ಸ್ ಕಂಪನಿಯ ವಾದವನ್ನು ಮಾನ್ಯ ಮಾಡುವ ಮೂಲಕ ಕೆಪಿಟಿಸಿಎಲ್ ಅರ್ಜಿಯನ್ನು 2023ರ ಮೇ 22ರಂದು ವಜಾಗೊಳಿಸಿ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗಿತ್ತು. ದಶಕಕ್ಕೂ ಮಿಕ್ಕಿ ನಡೆದ ಈ ವ್ಯಾಜ್ಯದಲ್ಲಿ 'ಶಾಮನೂರು ಶುಗರ್ಸ್ ಲಿಮಿಟೆಡ್ ಕಂಪನಿ' ಪರವಾಗಿ ಹೈಕೋರ್ಟ್ ಹಿರಿಯ ವಕೀಲ ಶ್ರೀಧರ ಪ್ರಭು ವಾದ ಮಂಡಿಸಿದ್ದರು.

ಕೈಗಾರಿಕೆಗಳ ಮೇಲೆ ತೀರ್ಪಿನ ಪ್ರಭಾವ

'ಈ ತೀರ್ಪು ಮುಕ್ತ ಪ್ರವೇಶ ವಿದ್ಯುತ್ ಮಾರುಕಟ್ಟೆಗಳು, ಕ್ಯಾಪ್ಟಿವ್ ಜನರೇಟರ್‌ಗಳು, ಸಹ-ಉತ್ಪಾದನಾ ಸ್ಥಾವರಗಳು ಮತ್ತು ರಾಜ್ಯಗಳಾದ್ಯಂತ ವಿದ್ಯುತ್ ಮಾರಾಟ ಮಾಡುವ ಕೈಗಾರಿಕೆಗಳ ಮೇಲೆ ಪ್ರಮುಖ ಪರಿಣಾಮ ಬೀರುತ್ತದೆ' ಎಂದು ಅಂದಾಜಿಸಲಾಗಿದೆ.

'ಅಂತರ-ರಾಜ್ಯ ವಿದ್ಯುತ್ ವ್ಯಾಪಾರದಲ್ಲಿ ರಾಷ್ಟ್ರೀಯ ನಿಯಂತ್ರಕ ಕಾರ್ಯವಿಧಾನಗಳ ಪ್ರಾಬಲ್ಯವನ್ನು ಬಲಪಡಿಸುತ್ತದೆ ಮತ್ತು ಭಾರತೀಯ ವಿದ್ಯುತ್ ವಲಯದಲ್ಲಿ ಗ್ರಿಡ್ ಆಡಳಿತ ಮತ್ತು ಸಾಂಸ್ಥಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಭವಿಷ್ಯದ ಸುಧಾರಣೆಗಳ ಮೇಲೆ ಪ್ರಭಾವ ಬೀರಬಹುದು' ಎಂದು ಕಾನೂನು ತಜ್ಞರು ಅಂದಾಜಿಸಿದ್ದಾರೆ.

'ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಸಿಲು, ಮಳೆ ಎನ್ನದೇ ಹಗಲಿರುಳು ದುಡಿಯುವ ರೈತರ ಉತ್ಪನ್ನಗಳಿಗೆ ಉತ್ತಮ ಬೆಲೆ ಸಿಗುತ್ತಿಲ್ಲ. ರಾಜ್ಯ ಸರ್ಕಾರ ಈ ಬಗ್ಗೆ ಗಮನ ಹರಿಸಿ, ವೈಜ್ಞಾನಿಕವಾದ ಬೆಲೆ ನೀಡಬೇಕು' ಎಂದು ರಾಜ್ಯಸಭಾ ಸದಸ್ಯ ಎಚ್‌.ಡಿ. ದೇವೇಗೌಡ ಒತ್ತಾಯಿಸಿದರು.

ತೋಟಗಾರಿಕೆ ಇಲಾಖೆ ಹಾಗೂ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಸಹಯೋಗದಲ್ಲಿ ಕಬ್ಬನ್ ಉದ್ಯಾನದಲ್ಲಿ ನಡೆಯುತ್ತಿರುವ ಮಾವು-ಹಲಸು ಮೇಳಕ್ಕೆ ಸೋಮವಾರ ಭೇಟಿ ನೀಡಿ, ವಿವಿಧ ಮಳಿಗೆಗಳನ್ನು ವೀಕ್ಷಿಸಿದರು. ಅಲ್ಲಿನ ರೈತರೊಂದಿಗೆ ಮಾತುಕತೆ ನಡೆಸಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

'ರೈತನ ಕಷ್ಟಕ್ಕೆ ತಕ್ಕ ಪ್ರತಿಫಲ ಸಿಗಬೇಕು. ರೈತರಿಗೆ ಅನುಕೂಲವಾಗುವಂತೆ ಅಗತ್ಯ ಪ್ರಮಾಣದಲ್ಲಿ ಶೈತ್ಯಾಗಾರಗಳನ್ನು ಸ್ಥಾಪಿಸಬೇಕು. ನನ್ನ ಶಕ್ತಿ ಇರುವವರೆಗೂ ರೈತರ ಪರವಾಗಿ ಹೋರಾಟ ಮಾಡುತ್ತೇನೆ' ಎಂದು ತಿಳಿಸಿದರು.

'ರೈತರಿಂದ ನೇರವಾಗಿ ಗುಣಮಟ್ಟದ ಕಾರ್ಬೈಡ್ ಮುಕ್ತ ಹಣ್ಣುಗಳನ್ನು ಖರೀದಿಸಲು ಮೇಳದಲ್ಲಿ ಅವಕಾಶ ನೀಡಲಾಗಿದೆ. ಮೇಳವು ಮೇ 17 ರವರೆಗೆ ನಡೆಯಲಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ, ರೈತರನ್ನು ಪ್ರೋತ್ಸಾಹಿಸಬೇಕು' ಎಂದು ನಿಗಮದ ಅಧ್ಯಕ್ಷ ಡಾ.ಬಿ.ಸಿ. ಮುದ್ದುಗಂಗಾಧರ್ ತಿಳಿಸಿದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ವೇದಮೂರ್ತಿ ಮಾತನಾಡಿ, 'ರೈತರಿಗೆ ನೇರವಾಗಿ ಮಾರುಕಟ್ಟೆ ಸೌಲಭ್ಯ ಒದಗಿಸಿ ಗ್ರಾಹಕರಿಗೆ ಕಾರ್ಬೈಡ್ ಮುಕ್ತ, ರುಚಿಕರ ಹಣ್ಣುಗಳನ್ನು ಕಡಿಮೆ ದರದಲ್ಲಿ ಲಭ್ಯವಾಗುವಂತೆ ಮಾಡುವುದು ಮೇಳದ ಉದ್ದೇಶವಾಗಿದೆ. ಕಳೆದ ನಾಲ್ಕು ದಿನಗಳಲ್ಲಿ ಅಂದಾಜು 8 ರಿಂದ 10 ಟನ್‌ನಷ್ಟು ಮಾವು ಮಾರಾಟವಾಗಿದೆ. ಮೇ 28 ರಿಂದ ಲಾಲ್‌ಬಾಗ್‌ನಲ್ಲಿಯೂ ಮಾವು–ಹಲಸಿನ ಮೇಳ ಆಯೋಜಿಸಲಾಗುವುದು' ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎಚ್‌.ಎಂ. ರಮೇಶ್ ಗೌಡ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.



ಕಬ್ಬನ್ ಉದ್ಯಾನದಲ್ಲಿ ನಡೆಯುತ್ತಿರುವ ಮೇಳದಲ್ಲಿ ಎಚ್‌.ಡಿ. ದೇವೇಗೌಡ ಅವರು ಮಾವಿನ ಹಣ್ಣುಗಳನ್ನು ವೀಕ್ಷಿಸಿದರು ಪ್ರಜಾವಾಣಿ ಚಿತ್ರ

'ಮಹಿಳಾ ಮೀಸಲಾತಿಗೆ ವಿರೋಧ ಪಕ್ಷಗಳ ಅಡ್ಡಗಾಲು'

ಬೆಂಗಳೂರು: ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆಯನ್ನು ಕೇಂದ್ರ ಸರ್ಕಾರ ಎರಡೂ ಸದನಗಳಲ್ಲಿ ಮಂಡಿಸಿತ್ತು. ಆದರೆ, ವಿರೋಧ ಪಕ್ಷಗಳ ನಿಲುವಿನಿಂದಾಗಿ ಮಸೂದೆ ಅಂಗೀಕಾರವಾಗಿಲ್ಲ ಎಂದು ರಾಜ್ಯಸಭಾ ಸದಸ್ಯ ಎಚ್‌.ಡಿ. ದೇವೇಗೌಡ ಹೇಳಿದರು.

ಕಬ್ಬನ್ ಉದ್ಯಾನದಲ್ಲಿ ನಡೆಯುತ್ತಿರುವ ಮಾವು ಮೇಳಕ್ಕೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರು ಮತ್ತೊಂದು ಅಧಿವೇಶನ ಕರೆದು ಈ ಮಸೂದೆಯನ್ನು ಮಂಡಿಸಿ, ಜಾರಿಗೊಳಿಸುವ ಭರವಸೆ ಇದೆ' ಎಂದರು.

'ತೈಲ ಬಳಕೆ ಕುರಿತು ಮೋದಿ ಅವರ ಕರೆಯ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಅಮೆರಿಕ-ಇಸ್ರೇಲ್-ಇರಾನ್ ನಡುವಿನ ಸಂಘರ್ಷದಿಂದ ಜಾಗತಿಕವಾಗಿ ಅಪಾರ ದುಷ್ಪರಿಣಾಮ ಬೀರಿದೆ. ತೈಲ ಬಿಕ್ಕಟ್ಟು ಹೆಚ್ಚಾಗಿದೆ. ಆದ್ದರಿಂದ ಪೆಟ್ರೋಲ್, ಡಿಸೇಲ್ ಹಾಗೂ ರಾಸಾಯನಿಕ ಗೊಬ್ಬರವನ್ನು ಎಚ್ಚರಿಕೆಯಿಂದ ಬಳಕೆ ಮಾಡುವಂತೆ ದೇಶದ ಜನರಿಗೆ ತಿಳಿಸಿದ್ದು, ಅವರ ಮನವಿಯನ್ನು ನಾವೆಲ್ಲರೂ ಸ್ವಾಗತಿಸಬೇಕು' ಎಂದು ಸಲಹೆ ನೀಡಿದರು.

ಬೈರಮಂಗಲ: ರಸ್ತೆ ಮಧ್ಯೆ ರೈತರ ಧರಣಿ

ಪ್ರಜಾವಾಣಿ ವಾರ್ತೆ

ಬಿಡದಿ: ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗೆ ಸಚಿವ ಸಂಪುಟ ಅನುಮೋದನೆ ನೀಡಿರುವುದನ್ನು ವಾಪಸ್ ಪಡೆಯಬೇಕು ಹಾಗೂ ಭೂ ಸ್ವಾಧೀನ ರದ್ದು ಪಡಿಸುವಂತೆ ಒತ್ತಾಯಿಸಿ ರೈತರು ಜಾನುವಾರುಗಳೊಂದಿಗೆ ಬೈರಮಂಗಲ ಮತ್ತು ಹೊಸೂರು ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

ಬಿಡದಿ ಹೋಬಳಿಯ ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಂದ ಜಾನುವಾರು, ಎತ್ತಿನಗಾಡಿ ಹಾಗೂ ಟ್ರ್ಯಾಕ್ಟರ್ ಸಮೇತ ಬಂದಿದ್ದ ನೂರಾರು ರೈತರು ಬೈರಮಂಗಲ ವೃತ್ತದಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿಯಲ್ಲಿ ಪಾಲ್ಗೊಂಡಿದ್ದರು.

ಬೈರಮಂಗಲ ವೃತ್ತದ ಮಧ್ಯದಲ್ಲಿ ಶಾಮಿಯಾನ ಹಾಕಿದ ರೈತರು ಹಾಗೂ ಅನಿರ್ದಿಷ್ಟಾವಧಿ ಧರಣಿ ಅರಂಭಿಸಿದರು. ಇದರಿಂದಾಗಿ ಬಿಡದಿ- ಹಾರೋಹಳ್ಳಿ ಮಧ್ಯೆ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು. ಪೊಲೀಸರು ವಾಹನಗಳನ್ನು ಪರ್ಯಾಯ ಮಾರ್ಗದಲ್ಲಿ ಸಂಚರಿಸಲು ಅನುವು ಮಾಡಿಕೊಟ್ಟರು.

ಈ ಭಾಗದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಸೇರಿದ 300 ಎಕರೆ ಜಮೀನು ಇದೆ. ಅದನ್ನು ಮಾರಾಟ ಮಾಡಿದರೆ ಕೋಟ್ಯಂತರ ರೂಪಾಯಿ ಬರುತ್ತದೆ. ಈ ಕಾರಣಕ್ಕಾಗಿ ಟೌನ್‌ಶಿಪ್ ಯೋಜನೆ ಜಾರಿಗೊಳಿಸಲು ಅವರು ಹಟಕ್ಕೆ ಬಿದ್ದಿದ್ದಾರೆ ಎಂದು ರೈತಸಂಘ ರಾಜ್ಯ ಸಂಚಾಲಕ ಚೀಲೂರು ಮುನಿರಾಜು ಟೀಕಿಸಿದರು.

ಅನ್ನ ಕೊಡುವ ಭೂಮಿಯನ್ನು ಕಸಿದು ಅಲ್ಲಿ ಕಟ್ಟಡ ಕಟ್ಟಿದರೆ ಏನು ಪ್ರಯೋಜನ? ಒಂದು ವೇಳೆ ಭೂಮಿ ಸ್ವಾಧೀನಪಡಿಸಿಕೊಂಡರೆ ಈ ಸರ್ಕಾರ ರೈತರು ಮತ್ತು ಭೂಮಿತಾಯಿಯ ಶಾಪಕ್ಕೆ ಗುರಿಯಾಗಬೇಕಾಗುತ್ತದೆ. ಇನ್ನು ಮುಂದೆ ರಾಜಕಾರಣಿಗಳು ಹಳ್ಳಿಗಳಿಗೆ ಬಂದರೆ ರೈತರು ಓಡಿಸಬೇಕು ಎಂದರು.

ರಾಜ್ಯ ಸರ್ಕಾರ ತರಾತುರಿಯಲ್ಲಿ ಯೋಜನೆಗೆ ಅನುಮೋದನೆ ನೀಡಿದೆ. ಕೃಷಿ ಭೂಮಿ ಅಡವಿಟ್ಟು ಹಣ ಲಪಟಾಯಿಸುವುದು ಸರ್ಕಾರದ ಉದ್ದೇಶ. ರೈತರು ಆತ್ಮಸ್ಥೈರ್ಯ ಮತ್ತು ಒಗ್ಗಟ್ಟು ಕಾಪಾಡಿಕೊಂಡರೆ ಒಂದಿಂಚೂ ಭೂಮಿ ಕಸಿದುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ ಎಂದು ಜಯ ಕರ್ನಾಟಕ ಜನಪರ ವೇದಿಕೆ ರಾಜ್ಯ ಸಲಹೆಗಾರ ಕುಮಾರಸ್ವಾಮಿ ಸವಾಲು ಹಾಕಿದರು.



ಬೈರಮಂಗಲ ವೃತ್ತದ ಮಧ್ಯದಲ್ಲಿಯೇ ರೈತರು ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು

ಬಿಡದಿ ಟೌನ್‌ಶಿಪ್ ವಿರೋಧಿಸಿ ರೈತರು ನಡೆಸುತ್ತಿರುವ ಹೋರಾಟಕ್ಕೆ ನನ್ನ ಸಂಪೂರ್ಣ ಬೆಂಬಲ ಇದೆ. ಸರ್ಕಾರ ಏನೇ ಯೋಜನೆ ಮಾಡಿದರೂ ಮುಂದಿನ ದಿನಗಳಲ್ಲಿ ಅದು ಬದಲಾಯಿಸುವ ಕಾಲ ಬರಬಹುದು

ಎಚ್‌.ಡಿ. ದೇವೇಗೌಡ, ರಾಜ್ಯಸಭಾ ಸದಸ್ಯ

ಕರ್ನಾಟಕ ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆಯಿಂದ ಧರಣಿ

ಮೀಸಲು: ಸಂವಿಧಾನ ತಿದ್ದುಪಡಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸರ್ಕಾರ ಹೆಚ್ಚಿಸಿರುವ ಶೇ 56 ಮೀಸಲಾತಿಯ ರಕ್ಷಣೆಗಾಗಿ, ಸಂವಿಧಾನದ 9ನೇ ಪರಿಚ್ಛೇದಕ್ಕೆ ತಿದ್ದುಪಡಿ ತರಬೇಕು. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆ ಒತ್ತಾಯಿಸಿದೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ವೇದಿಕೆಯ ಮುಖಂಡ, ಮಾಜಿ ಸಂಸದ ವಿ.ಎಸ್.ಉಗ್ರಪ್ಪ, 'ಪರಿಶಿಷ್ಟರು, ಹಿಂದುಳಿದ ವರ್ಗಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹಂಚಿಕೆಯಾಗಬೇಕು ಎಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಈ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಕ್ರಮವಾಗಿ ಶೇಕಡ 15ರಿಂದ ಶೇ 17ಕ್ಕೆ ಮತ್ತು ಶೇ 3ರಿಂದ ಶೇ 7ಕ್ಕೆ ಹೆಚ್ಚಳ ಮಾಡಲಾಗಿತ್ತು. ವಿಧಾನಸಭೆ, ವಿಧಾನ ಪರಿಷತ್‌ನಲ್ಲೂ ಸರ್ವಾನುಮತದಿಂದ ಅಂಗೀಕಾರವಾಗಿತ್ತು. ಕೆಲವರು ಕೋರ್ಟ್ ಮೊರೆಹೋಗಿದ್ದರ ಪರಿಣಾಮವಾಗಿ ಮೀಸಲಾತಿ ಹೆಚ್ಚಳದ ಸೌಲಭ್ಯ ಪರಿಶಿಷ್ಟರಿಗೆ ಸಿಕ್ಕಿಲ್ಲ. ಮೀಸಲಾತಿ ಹೆಚ್ಚಳಕ್ಕೆ ಸಿಂಧುತ್ವ ನೀಡಲು ಸಂವಿಧಾನದ ಪರಿಚ್ಛೇದ 9ಕ್ಕೆ ತಿದ್ದುಪಡಿ ತಂದಿದ್ದರೆ ಸಮಸ್ಯೆಯೇ ಇರುತ್ತಿರಲಿಲ್ಲ. ಕೇಂದ್ರ ಸರ್ಕಾರದ ಅಸಹಕಾರದಿಂದ ಹೆಚ್ಚಳದ ಲಾಭ ಪರಿಶಿಷ್ಟರಿಗೆ ಸಿಗಲಿಲ್ಲ' ಎಂದರು.

ನ್ಯಾಯಮೂರ್ತಿ ಎಚ್‌.ಎನ್. ನಾಗಮೋಹನ್ ದಾಸ್ ನೇತೃತ್ವದ ಆಯೋಗ, ನ್ಯಾಯಮೂರ್ತಿ ಸುಭಾಷ್ ಅಡಿ ನೇತೃತ್ವದ ಸಮಿತಿಯ ಸಲ್ಲಿಸಿದ್ದ ವರದಿ ಪ್ರಕಾರ ಹಿಂದಿನ ಬಿಜೆಪಿ ಸರ್ಕಾರ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿತ್ತು. ರಾಜ್ಯದ ಸಂಸದರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಬೇಕು ಎಂದು ಒತ್ತಾಯಿಸಿದರು.

ತಮಿಳುನಾಡು ಸರ್ಕಾರ 1994ರಲ್ಲಿ ಮೀಸಲಾತಿ ಪ್ರಮಾಣವನ್ನು ಶೇ 50ಕ್ಕಿಂತಲೂ ಹೆಚ್ಚಿಸಿದೆ. ಸಂವಿಧಾನದ ಪರಿಚ್ಛೇದ 9ರ ವ್ಯಾಪ್ತಿಗೆ ಆ ವಿಷಯವನ್ನು ಸೇರಿಸಿರುವುದರಿಂದ ಮೀಸಲಾತಿಗೆ ರಕ್ಷಣೆ ದೊರೆತಿದೆ.

ಆದರೆ, ಬಿಜೆಪಿ ನೇತೃತ್ವದ ಸರ್ಕಾರ ಮೀಸಲಾತಿ ಹೆಚ್ಚಳ ಮಾಡಿದರೂ ಅವರದೇ ಕೇಂದ್ರ ಸರ್ಕಾರ ನಿರ್ಲಕ್ಷ್ಯ ಮಾಡುತ್ತಿದೆ. ಕೇಂದ್ರದ ಮೇಲೆ ಒತ್ತಡ ಹಾಕುವಂತೆ, ಕೋರ್ಟ್ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದರು.



ಕರ್ನಾಟಕ ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆ ಸದಸ್ಯರು ವಿಧಾನಸೌಧದ ಆವರಣದಲ್ಲಿರುವ ವಾಲ್ಮೀಕಿ ಪುತ್ಥಳಿಯ ಮುಂದೆ ಧರಣಿ ನಡೆಸಿದರು

ಆರ್‌ಎಸ್‌ಎಸ್ ಮೌನ ಏಕೆ: ಉಗ್ರಪ್ಪ

'ಆರ್‌ಎಸ್‌ಎಸ್ ಸರ ಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ನಾವೆಲ್ಲರು ಹಿಂದೂ ಎನ್ನುತ್ತಾರೆ. ಮೀಸಲಾತಿ ಹೆಚ್ಚಳದ ವಿಚಾರದಲ್ಲಿ ಏಕೆ ಮೌನವಾಗಿದ್ದಾರೆ' ಎಂದು ಉಗ್ರಪ್ಪ ಪ್ರಶ್ನಿಸಿದರು.

ಹಿಂದಿನ ಬಿಜೆಪಿ ಸರ್ಕಾರ ಹೆಚ್ಚಿಸಿದ್ದ ಮೀಸಲಾತಿ ಪ್ರಮಾಣಕ್ಕೆ ಸಂವಿಧಾನದ ರಕ್ಷಣೆ ಸಿಗುವಂತೆ ಮಾಡಲು ಸಂವಿಧಾನದ 9ನೇ ಪರಿಚ್ಛೇದಕ್ಕೆ ತಿದ್ದುಪಡಿ ತರಲು ಹೊಸಬಾಳೆ ಗಮನ ಹರಿಸಬೇಕು. ರಾಜ್ಯ ಸರ್ಕಾರವು ಸರ್ವಪಕ್ಷ ನಿಯೋಗದೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಮೀಸಲಾತಿ ಹೆಚ್ಚಳಕ್ಕೆ ಒಪ್ಪಿಗೆ ಪಡೆಯಬೇಕು. ಆರ್‌ಎಸ್‌ಎಸ್‌ನಂತಹ ಸಂಘಟನೆಗಳು ಬೆಂಬಲ ನೀಡಬೇಕು ಎಂದರು.



ಭೂಸ್ವಾಧೀನ ಖಂಡಿಸಿ ಮುತ್ತಾನಲ್ಲೂರಿನಲ್ಲಿ ಮಹಿಳೆಯರು ಒನಕೆ ಮತ್ತು ಪಂಜಿನ ಮೆರವಣಿಗೆ ನಡೆಸಿದರು

ರೈತ ಮಹಿಳೆಯರ ಒನಕೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಸರ್ಜಾಪುರ(ಆನೇಕಲ್): ಸರ್ಜಾಪುರ ಹೋಬಳಿಯಲ್ಲಿ ಕೆಐಎಡಿಬಿ ಭೂಸ್ವಾಧೀನ ಖಂಡಿಸಿ ಮುತ್ತಾನಲ್ಲೂರಿನಲ್ಲಿ ರೈತರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಅಹೋರಾತ್ರಿ ಪ್ರತಿಭಟನೆಯೂ 306ನೇ ದಿನಕ್ಕೆ ಕಾಲಿಟ್ಟಿದ್ದು, ಮಹಿಳೆಯರು ಒನಕೆ ಮತ್ತು ಪಂಜಿನ ಮೆರವಣಿಗೆ ನಡೆಸಿದರು.

ರೈತರು 300 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದರೂ ಸರ್ಕಾರ ಗಮನ ಹರಿಸದಿರುವುದು ದುಃಖದ ಸಂಗತಿ. ಈ ಭಾಗದ ಅಧಿಕಾರಿಗಳು ತಪ್ಪು ವರದಿ ನೀಡಿದ್ದಾರೆ. ಫಲವತ್ತಾದ ಕೃಷಿ ಭೂಮಿಯನ್ನು ಬಂಜರು ಭೂಮಿ ಎಂದು ವರದಿ ನೀಡಿರುವ ಅಧಿಕಾರಿಗಳಿಗೆ ರೈತರ ಶಾಪ ತಟ್ಟುತ್ತದೆ ಎಂದು ರೈತ ಮಹಿಳೆ ಸುಶೀಲಮ್ಮ ಆಕ್ರೋಶ ಹೊರ ಹಾಕಿದರು.

ರೈತರು ಜಮೀನು ಉಳಿಸಿಕೊಳ್ಳಲು ಪ್ರತಿಭಟನೆ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಗ್ರಾಮದ ಸ್ತ್ರೀಯರು ಒಗ್ಗೂಡಿ ಒನಕೆ ಹಿಡಿದು ಪ್ರತಿಭಟನೆ ನಡೆಸಿದ್ದಾರೆ. ಮುಂದಿನ ದಿನಗಳಲ್ಲಿ ಮಹಿಳೆಯರು ವಿಧಾನಸೌಧಕ್ಕೆ ಮುತ್ತಿಗೆ ಹಾಕುತ್ತಾರೆ ಎಂದು ಗ್ರಾಮದ ಸುಜಾತ ಚಿನ್ನಪ್ಪ ತಿಳಿಸಿದರು.

ಚಂದ್ರಮ್ಮ, ಪುಷ್ಪ ಸೋಮಶೇಖರ್, ಉಮಾ ಪರಶುರಾಮ್, ಜಯಲಕ್ಷ್ಮಮ್ಮ, ರಾಧಾ ನಾಗರಾಜರೆಡ್ಡಿ, ಸುನಂದಮ್ಮ, ಸಂಪ್ರಿತ, ಶಶಿಕಲಾ, ಚಂದ್ರಿಕ, ಮೇಜರ್ ರಘುರಾಮರೆಡ್ಡಿ, ಅಶೋಕ್ ಕುಮಾರ್, ಹರೀಶ್, ಬಸವರಾಜು, ರಾಹುಲ್ ಇದ್ದರು.

ಜಿಲೆಟಿನ್ ಕಡ್ಡಿ ಪತ್ತೆ: ಎನ್ಐಎ ತನಿಖೆ

ಪ್ರಧಾನಿ ನರೇಂದ್ರ ಮೋದಿ ಸಂಚರಿಸಿದ ಮಾರ್ಗದಲ್ಲಿ ಸ್ಫೋಟಕ ವಸ್ತು ವಶ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಗ್ಗಲೀಪುರ ಪೊಲೀಸ್ ಠಾಣಾ ವ್ಯಾಪ್ತಿಯ ವಡೇರಹಳ್ಳಿಯ ಸೇತುವೆ ಬಳಿ ಜಿಲೆಟಿನ್ ಕಡ್ಡಿಗಳು ಪತ್ತೆಯಾದ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ದಳವು (ಎನ್ಐಎ) ಕೈಗೆತ್ತಿಕೊಂಡಿದೆ.

ಸ್ಥಳಕ್ಕೆ ಎನ್ಐಎ, ಕೇಂದ್ರ ಗುಪ್ತಚರದ ಅಧಿಕಾರಿಗಳು ಸೋಮವಾರ ಭೇಟಿ ನೀಡಿ ಮಾಹಿತಿ ಕಲೆಹಾಕಿದರು. ಅದಲ್ಲದೇ ಶ್ವಾನದಳ ಹಾಗೂ ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್ಎಸ್ಎಲ್) ಸಿಬ್ಬಂದಿ ಸ್ಥಳ ಪರಿಶೀಲನೆ ನಡೆಸಿ ಪ್ರಾಥಮಿಕ ಮಾಹಿತಿ ಕಲೆಹಾಕಿದ್ದಾರೆ ಎಂದು ಗೊತ್ತಾಗಿದೆ.

ಆರ್ಟ್ ಆಫ್ ಲಿವಿಂಗ್‌ನ 45ನೇ ವಾರ್ಷಿಕೋತ್ಸವದಲ್ಲಿ ಭಾಗವಹಿಸಲು ನಗರಕ್ಕೆ ಭಾನುವಾರ ಬಂದಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಸಂಚರಿಸಿದ ನೈಸ್ ರಸ್ತೆಯ ಸಮೀಪದಲ್ಲಿಯೇ ಎರಡು ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿ ಕೆಲಕಾಲ ಆತಂಕಕ್ಕೆ ಕಾರಣವಾಗಿತ್ತು. ಪ್ರಕರಣದ ತನಿಖೆಗೆ ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸಗೌಡ ನೇತೃತ್ವದಲ್ಲಿ ಆರು ತಂಡಗಳನ್ನು ರಚಿಸಲಾಗಿದೆ. ಎನ್ಐಎ ಅಧಿಕಾರಿಗಳು ತನಿಖಾ ತಂಡದಿಂದ ಘಟನೆಯ ಸಂಪೂರ್ಣ ಮಾಹಿತಿ ಪಡೆದು ಕೊಂಡಿದ್ದಾರೆ. ಪ್ರಧಾನಿಯ ಭದ್ರತೆ ವಿಚಾರವಾಗಿದ್ದರಿಂದ ಪ್ರಕರಣದ ತನಿಖೆಯನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಎಂದು ಮೂಲಗಳು ಹೇಳಿವೆ.



ವಶಕ್ಕೆ ಪಡೆದಿರುವ ವ್ಯಕ್ತಿ, ಹಿಂದೆಯೂ ಹಲವು ಬಾರಿ ಹುಸಿ ಬೆದರಿಕೆ ಕರೆ ಮಾಡಿದ್ದ. ಆರೋಪಿ ಮಾನಸಿಕ ಸ್ಥಿತಿಯ ಬಗ್ಗೆ ವೈದ್ಯರಿಂದ ಮಾಹಿತಿ ಕೇಳಿದ್ದೇವೆ

ಸೀಮಾಂತ್ ಕುಮಾರ್ ಸಿಂಗ್, ನಗರ ಪೊಲೀಸ್ ಕಮಿಷನರ್

ಉದ್ದೇಶಪೂರ್ವಕವಾಗಿ ಇಟ್ಟಿರುವ ಶಂಕೆ?: 'ಆರು ತಂಡಗಳು ಎಲ್ಲಾ ಆಯಾಮದಲ್ಲೂ ತನಿಖೆ ನಡೆಸುತ್ತಿವೆ. ಜಿಲೆಟಿನ್ ಕಡ್ಡಿಗಳಿದ್ದ ಬಾಕ್ಸ್‌ವೊಂದನ್ನು ಉದ್ದೇಶಪೂರ್ವಕವಾಗಿ ರಸ್ತೆಬದಿಯಲ್ಲಿ ಇರಿಸಿರುವುದು ಕಂಡುಬಂದಿದೆ. ಸ್ಫೋಟಕಗಳನ್ನು ಎಷ್ಟು ದಿನಗಳ ಹಿಂದೆ ತಂದು ಎಸೆಯಲಾಗಿದೆ ಎಂಬುದು ಪತ್ತೆಯಾಗಿಲ್ಲ. ಕನಕಪುರ ರಾಷ್ಟ್ರೀಯ ಹೆದ್ದಾರಿಯ ಕುಪ್ಪರೆಡ್ಡಿ ಕೆರೆ ಬಳಿಯಿರುವ ಭೈರವ ಮಂಡ್ಯ ಉಪ್ಪುಸಾರು ಮುದ್ದೆ ಹೋಟೆಲ್‌ನಿಂದ ಸ್ವಲ್ಪ ದೂರದಲ್ಲಿ ಬಾಕ್ಸ್ ಎಸೆಯಲಾಗಿತ್ತು' ಎಂದು ಮೂಲಗಳು ಹೇಳಿವೆ.

'ಘಟನಾ ಸ್ಥಳದ ಸುತ್ತಮುತ್ತ ಸಿ.ಸಿ. ಟಿ.ವಿ ಕ್ಯಾಮೆರಾ ಇಲ್ಲ. ನೈಸ್ ರಸ್ತೆಯ ಪ್ರವೇಶ ಮತ್ತು ನಿರ್ಗಮನ ದ್ವಾರಗಳಲ್ಲಿ ಇರುವ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿಗಳ ಪರಿಶೀಲನೆ ನಡೆಸಲಾಗುತ್ತಿದೆ. ಇದುವರೆಗೂ ನಡೆದ ತನಿಖೆಯಲ್ಲಿ ಆರೋಪಿಯ ಸುಳಿವು ಸಿಕ್ಕಿಲ್ಲ' ಎಂದು ಅಧಿಕಾರಿಯೊಬ್ಬರು ಹೇಳಿದರು.

ಬೆಂಗಳೂರು ದಕ್ಷಿಣ ಮತ್ತು ರಾಮನಗರ ಭಾಗದ ಕ್ವಾರಿಗಳಲ್ಲಿ ಬಳಕೆಯಾಗುವ ಜಿಲೆಟಿನ್ ಕಡ್ಡಿಗಳ ಬಗ್ಗೆಯೂ ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಹೊರ ರಾಜ್ಯಕ್ಕೆ ತನಿಖಾ ತಂಡ: ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡಿನಿಂದ ಸ್ಫೋಟಕಗಳನ್ನು ತಂದು ಇಟ್ಟಿರುವ ಶಂಕೆಯಿದೆ. ತನಿಖೆ ವೇಳೆ ಲಭಿಸಿದ ಕೆಲವು ಸುಳಿವು ಆಧರಿಸಿ ವಿಶೇಷ ಪೊಲೀಸ್ ತಂಡವೊಂದು ತಮಿಳುನಾಡಿಗೆ ತೆರಳಿದೆ ಎಂದು ಅಧಿಕಾರಿಯೊಬ್ಬರು ಹೇಳಿದರು.

ಇನ್ನೊಂದೆಡೆ, ಎಚ್ಎಎಲ್ ಹಾಗೂ ಆರ್ಟ್ ಆಫ್ ಲಿವಿಂಗ್‌ನಲ್ಲಿ ಸ್ಫೋಟ ನಡೆಸಲಾಗುವುದು ಎಂದು ಪೊಲೀಸ್ ಕಂಟ್ರೋಲ್ ರೂಂಗೆ ಕರೆ ಮಾಡಿ ಬೆದರಿಕೆ ಹಾಕಿದ್ದ ಆರೋಪಿ, ಕೋರಮಂಗಲದ ನಿವಾಸಿ ಲೋಹಿತ್ ಅವರ ವಿಚಾರಣೆಯನ್ನು ಪೊಲೀಸರು ತೀವ್ರಗೊಳಿಸಿದ್ದಾರೆ.

ಕರೆ ಮಾಡಿದ ಬಳಿಕ ಆರೋಪಿ ಮೊಬೈಲ್ ಫೋನ್ ಸ್ವಿಚ್ ಆಫ್ ಮಾಡಿಕೊಂಡಿದ್ದ. ಲೊಕೇಷನ್ ಆಧಾರದ ಮೇಲೆ ಪತ್ತೆ ಹಚ್ಚಿ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ವರದಿ ತರಿಸಿಕೊಂಡ ಎನ್ಎಸ್‌ಜಿ

ಪ್ರಧಾನಿಯವರ ಭದ್ರತೆಯ ಜವಾಬ್ದಾರಿ ಹೊತ್ತಿರುವ ರಾಷ್ಟ್ರೀಯ ಭದ್ರತಾ ಪಡೆಯ (ಎನ್ಎಸ್‌ಜಿ) ಮುಖ್ಯಸ್ಥರು ಘಟನೆ ಸಂಬಂಧ ರಾಜ್ಯ ಪೊಲೀಸರಿಂದ ಮಾಹಿತಿ ಕೇಳಿದ್ದರು. ಪ್ರಕರಣದ ತನಿಖೆಯ ಪ್ರಾಥಮಿಕ ವರದಿಯನ್ನು ಅವರಿಗೆ ಕಳುಹಿಸಲಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಬೆಂಕಿಕಡ್ಡಿ, ಕರ್ಪೂರದ ಖಾಲಿ ಡಬ್ಬಿಗಳು ಪತ್ತೆ

ಬೆಂಗಳೂರು–ಕನಕಪುರ ರಸ್ತೆಯ ಪೂರ್ವ ದಿಕ್ಕಿನ ಖಾಲಿ ಜಾಗದಲ್ಲಿ ಜಿಪ್ ಹಾಕಿದ್ದ ಪಾರದರ್ಶಕ ಪ್ಲಾಸ್ಟಿಕ್ ಕವರ್‌ವೊಂದು ಪ್ರಧಾನಿ ಸಂಚರಿಸುವ ಮಾರ್ಗದಲ್ಲಿ ಭದ್ರತೆಯ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಪೊಲೀಸ್ ಸಿಬ್ಬಂದಿಗೆ ಸಿಕ್ಕಿತ್ತು. ಅನುಮಾನಗೊಂಡು ಕವರ್ ತೆರೆದು ಪರಿಶೀಲಿಸಿದಾಗ ಅದರೊಳಗೆ ರಟ್ಟಿನ ಬಾಕ್ಸ್ ಇತ್ತು. ಅದರಲ್ಲಿ ಜಿಲೆಟಿನ್ ಕಡ್ಡಿಗಳ ಜತೆಗೆ ಬೆಂಕಿ ಕಡ್ಡಿಗಳು, ಕರ್ಪೂರದ ಖಾಲಿ ಡಬ್ಬಿಗಳು ಇರುವುದು ಕಂಡುಬಂದಿತ್ತು ಎಂದು ಮೂಲಗಳು ಹೇಳಿವೆ.

ಸಿ.ಎಂ ವಿಹಾರ..

ಪ್ರಜಾವಾಣಿ ಚಿತ್ರ



ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ತಮ್ಮ ಕುಟುಂಬದ ಸದಸ್ಯರೊಂದಿಗೆ ಕೊಡಗು ಜಿಲ್ಲೆಯ ಕುಶಾಲನಗರ ತಾಲ್ಲೂಕಿನ ದುಬಾರೆ ಸಾಕಾನೆ ಶಿಬಿರಕ್ಕೆ ಸೋಮವಾರ ಭೇಟಿ ನೀಡಿದರು

ಕಾವ್ಯ ಪುರಸ್ಕಾರಕ್ಕೆ ಕೃತಿ ಆಹ್ವಾನ

ದಾವಣಗೆರೆ: ಟಿ. ಕರಿಬಸವನಗೌಡ ತೂಲಹಳ್ಳಿ ಕಾವ್ಯ ಪುರಸ್ಕಾರಕ್ಕೆ ಕನ್ನಡ ಕವನ ಸಂಕಲನಗಳನ್ನು ಆಹ್ವಾನಿಸಲಾಗಿದೆ.

2025ರಲ್ಲಿ ಪ್ರಕಟವಾಗಿರುವ ಕವನ ಸಂಕಲನಗಳನ್ನು ಮಾತ್ರ ಪುರಸ್ಕಾರಕ್ಕೆ ಪರಿಗಣಿಸಲಾಗುತ್ತದೆ. ಪುರಸ್ಕಾರ ಪ್ರದಾನಕ್ಕೆ ಸಮಾರಂಭ ಏರ್ಪಡಿಸುವುದಿಲ್ಲ, ವಿಜೇತರಿಗೆ ₹ 5,000 ನಗದು ಪುರಸ್ಕಾರ ಹಾಗೂ ಪ್ರಶಸ್ತಿ ಪತ್ರ ಕಳುಹಿಸಿಕೊಡಲಾಗುತ್ತದೆ. ಭಾಗವಹಿಸಲು ವಯಸ್ಸಿನ ಮಿತಿ ಇಲ್ಲ. ಕವನ ಸಂಕಲನ ಕಳುಹಿಸಿಕೊಡಲು ಜುಲೈ 31 ಕೊನೆಯ ದಿನ.

ಆಸಕ್ತರು ನಂ. 239/2-38, ಇ-ಬ್ಲಾಕ್, 1ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಜೆ.ಎಚ್. ಪಟೇಲ್ ಬಡಾವಣೆ, ಶಾಮನೂರು, ದಾವಣಗೆರೆ-577004 ಈ ವಿಳಾಸಕ್ಕೆ ಕವನ ಸಂಕಲನದ 3 ಪ್ರತಿಗಳನ್ನು ಅಂಚೆ ಮೂಲಕ ಮಾತ್ರ ಕಳುಹಿಸಿ ಕೊಡಬೇಕು ಎಂದು ಮಲ್ಲಿಕಾರ್ಜುನ ಗೌಡ ತೂಲಹಳ್ಳಿ ಪ್ರಕಟಣೆ ಮೂಲಕ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ 9480524572 ಸಂಪರ್ಕಿಸಬಹುದು.

ಜೈಲರ್ ಮೇಲೆ ಕೈದಿಗಳ ಹಲ್ಲೆ

ಜಮಖಂಡಿ: ನಗರದ ಹೊರವಲಯದಲ್ಲಿರುವ ಕಾರಾಗೃಹದಲ್ಲಿ ಭಾನುವಾರ ಸಂಜೆ ಕೈದಿಗಳ ನಡುವಿನ ಜಗಳ ಬಿಡಿಸಲು ಯತ್ನಿಸಿದ ಜೈಲರ್ ವಿ.ಡಿ. ಕುಂಬಾರ ಮೇಲೆ ಹಲ್ಲೆ ನಡೆದಿದೆ.

'ಪಡಿತರ ಅಕ್ಕಿ ಅಕ್ರಮ ಸಾಗಣೆ ಪ್ರಕರಣದ ಆರೋಪದ ಮೇಲೆ ಬಂಧಿತರಾಗಿರುವ ಜಾಕೀರ್ ಹುಸೇನ್ ಮಕಾಂದಾರ, ಫಯಾಜ್ ಮಕಾಂದಾರ, ಅಶೋಕ ನಾಯ್ಕೋಡಿ ಮತ್ತು ಅರ್ಫಾತ್ ತಾಳಿಕೋಟಿ ಎಂಬುವರು ಹಲ್ಲೆ ಮಾಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಜೈಲರ್ ಅವರ ಎಡಗೈ ಮೂಳೆ ಮುರಿದಿದ್ದು, ಹಲವು ಕಡೆ ಪೆಟ್ಟು ಬಿದ್ದಿದೆ. ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆದಿದೆ' ಎಂದು ಜಮಖಂಡಿ ಗ್ರಾಮೀಣ ಠಾಣೆ ಪೊಲೀಸರು ತಿಳಿಸಿದ್ದಾರೆ.

ವರ್ಗಾವಣೆ

ಬೆಂಗಳೂರು: ಐಎಎಸ್ ಅಧಿಕಾರಿ ಗಂಗೂ ಬಾಯಿ ಮಾನಕರ ಅವರನ್ನು ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶಿಸಿದೆ.

ಕರ್ನಾಟಕ ರಾಜ್ಯ ಏಡ್ಸ್ ತಡೆ ಮತ್ತು ನಿಯಂತ್ರಣ ಸೊಸೈಟಿಯ ಓಂಬುಡ್ಸ್‌ಮನ್ ಹುದ್ದೆಯಲ್ಲಿ ಅವರು ಕಾರ್ಯನಿರ್ವಹಿಸುತ್ತಿದ್ದರು.

ಹುಬ್ಬಳ್ಳಿ: 16ರಿಂದ ಮೇ ಸಾಹಿತ್ಯ ಮೇಳ

ಹುಬ್ಬಳ್ಳಿ: ಇಲ್ಲಿನ ಅರ್.ಎನ್. ಶೆಟ್ಟಿ ಕಲ್ಯಾಣ ಮಂಟಪದಲ್ಲಿ ಮೇ 16 ಮತ್ತು 17ರಂದು 12ನೇ ಮೇ ಸಾಹಿತ್ಯ ಮೇಳ ಜರುಗಲಿದೆ. 'ಸಾಂವಿಧಾನಿಕ ಪ್ರಜಾಸತ್ತೆಯ ಮೇಲಿನ ದಾಳಿ: ಚಹರೆ ಮತ್ತು ಹೊರದಾರಿಗಳು' ವಿಷಯದ ಮೇಲೆ ವಿವಿಧ ಗೋಷ್ಠಿಗಳು ನಡೆಯಲಿವೆ.

'ವಿವಿಧ ಕ್ಷೇತ್ರಗಳಲ್ಲಿ ಜನಪರ ಸೇವೆ ಸಲ್ಲಿಸಿದ ಮತ್ತು ಸಾಮಾಜಿಕ ಚಳವಳಿಗಳಲ್ಲಿ ಭಾಗಿಯಾದ ಪ್ರಮುಖರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಸಾಹಿತ್ಯ ಮೇಳದ ಸಂಚಾಲಕ ಬಸವರಾಜ ಸೂಳಿಭಾವಿ ತಿಳಿಸಿದರು.

ವಿನೋಬಾ ಒಡನಾಡಿ ಸವಿತಾ ಭಟ್ ನಿಧನ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ ಸೋದರಿ ಸವಿತಾ ಭಟ್ (88) ಹೃದಯಾಘಾತದಿಂದ ನಿಧನರಾಗಿದ್ದಾರೆ.

ಆಚಾರ್ಯ ವಿನೋಬಾ ಭಾವೆ ಅವರ ಭೂದಾನ ಚಳವಳಿಯಲ್ಲಿ ಭಾಗವಹಿಸಿದ್ದ ಅವರು ವಲ್ಲಭ ನಿಕೇತನ ವಿನೋಬಾ ಆಶ್ರಮದ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದರು.

ಅವರು ಪತಿ ವಿ.ಎನ್.ಭಟ್ ಮತ್ತು ಮಗ ನವೀನ್ ಭಟ್ ಅವರನ್ನು ಅಗಲಿದ್ದಾರೆ. ನವೀನ್ ಅವರು ವಿದೇಶದಲ್ಲಿದ್ದು, ಅವರು ವಾಪಸಾದ ನಂತರ ಅಂತಿಮ ಕ್ರಿಯಾವಿಧಿಗಳು ನಡೆಯಲಿವೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಹೆಚ್ಚಿನ ಮಾಹಿತಿಗೆ 080-40945694, 88843 33574 ಸಂಖ್ಯೆಗಳನ್ನು ಸಂಪರ್ಕಿಸಲು ಕೋರಿದೆ.

'ಪ್ರಧಾನಿ ಮೋದಿ ಡೋಂಗಿ ಮಾತು'

ನಮ್ಮನ್ನು ಟೀಕಿಸುವ ಮೊದಲು, ನಿಮ್ಮ ಮನೆ ಉಳಿಸಿಕೊಳ್ಳಿ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತನ್ನ ಎಲೆಯಲ್ಲಿ ಆನೆ ಸತ್ತು ಬಿದ್ದಿದ್ದರೂ, ಇನ್ನೊಬ್ಬರ ಎಲೆಯ ಮೇಲೆ ಸತ್ತುಬಿದ್ದ ನೊಣವನ್ನು ಹುಡುಕಾಡುವ ಡೋಂಗಿಯಂತೆ ಪ್ರಧಾನಿ ನರೇಂದ್ರ ಮೋದಿ ಮಾತನಾಡಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ರಾಜ್ಯ ಬಿಜೆಪಿ ಘಟಕವು ಭಾನುವಾರ ನಗರದಲ್ಲಿ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಮೋದಿ ಅವರು, ಕರ್ನಾಟಕದ ಮುಖ್ಯಮಂತ್ರಿ ಕುರ್ಚಿ ಅಲುಗಾಡುತ್ತಿದೆ ಎಂದಿದ್ದರು. ಮೋದಿ ಅವರ ಆ ಮಾತಿಗೆ ಸಿದ್ದರಾಮಯ್ಯ ಅವರು ಸುದೀರ್ಘ 'ಎಕ್ಸ್' ಪೋಸ್ಟ್ ಮೂಲಕ ತಿರುಗೇಟು ನೀಡಿದ್ದಾರೆ.

'ಮೋದಿ ಅವರು ನಮ್ಮ ಕಾಂಗ್ರೆಸ್ ಸರ್ಕಾರವನ್ನು ಉದ್ದೇಶಿಸಿ ಮಾತನಾಡಿದ್ದರೂ, ಅವರ ಕೇಂದ್ರ ಸರ್ಕಾರದ ವೈಫಲ್ಯ ಮತ್ತು ಬಿಜೆಪಿ ರಾಜ್ಯ ಘಟಕದಲ್ಲಿನ ದುಃಸ್ಥಿತಿಯನ್ನು ಸರಿಪಡಿಸ-ಲಾಗದ ಅಸಹಾಯಕತೆ ಆ ಮಾತಿನಲ್ಲಿತ್ತು' ಎಂದಿದ್ದಾರೆ.

'ಕರ್ನಾಟಕದಲ್ಲಿ ಬಿಜೆಪಿ ನಾಯಕರ ಸ್ಥಿತಿ ಬುಟ್ಟಿಯಲ್ಲಿ ಕೂಡಿ ಹಾಕಿರುವ ಏಡಿಗಳಂತಾಗಿದೆ. ಒಬ್ಬರ ಕಾಲನ್ನು ಮತ್ತೊಬ್ಬರು ಎಳೆದುಕೊಳ್ಳುತ್ತಿದ್ದಾರೆ. ಯಡಿಯೂರಪ್ಪ ಮತ್ತು ಅವರ ಕುಟುಂಬಕ್ಕೆ ಎದುರಾಗಿ ಪಕ್ಷದೊಳಗೆ ಹಲವು ಗುಂಪುಗಳಿವೆ. ಈ ಗುಂಪುಗಳ ನಾಯಕರು ಯಡಿಯೂರಪ್ಪ ವಿರುದ್ಧ ನೂರಾರು ಆರೋಪಗಳನ್ನು ಮಾಡಿದ್ದರೂ ಅವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳುವ ಧೈರ್ಯ 56 ಇಂಚಿನ ಎದೆಯಳತೆಯ ನಾಯಕರಲ್ಲಿ ಇಲ್ಲ' ಎಂದು ಲೇವಡಿ ಮಾಡಿದ್ದಾರೆ.

'2024–25ನೇ ಸಾಲಿನಲ್ಲಿಯೇ ಭಾರತವನ್ನು 5 ಲಕ್ಷ ಕೋಟಿ ಡಾಲರ್ ಮೌಲ್ಯದ ಆರ್ಥಿಕತೆಯನ್ನಾಗಿ ಮಾಡುವೆ ಎಂದು ಕೊಚ್ಚಿಕೊಂಡಿದ್ದ, ಅಭಿವೃದ್ಧಿಯು ನಾಗಾಲೋಟದಿಂದ ಓಡುತ್ತಿದೆ ಎಂದು ಬೀಗಿದ್ದ, ಬಡತನವನ್ನು ನಿರ್ಮೂಲನೆ ಮಾಡಿದ್ದೇವೆಂದು ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಂಡಿದ್ದ ಮೋದಿ ಅವರು ಈಗ, ಚಿನ್ನ ಖರೀದಿಸಬೇಡಿ ಎನ್ನುತ್ತಿ-ದ್ದಾರೆ. ಪೆಟ್ರೋಲ್, ಅಡುಗೆ ಎಣ್ಣೆ ಬಳಕೆ ಕಡಿಮೆ ಮಾಡಿ, ರಸಗೊಬ್ಬರ ಬಳಕೆ ಇಳಿಸಿ ಎಂದು ಬೇಡಿಕೊಳ್ಳುತ್ತಿರುವುದು ಯಾವ ಅಭಿವೃದ್ಧಿಯ ಲಕ್ಷಣ' ಎಂದು ಪ್ರಶ್ನಿಸಿದ್ದಾರೆ.

'ಮೋದಿ ತಮ್ಮ ಪಕ್ಷದ ವಿಶ್ವಾಸ ದ್ರೋಹದ ಚರಿತ್ರೆಯನ್ನು ಒಮ್ಮೆ ನೆನಪು ಮಾಡಿಕೊಂಡಿದ್ದರೆ ಅವರು ಖಂಡಿತ ಕಾಂಗ್ರೆಸ್ ಪಕ್ಷದ ಮೇಲೆ ವಿಶ್ವಾಸದ್ರೋಹದ ಆರೋಪವನ್ನು ಮಾಡುತ್ತಿರಲಿಲ್ಲ. ಬಿಎಸ್‌ಪಿ, ಟಿಎಂಸಿ, ಡಿಎಂಕೆ, ಎಐಡಿಎಂಕೆ, ಪಿಡಿಪಿ, ಶಿವಸೇನೆ, ಅಕಾಲಿದಳ, ನ್ಯಾಷನಲ್ ಕಾನ್ಫರೆನ್ಸ್ ಒಳಗೊಂಡು ಬಿಜೆಪಿ ಜತೆ ಮೈತ್ರಿ ಮಾಡಿಕೊಂಡು ವಿಶ್ವಾಸದ್ರೋಹಕ್ಕೊಳಗಾದ ಪ್ರಾದೇಶಿಕ ಪಕ್ಷಗಳ ಪಟ್ಟಿ ಬೆಳೆಯುತ್ತಲೇ ಇದೆ' ಎಂದಿದ್ದಾರೆ.

'ಕನ್ನಡಿಗರಿಗೆ ಮಾಡಿದ ಅನ್ಯಾಯಕ್ಕೆ ಉತ್ತರಿಸಿ'

'ಪ್ರಧಾನಿ ನರೇಂದ್ರ ಮೋದಿ ಅವರು ಕುರ್ಚಿ ರಾಜಕಾರಣದ ಬಗ್ಗೆ ಮಾತನಾಡುವ ಬದಲು, 12 ವರ್ಷಗಳಲ್ಲಿ ತಮ್ಮ ಸರ್ಕಾರದಿಂದ ಕರ್ನಾಟಕದ 6.50 ಕೋಟಿ ಜನರಿಗೆ ಆಗಿರುವ ಅನ್ಯಾಯದ ಕುರಿತು ಮಾತನಾಡಲಿ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ.

'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, '12 ವರ್ಷಗಳಿಂದ ಕನ್ನಡ ನಾಡಿನ ಜೀವನಾಡಿ ಯೋಜನೆಗಳು ದೆಹಲಿಯಲ್ಲಿ ದೂಳು ಹಿಡಿಯುತ್ತಿವೆ. ಬೆಂಗಳೂರಿನ ಕುಡಿಯುವ ನೀರಿನ ಯೋಜನೆಗೆ ಪರಿಸರ ಅನುಮತಿ ನೀಡದೆ ನಿಮ್ಮ ಸರ್ಕಾರ ಸತಾಯಿಸುತ್ತಿದೆ. ಭದ್ರಾ ಮೇಲ್ದಂಡೆ ಯೋಜನೆಗೆ ಬಿಡಿಗಾಸೂ ಬಿಡುಗಡೆ ಮಾಡಿಲ್ಲ. ಮಹಾದಾಯಿ ಯೋಜನೆಗೆ ಅಧಿಸೂಚನೆ ಹೊರಡಿಸುವಲ್ಲಿ ವೃಥಾ ವಿಳಂಬ ಮಾಡಲಾಗುತ್ತಿದೆ. ನಮ್ಮನ್ನು ಟೀಕಿಸುವ ಬದಲಿಗೆ, ಕನ್ನಡಿಗರಿಗೆ ನಿಮ್ಮ ಸರ್ಕಾರ ಮಾಡಿರುವ ಅನ್ಯಾಯಗಳ ಕುರಿತು ಉತ್ತರಿಸಿ' ಎಂದು ಪ್ರಧಾನಿಗೆ ಸವಾಲು ಹಾಕಿದ್ದಾರೆ.

'ಮೋದಿ ಕುರ್ಚಿ ಗಟ್ಟಿಯಾಗಿದೆಯೇ?'

'ಪ್ರಧಾನಿ ಮೋದಿ ಅವರು ಕರ್ನಾಟಕದ ಮುಖ್ಯಮಂತ್ರಿ ಕುರ್ಚಿಯ ಬಗ್ಗೆ ಮಾತನಾಡುವ ಮೊದಲು, ತಮ್ಮ ಕುರ್ಚಿ ಗಟ್ಟಿಯಾಗಿದೆಯೇ ಎಂದು ನೋಡಿಕೊಳ್ಳಲಿ' ಎಂದು ವಿಧಾನ ಪರಿಷತ್ತಿನ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ತಿವಿದಿದ್ದಾರೆ. 'ನರೇಂದ್ರ ಮೋದಿಯವರನ್ನು ನಾನು ಯಾವಾಗ ಬೇಕಾದರೂ ಇಳಿಸಬಹುದು ಎಂದು ಅಮೆರಿಕ ಅಧ್ಯಕ್ಷ ಟ್ರಂಪ್ ಹೇಳಿದ್ದಾರೆ. ಎಪ್‌ಸ್ಟೈನ್ ಫೈಲ್ಸ್‌ನಲ್ಲಿರುವ ಇವರ ಲೀಲೆಗಳು ಹೊರಗಡೆ ಬರಲಿವೆ. ಆಗ ಮೋದಿ ತಮ್ಮ ಕುರ್ಚಿ ಹೇಗೆ ಉಳಿಸಿಕೊಳ್ಳಲಿದ್ದಾರೆ ಎಂಬುದನ್ನು ಜನರಿಗೆ ತಿಳಿಸಲಿ' ಎಂದಿದ್ದಾರೆ.



ತಾವೇ ಉಚ್ಚಾಟಿಸಿದ್ದ ನಾಯಕರ ಕರೆತಂದು ಚುನಾವಣಾ ಪ್ರಚಾರ ಮಾಡಿಸುವಷ್ಟರ ಮಟ್ಟಿಗೆ ಬಿಜೆಪಿ ರಾಜ್ಯ ಘಟಕದ ಸ್ಥಿತಿ ಕೆಟ್ಟುಹೋಗಿದೆ. ಮೋದಿ ಅವರೇ, ಕುಸಿದು ಬೀಳುತ್ತಿರುವ ನಿಮ್ಮ ಮನೆಯನ್ನು ಮೊದಲು ಭದ್ರಮಾಡಿಕೊಳ್ಳಿ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಪ್ರಧಾನಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನೆ

'ಬೆಲೆ ಏರಿಕೆ ಯಾರಿಂದ? ಉತ್ತರಿಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿನ್ನ ಖರೀದಿ ಮಾಡಬೇಡಿ, ಇಂಧನ ಬಳಕೆ ಕಡಿಮೆ ಮಾಡಿ ಎನ್ನುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಬೆಲೆ ಏರಿಕೆ ಏಕೆ? ಯಾರಿಂದ ಆಗಿದೆ ಎನ್ನುವುದನ್ನೂ ವಿವರಿಸಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಗ್ರಹಿಸಿದರು.



ಡಿ.ಕೆ. ಶಿವಕುಮಾರ್

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮದುವೆ ಸಮಾರಂಭಕ್ಕೆ ಚಿನ್ನ ಖರೀದಿಸದೆ ಇರಲು ಸಾಧ್ಯವೇ? ಮಹಿಳೆ ಚಿನ್ನದ ತಾಳಿ, ಸರ ಹಾಕಿಕೊಳ್ಳುವುದು ಬೇಡವೇ? ಕಷ್ಟವಿದ್ದರೂ ಜನರು ಸಾಲ ಮಾಡಿ ಚಿನ್ನ ಖರೀದಿ ಮಾಡುತ್ತಾರೆ. ಇಂತಹ ವಿಷಯಗಳಲ್ಲಿ ಉಚಿತ ಸಲಹೆಗಳು ಪ್ರಯೋಜನಕ್ಕೆ ಬರುವುದಿಲ್ಲ. ಅದರ ಬದಲಿಗೆ ಬೆಲೆ ಏರಿಕೆ ನಿಯಂತ್ರಿಸಬೇಕು. ಜನರು ಸುಲಭವಾಗಿ ಚಿನ್ನ ಖರೀದಿಸಲು ಅವಕಾಶ ಮಾಡಿಕೊಡಬೇಕು' ಎಂದು ಒತ್ತಾಯಿಸಿದರು.

'ಕೋವಿಡ್ ಸಮಯದಲ್ಲಿ ದೀಪ ಹಚ್ಚಿಸಿ, ತಟ್ಟೆ ಬಾರಿಸಲು ಹೇಳಿದ್ದರು. ಅದರಿಂದ ಸಮಸ್ಯೆ ನಿಂತು ಹೋಯಿತಾ? ಸಾರ್ವಜನಿಕ ಸಾರಿಗೆ ಬಳಸಿ ಎಂದು ಜನರಿಗೆ ಬುದ್ಧಿ ಹೇಳುವ ಮೊದಲು ಕೇಂದ್ರ ಸರ್ಕಾರದ ಸಚಿವರು, ಅಧಿಕಾರಿಗಳು ಸಾರ್ವಜನಿಕ ಸಾರಿಗೆಯಲ್ಲಿ ಸಂಚರಿಸಲು ಸೂಚಿಸಬೇಕು. ಬಿಜೆಪಿ ಕಾರ್ಯಕರ್ತರು ಮೊದಲು ತ್ಯಾಗ ಮಾಡಬೇಕು. ನಂತರ ಜನರಿಗೆ ಸಂದೇಶ ನೀಡಬೇಕು' ಎಂದು ಅವರು ಸಲಹೆ ನೀಡಿದರು.

'ಮಲೇಷ್ಯಾ ಅಣಬೆ ತಿನ್ನುವುದನ್ನು ನಿಲ್ಲಿಸಲಿ'

'ಮೋದಿ ಅವರು ಈಗ ಪೆಟ್ರೋಲ್ ಮಿತವ್ಯಯ ಮಾಡಿ, ಚಿನ್ನ ಖರೀದಿ ಮಾಡಬೇಡಿ, ವಿದೇಶ ಪ್ರವಾಸಕ್ಕೆ ಹೋಗಬೇಡಿ ಎನ್ನುತ್ತಿದ್ದಾರೆ. ಐದು ತಿಂಗಳಿಂದ ಏನು ಮಾಡುತ್ತಿದ್ದರು? ಮಲೇಷ್ಯಾ, ಇಂಡೋನೇಷ್ಯಾದಿಂದ ಅಣಬೆ ತಂದು ತಿನ್ನುವುದನ್ನು ನಿಲ್ಲಿಸಲಿ ಎಂದು ವಿಧಾನ ಪರಿಷತ್ತಿನ ಕಾಂಗ್ರೆಸ್ ಸದಸ್ಯ ಬಿ.ಕೆ.ಹರಿಪ್ರಸಾದ್ ಹೇಳಿದ್ದಾರೆ.

ಇವರಿಗೆ ₹8,000 ಕೋಟಿ ವಿಮಾನ ಬೇಕು. ಮಿತವ್ಯಯ ಮಾಡಬೇಕಾದರೆ ಮೊದಲು ಸಾಮಾನ್ಯ ವಿಮಾನ ಬಳಕೆ ಮಾಡಬೇಕು. ಸಣ್ಣ ಕಾರಿನಲ್ಲಿ ಸಂಚರಿಸಬೇಕು. ಇಂದಿರಾ ಗಾಂಧಿ ಅವರು ಅಂಬಾಸಿಡರ್ ಕಾರಿನಲ್ಲಿ ಓಡಾಡುತ್ತಿದ್ದರು. ಇಂದು ಜನ ಸಾಮಾನ್ಯರು ಜೀವನ ನಡೆಸುವುದೇ ಕಷ್ಟವಾಗಿದೆ. ಸಾಮಾನ್ಯರ ಕಷ್ಟ ಬಿಜೆಪಿ ನಾಯಕರಿಗೆ ಅರ್ಥವಾಗುವುದೇ ಇಲ್ಲ' ಎಂದು ಟೀಕಿಸಿದರು.



ಬಿ.ಕೆ. ಹರಿಪ್ರಸಾದ್

'ಸಿಬ್ಬಂದಿಗೆ ಬಹುಮಾನ ಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಡುಗಳ್ಳ ವೀರಪ್ಪನ್ ಹಿಡಿಯಲು ನೇಮಕಗೊಂಡಿದ್ದ ವಿಶೇಷ ಕಾರ್ಯಾಚರಣೆ ಪಡೆಯ (ಎಸ್‌ಟಿಎಫ್) ಭಾಗವಾಗಿದ್ದ 72 ಮಂದಿಗೆ ಬಹುಮಾನದ ಮೊತ್ತವನ್ನು ಮೂರು ತಿಂಗಳಲ್ಲಿ ಪಾವತಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರ ಮತ್ತು ಅರಣ್ಯ ಇಲಾಖೆಗೆ ನಿರ್ದೇಶಿಸಿದೆ.



ಚಾಮರಾಜನಗರದ ಹನೂರು ತಾಲ್ಲೂಕಿನ ಎ.ಶ್ರೀನಿವಾಸ ಹಾಗೂ ಇತರರು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ, '2005ರ ಜುಲೈ 8ರ ಸರ್ಕಾರಿ ಆದೇಶದ ಅನುಸಾರ ಫಲಾನು-ಭವಿಗಳಿಗೆ ಬಹುಮಾನ ವಿತರಿಸಬೇಕು' ಎಂದು ಆದೇಶಿಸಿದೆ.

'ಹೈಕೋರ್ಟ್‌ನ ಸಮನ್ವಯ ನ್ಯಾಯಪೀಠವು 2024ರ ಆಗಸ್ಟ್ 12ರಂದು ನೀಡಿರುವ ತೀರ್ಪಿನ ಪ್ರಕಾರ ಈಗಾಗಲೇ ಪರಿಹಾರ ಪಡೆದಿರುವವರು ಮತ್ತು ಹಾಲಿ ಅರ್ಜಿದಾರರ ನಡುವೆ ತಾರತಮ್ಯ ಮಾಡಲಾಗದು. ಈಗಾಗಲೇ ಯಾರೆಲ್ಲಾ ಪರಿಹಾರ ಪಡೆದಿದ್ದಾರೋ ಅವರಂತೆಯೇ ಅರ್ಜಿದಾರರೂ ಬಹುಮಾನಕ್ಕೆ ಅರ್ಹರಾಗಿದ್ದಾರೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಈ ಹಿಂದೆ ಸಮನ್ವಯ ನ್ಯಾಯಪೀಠ 17 ಮಂದಿಗೆ ಪರಿಹಾರ ಬಿಡುಗಡೆ ಮಾಡಲು ಆದೇಶಿಸಿತ್ತು. 'ವೀರಪ್ಪನ್‌ನನ್ನು ಒಂದು ದಿನದಲ್ಲಿ ಯಾರೋ ಕೆಲವು ಸಿಬ್ಬಂದಿ ಮಾತ್ರವೇ ಹತ್ಯೆ ಮಾಡಿಲ್ಲ. ಇದಕ್ಕೂ ಮುನ್ನ ಹಲವರು ತಮ್ಮ ಜೀವ ಪಣಕ್ಕಿಟ್ಟು ಮಾಹಿತಿ ಸಂಗ್ರಹಿಸಿ, ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದಾರೆ' ಎಂದಿತ್ತು.

ವೀರಪ್ಪನ್‌ನನ್ನು 2004ರ ಅ.18ರಂದು ಹತ್ಯೆ ಮಾಡಲಾಗಿತ್ತು. ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಸಿಬ್ಬಂದಿಗೆ ಬಹುಮಾನ ನೀಡುವಂತೆ ಪೊಲೀಸ್ ಮಹಾನಿರ್ದೇಶಕರು 2005ರ ಜ.24 ರಂದು ಸರ್ಕಾರಕ್ಕೆ ಶಿಫಾರಸು ಮಾಡಿದ್ದರು. ಇದನ್ನು 2005ರ ಜುಲೈ 8ರಂದು ಸರ್ಕಾರ ಒಪ್ಪಿಕೊಂಡಿತ್ತು.

ಇದರ ಭಾಗವಾಗಿ ರೂಪಿಸಿದ ಯೋಜನೆಯ ಪ್ರಕಾರ ಎಸ್‌ಟಿಎಫ್‌ನಲ್ಲಿ ಮೂರು ವರ್ಷಕ್ಕೂ ಹೆಚ್ಚು ಕೆಲಸ ಮಾಡಿದವರಿಗೆ ₹3 ಲಕ್ಷ, ಎರಡು ಅಥವಾ ಮೂರು ವರ್ಷದೊಳಗೆ ಕೆಲಸ ಮಾಡಿದವರಿಗೆ ₹2 ಲಕ್ಷ ಮತ್ತು ಒಂದು ಅಥವಾ ಎರಡು ವರ್ಷ ಕೆಲಸ ಮಾಡಿದ ಸಿಬ್ಬಂದಿಗೆ ₹1 ಲಕ್ಷ ಹಾಗೂ ಒಂದು ವರ್ಷದ ಒಳಗೆ ಕೆಲಸ ಮಾಡಿದ ಸಿಬ್ಬಂದಿಗೆ ₹50 ಸಾವಿರ ನೀಡಲಾಗುವುದು' ಎಂದು ಘೋಷಿಸಲಾಗಿತ್ತು.

ವೀರಪ್ಪನ್ ಸೆರೆಹಿಡಿಯುವ ಕಾರ್ಯಾಚರಣೆಯಲ್ಲಿ ನಿವೃತ್ತ ಅರಣ್ಯ ರಕ್ಷಕರು, ವಾಚರ್, ಚಾಲಕರು, ಉಪ ಅರಣ್ಯ ಸಂರಕ್ಷಕರು, ಸಹಾಯಕ ಅರಣ್ಯ ರಕ್ಷಕರು, ಕ್ಷೇತ್ರ ಅರಣ್ಯ ರಕ್ಷಕರೂ ಭಾಗಿಯಾಗಿದ್ದರು.

ಏತನ್ಮಧ್ಯೆ, 'ಬಹುಮಾನದ ಮೊತ್ತ ಖಾಲಿಯಾಗಿರುವುದರಿಂದ ವೀರಪ್ಪನ್ ಹತ್ಯೆಯಾದ ದಿನ ಸ್ಥಳದಲ್ಲಿದ್ದ ಆರು ಮಂದಿ ಎಸ್‌ಟಿಎಫ್ ಸಿಬ್ಬಂದಿಗೆ ಮಾತ್ರ ಬಹುಮಾನದ ಮೊತ್ತವನ್ನು ನೀಡಲಾಗುವುದು' ಎಂದು ರಾಜ್ಯ ಸರ್ಕಾರ ಹೇಳಿತ್ತು. ಈ ವಾದವನ್ನು ಹೈಕೋರ್ಟ್ ತಿರಸ್ಕರಿಸಿತ್ತು.

'ಸರ್ಕಾರ ಮಾಡುವ ವಾಗ್ದಾನಕ್ಕೆ ಮಹತ್ವವಿದೆ'

'ವೀರಪ್ಪನ್ ಸದೆಬಡಿಯುವ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದವರಲ್ಲಿ ಕೆಲವರಿಗೆ ಮಾತ್ರವೇ ಬಹುಮಾನದ ಮೊತ್ತವನ್ನು ಸೀಮಿತಗೊಳಿಸಿದ್ದ ರಾಜ್ಯ ಸರ್ಕಾರದ ನಿಲುವನ್ನು ಈ ಹಿಂದೆ ನ್ಯಾಯಾಲಯವು ಕಟುವಾಗಿ ಟೀಕಿಸಿತ್ತು. 'ನೀಡಿರುವ ಮಾತನ್ನು ಉಳಿಸಿಕೊಳ್ಳಬೇಕೆ ವಿನಾ ಅದನ್ನು ಮುರಿಯಬಾರದು. ಅದರಲ್ಲೂ ಸಾರ್ವಭೌಮ ರಾಜ್ಯವು ನೀಡುವ ವಾಗ್ದಾನಕ್ಕೆ ತನ್ನದೇ ಆದ ಮಹತ್ವ ಇರುತ್ತದೆ' ಎಂದು ನ್ಯಾಯಪೀಠ ಕುಟುಕಿತ್ತು.

ಪರಿಶಿಷ್ಟ ಜಾತಿ ಮೇಲಿನ ದೌರ್ಜನ್ಯ; ಶಿಕ್ಷೆ ಪ್ರಮಾಣ ಕನಿಷ್ಠ

● ಜಯಸಿಂಹ ಆರ್.

ಬೆಂಗಳೂರು: ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳ ಜನರ ಮೇಲಿನ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಪ್ರತಿ ವರ್ಷ ಏರಿಕೆಯಾಗುತ್ತಲೇ ಇದ್ದು, 2024ರಲ್ಲಿ 2,016 ಪ್ರಕರಣಗಳು ದಾಖಲಾಗಿವೆ. ಈ ಪೈಕಿ ಶಿಕ್ಷೆಯಾಗಿದ್ದು ಒಂದರಲ್ಲಿ ಮಾತ್ರ.

ಇಂತಹ ಪ್ರಕರಣಗಳಲ್ಲಿ ಶಿಕ್ಷೆಯಾಗುತ್ತಿರುವ ಪ್ರಮಾಣ ಅತ್ಯಂತ ಕಡಿಮೆ ಇರುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕವು ಮೂರನೇ ಸ್ಥಾನದಲ್ಲಿದೆ.

ಪರಿಶಿಷ್ಟ ಜಾತಿ (ದೌರ್ಜನ್ಯ ತಡೆ) ಕಾಯ್ದೆ ಅಡಿಯಲ್ಲಿ ರಾಜ್ಯದಾದ್ಯಂತ 2021ರಲ್ಲಿ ಒಟ್ಟು 1,673 ಪ್ರಕರಣಗಳು ದಾಖಲಾಗಿದ್ದವು. ನಂತರದ ಪ್ರತಿ ವರ್ಷವೂ ಈ ಸಂಖ್ಯೆ ಏರಿಕೆಯಾಗಿದೆ. 2024ರಲ್ಲಿ 2,016ಕ್ಕೆ ತಲುಪಿದೆ ಎಂಬ ದತ್ತಾಂಶ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊವಿನ (ಎನ್‌ಸಿಆರ್‌ಬಿ) 'ಭಾರತದಲ್ಲಿ ಅಪರಾಧ–2024' ವರದಿಯಲ್ಲಿ ಇದೆ.


2024ರಲ್ಲಿ ರಾಜ್ಯದ ವಿವಿಧೆಡೆ ಜಾತಿ ನಿಂದನೆ, ಅಸ್ಪೃಶ್ಯತೆ ಆಚರಣೆ, ಸಾಮಾಜಿಕ ಬಹಿಷ್ಕಾರ, ಪ್ರವೇಶ ನಿರಾ-ಕರಣೆಯಂತಹ ಕಾನೂನುಬಾಹಿರ ಕೃತ್ಯಗಳಿಗೆ ಒಟ್ಟು 2,718 ಜನರು ಗುರಿಯಾಗಿದ್ದಾರೆ. ಈ ಸಂಬಂಧ ಪರಿಶಿಷ್ಟ ಜಾತಿ (ದೌರ್ಜನ್ಯ ತಡೆ) ಕಾಯ್ದೆ ಅಡಿಯಲ್ಲಿ 1,985 ಪ್ರಕರಣಗಳು ದಾಖಲಿಸಲಾಗಿದೆ. ಈ ಕಾಯ್ದೆಯ ವಿವಿಧ ಸೆಕ್ಷನ್‌ಗಳ-ನ್ನು ಒಳಗೊಂಡು 245 ಅತ್ಯಾಚಾರ, 206 ಹಲ್ಲೆ, 62 ಕೊಲೆ ಮತ್ತು 148 ಕೊಲೆ ಯತ್ನ ಪ್ರಕರಣಗಳನ್ನು ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ದಾಖಲಿಸಲಾಗಿದೆ.

2,016 ಪ್ರಕರಣಗಳ ಪೈಕಿ 312 ಸುಳ್ಳು ಮತ್ತು ಸಾಕ್ಷ್ಯ ಇಲ್ಲದ ಪ್ರಕರಣಗಳು ಎಂದು ಪೊಲೀಸರು ವರದಿ ಸಲ್ಲಿಸಿದ್ದಾರೆ. ತನಿಖೆ ನಡೆಸಿ 1,573 ಪ್ರಕರಣಗಳಲ್ಲಿ ಆರೋಪಪಟ್ಟಿ-ಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಹಳೆಯವನ್ನೂ ಒಳಗೊಂಡು 2024ರ ಅವಧಿಯಲ್ಲಿ ಒಟ್ಟು 12,871 ಪ್ರಕರಣಗಳು ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆ ಹಂತ-ದಲ್ಲಿದ್ದವು. ಈ ಪೈಕಿ 809 ಪ್ರಕರಣಗಳನ್ನು ನ್ಯಾಯಾಲಯಗಳು ವಿಲೇವಾರಿ ಮಾಡಿವೆ. ಆದರೆ, 766 ಪ್ರಕರಣಗಳಲ್ಲಿ ಆರೋಪಿಗಳನ್ನು ಖುಲಾಸೆ ಮಾಡಲಾಗಿದೆ. 2024ಕ್ಕೂ ಮೊದಲು ದಾಖಲಾಗಿದ್ದ ಪ್ರಕರಣಗಳ ಪೈಕಿ 24 ಸೇರಿ ಒಟ್ಟು 25 ಪ್ರಕರಣಗಳಲ್ಲಿ ಶಿಕ್ಷೆ ಪ್ರಕಟವಾಗಿದೆ.

ದೇಶದೆಲ್ಲೆಡೆ ಈ ಅವಧಿಯಲ್ಲಿ ನ್ಯಾಯಾಲಯಗಳು 17,156 ಪ್ರಕರಣಗಳನ್ನು ವಿಲೇವಾರಿ ಮಾಡಿ, 5,757ರಲ್ಲಿ ಶಿಕ್ಷೆ ಪ್ರಕಟಿಸಿವೆ. ಇಂತಹ ಪ್ರಕರಣಗಳಲ್ಲಿ ಶಿಕ್ಷೆಯಾದ ಪ್ರಕರಣಗಳ ರಾಷ್ಟ್ರೀಯ ಸರಾಸರಿ ಪ್ರಮಾಣ ಶೇ 33.9ರಷ್ಟಿದೆ. ರಾಜ್ಯದಲ್ಲಿ ನ್ಯಾಯಾಲಯಗಳು ವಿಲೇವಾರಿ ಮಾಡಿದ 809 ಪ್ರಕರಣಗಳಿಗೆ ಹೋಲಿಸಿದರೆ, ಶಿಕ್ಷೆಯಾದ ಪ್ರಕರಣಗಳ ಪ್ರಮಾಣ ಶೇ 3.2ರಷ್ಟು ಮಾತ್ರ. ಪಶ್ಚಿಮ ಬಂಗಾಳ (ಶೇ 1.8) ಮತ್ತು ಆಂಧ್ರ ಪ್ರದೇಶ (ಶೇ 2.4) ಹೊರತುಪಡಿಸಿ ಶಿಕ್ಷೆ ಪ್ರಮಾಣ ಅತ್ಯಂತ ಕಡಿಮೆ ಇರುವುದು ಕರ್ನಾಟಕದಲ್ಲಿ.

ಎನ್‌ಸಿಆರ್‌ಬಿ ವರದಿ

ಏರುಹಾದಿಯಲ್ಲಿ ದೌರ್ಜನ್ಯ ಪ್ರಕರಣಗಳು



ರಾಜೇಗೌಡ ಶಾಸಕತ್ವ ಮರುಸ್ಥಾಪನೆ

ಒಂದನೇ ಪುಟದಿಂದ...

ರಾಜೇಗೌಡ ಅವರ ಸಮೀಪದ ಪ್ರತಿಸ್ಪರ್ಧಿ ಡಿ.ಎನ್.ಜೀವರಾಜ್ ಹೈಕೋರ್ಟ್‌ಗೆ ಚುನಾವಣಾ ತಕರಾರು ಅರ್ಜಿ ಸಲ್ಲಿಸಿ, '1951ರ ಜನತಾ ಪ್ರಾತಿನಿಧ್ಯ ಕಾಯ್ದೆ ಮತ್ತು ಚುನಾವಣಾ ಆಯೋಗ ಹೊರಡಿಸಿದ ಚುನಾವಣಾ ಅಧಿಕಾರಿಯ ಕೈಪಿಡಿಯ ನಿಬಂಧನೆಗಳ ಪ್ರಕಾರ, ಪ್ರತಿವಾದಿ ವಿಜೇತ ಅಭ್ಯರ್ಥಿಯು ಚುನಾವಣೆಯಲ್ಲಿ ಎಸಗಿರುವ ದುಷ್ಕೃತ್ಯಗಳು, ಅಪರಾಧಗಳು, ಅನೈತಿಕ ಕೃತ್ಯಗಳು ಮತ್ತು ಲೋಪಗಳ ಆರೋಪಗಳನ್ನು ಪರಿಗಣಿಸಬೇಕು. ಕ್ಷೇತ್ರದಲ್ಲಿ ಚಲಾವಣೆಯಾದ ಮತಗಳನ್ನು ಕಾನೂನಿನ ಪ್ರಕಾರ ಮರು ಎಣಿಕೆ ಮಾಡಲು ಆದೇಶಿಸಿ ಫಲಿತಾಂಶವನ್ನು ಹೊಸದಾಗಿ ಘೋಷಿಸಲು ಕೋರಿದ್ದರು.

ಹೈಕೋರ್ಟ್ ಆದೇಶದ ಕಾರಣದಿಂದ ಇತ್ತೀಚೆಗೆ ಮರು ಮತ ಎಣಿಕೆ ನಡೆಸಲಾಗಿತ್ತು.

2023ರಲ್ಲಿ ಸಿಂಧುವಾಗಿದ್ದ 1,540 ಮತಗಳಲ್ಲಿ 255 ಮತಗಳು ಮರು ಮತ ಎಣಿಕೆ ವೇಳೆ ಅಸಿಂಧುವಾಗಿದ್ದರಿಂದ ರಾಜೇಗೌಡ ಅವರ ಶಾಸಕ ಸ್ಥಾನಕ್ಕೆ ಕುತ್ತು ಉಂಟಾಗಿತ್ತು. 52 ಮತಗಳ ಮುನ್ನಡೆ ಸಾಧಿಸಿದ್ದ ಜೀವರಾಜ್ ಅವರನ್ನು ಚುನಾಯಿತ ಎಂದು ಘೋಷಿಸಲಾಗಿತ್ತು.

ಸುಪ್ರೀಂ ಕೋರ್ಟ್ ವಿಚಾರಣೆಯನ್ನು ಮೇ 21ಕ್ಕೆ ಮುಂದೂಡಿ ಮಧ್ಯಂತರ ಆದೇಶ ನೀಡಿದೆ. ಚುನಾವಣಾ ಆಯೋಗಕ್ಕೂ ನೋಟಿಸ್ ನೀಡಿದೆ. 21ರವರೆಗೆ ಕಾಯುತ್ತೇನೆ

ಡಿ.ಎನ್.ಜೀವರಾಜ್, ಬಿಜೆಪಿ ಅಭ್ಯರ್ಥಿ

ಶೃಂಗೇರಿ: ಕಾಂಗ್ರೆಸ್ ಸಂಭ್ರಮ

ಚಿಕ್ಕಮಗಳೂರು: ಸುಪ್ರೀಂ ಕೋರ್ಟ್ ಮಧ್ಯಂತರ ಆದೇಶ ನೀಡಿದ ವಿಷಯ ತಿಳಿ-ಯುತ್ತಿದ್ದಂತೆ ಕ್ಷೇತ್ರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು.

ಶೃಂಗೇರಿ, ನರಸಿಂಹರಾಜಪುರ ಮತ್ತು ಕೊಪ್ಪದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ನರಸಿಂಹರಾಜಪುರದಲ್ಲಿ ಪೇಟೆ ಆಂಜನೇಯಸ್ವಾಮಿ ದೇವಸ್ಥಾನ, ಬಸ್ತಿಮಠದ ಜ್ವಾಲಾಮಾಲಿನ ದೇವಿ, ಜಾಮಿಯಾ ಮಸೀದಿ, ರೋಮನ್ ಕ್ಯಾತೋಲಿಕ್ ಚರ್ಚ್‌ನಲ್ಲಿ ಕಾರ್ಯಕರ್ತರು ಪ್ರಾರ್ಥನೆ ಸಲ್ಲಿಸಿದರು.



ಕಟ್ಟುವೆವು...

ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ಮೈಸೂರು ಹೊರವಲಯದ ನಂಜನಗೂಡು ರಸ್ತೆಯ ಮರವೊಂದರಲ್ಲಿ ಗೀಜಗಗಳು ತನ್ಮಯತೆಯಿಂದ ಗೂಡು ಕಟ್ಟುತ್ತಿದ್ದವು

ಸಿಂಧನೂರು: ಬಂಗಾರದ ವ್ಯಾಪಾರಿ ಆತ್ಮಹತ್ಯೆ



ಪ್ರಾಣೇಶ

ಸಿಂಧನೂರು (ರಾಯಚೂರು ಜಿಲ್ಲೆ): ಇಲ್ಲಿನ ಸಮರ್ಥ ಜ್ಯುವೆಲ್ಲರ್ಸ್‌ನ ಮಾಲೀಕ ಪ್ರಾಣೇಶ ವರ್ಣೇಕರ್ (41) ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಬಂಗಾರದ ದರದಲ್ಲಿ ಏರಿಳಿತವಾಗುತ್ತಿರುವ ಕಾರಣ ಅಂಗಡಿ ನಡೆಸುವುದು ಕಷ್ಟವಾಗಿದೆ' ಎಂದು ಮರಣಕ್ಕೂ ಮುನ್ನ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

'ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಹಕ್ಕುಗಳ ರಕ್ಷಣೆ ಕಾಯ್ದೆ' ತಿದ್ದುಪಡಿ ಪ್ರಶ್ನಿಸಿದ್ದ ಅರ್ಜಿ

'ಲೈಂಗಿಕ ಅಲ್ಪಸಂಖ್ಯಾತರ ಚಿಕಿತ್ಸೆ ಮುಂದುವರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮನ್ನು ಮಹಿಳೆಯರು ಎಂದು ಗುರುತಿಸಿಕೊಂಡಿರುವ ನಗರದ ಇಬ್ಬರು ಲೈಂಗಿಕ ಅಲ್ಪಸಂಖ್ಯಾತರಿಗೆ 'ಹಾರ್ಮೋನ್ ಬದಲಿಸುವ ಥೆರಪಿ' (ಎಚ್‌ಆರ್‌ಟಿ) ಮುಂದುವರಿಸುವಂತೆ ಸಂಬಂಧಿಸಿದ ವೈದ್ಯರಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

'ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಹಕ್ಕುಗಳ ರಕ್ಷಣೆ ಕಾಯ್ದೆ' ತಿದ್ದುಪಡಿ ಪ್ರಶ್ನಿಸಿ ಈ ಇಬ್ಬರು ಸಲ್ಲಿಸಿರುವ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲೆ ಜಯ್ನಾ ಕೊಠಾರಿ, 'ಅರ್ಜಿದಾರರಿಬ್ಬರೂ ನಗರದ ರಾಮಯ್ಯ ಆಸ್ಪತ್ರೆಯಲ್ಲಿ 'ಹಾರ್ಮೋನ್ ರಿಪ್ಲೇಸ್‌ಮೆಂಟ್ ಥೆರಪಿ' ಪಡೆಯುತ್ತಿದ್ದಾರೆ. ಆದರೆ, ತಿದ್ದುಪಡಿ ಕಾಯ್ದೆ ಜಾರಿಗೆ ಬಂದ ಬಳಿಕ ವೈದ್ಯರು ಚಿಕಿತ್ಸೆ ಮುಂದುವರಿಸಲು ಹಿಂಜರಿಯುತ್ತಿದ್ದಾರೆ. ವೈದ್ಯಕೀಯ ಚಿಕಿತ್ಸೆ ಪಡೆಯುವುದನ್ನು ನಿರ್ಬಂಧಿಸುವುದು ಮೂಲಭೂತ ಹಕ್ಕುಗಳ ಉಲ್ಲಂಘನೆ' ಎಂದು ಪ್ರತಿಪಾದಿಸಿದ್ದರು.

ಹೈಕೋರ್ಟ್ ಸುದ್ದಿ

ಇದನ್ನು ಅಲ್ಲಗಳೆದಿದ್ದ ಕೇಂದ್ರ ಸರ್ಕಾರದ ಪರ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್, 'ಅರ್ಜಿದಾರರಿಗೆ ಚಿಕಿತ್ಸೆ ನೀಡುವುದನ್ನು ನಿರಾಕರಿಸಿದ ಅಥವಾ ನಿರ್ಬಂಧಿಸಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಪ್ರಸ್ತುತಪಡಿಸಲಾಗಿಲ್ಲ. ಈ ಹಂತದಲ್ಲಿ ಕಾಯ್ದೆಯ ತಿದ್ದುಪಡಿ ಮಾನ್ಯತೆಯನ್ನು ನಿರ್ಧರಿಸುವುದು ಸರಿಯಲ್ಲ. ಯಾಕೆಂದರೆ, ಈ ಕುರಿತಾದ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ. ಹೀಗಾಗಿ, ಅರ್ಜಿದಾರರ ಮಧ್ಯಂತರ ಮನವಿಯನ್ನು ಮಾನ್ಯ ಮಾಡಬಾರದು' ಎಂದು ವಿನಂತಿಸಿದ್ದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಅರ್ಜಿದಾರರು ಪ್ರಸ್ತುತಪಡಿಸಿರುವ ವೈದ್ಯಕೀಯ ದಾಖಲೆಗಳನ್ನು ಪರಿಶೀಲಿಸಿದರೆ ಮೇಲ್ನೋಟಕ್ಕೆ ಇವರು 2024ರ ನವೆಂಬರ್ 11ರಿಂದಲೂ ಹಾರ್ಮೋನ್ ಬದಲಾವಣೆ ಥೆರಪಿ ಮಾಡಿಸಿಕೊಳ್ಳುತ್ತಿರುವುದು ದೃಢಪಡುತ್ತದೆ. ಇಂತಹ ಸಂದರ್ಭದಲ್ಲಿ ವೈದ್ಯಕೀಯ ಚಿಕಿತ್ಸೆ ಸ್ಥಗಿತಗೊಳಿಸುವುದು ಅವರ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟುಮಾಡುತ್ತದೆ' ಎಂದು ಅಭಿಪ್ರಾಯಪಟ್ಟಿದೆ.

'ಕೇಂದ್ರ ಸರ್ಕಾರ 2026ರ ಮಾರ್ಚ್ 30ರಂದು, ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಹಕ್ಕುಗಳ ರಕ್ಷಣೆ ಕಾಯ್ದೆ–2026ಕ್ಕೆ ತಿದ್ದುಪಡಿ ಮಾಡಿರುವುದು, ಸಂವಿಧಾನದ 14, 15(1), 16, 19 ಮತ್ತು 21ನೇ ವಿಧಿಗಳ ಉಲ್ಲಂಘನೆಯಾಗಿದ್ದು, ಇದನ್ನು ರದ್ದುಗೊಳಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

'ಸುಪ್ರೀಂ ಆದೇಶಕ್ಕೆ ಒಳಪಟ್ಟಿದೆ'

'ವೈದ್ಯಕೀಯ ಶಿಷ್ಟಾಚಾರದ ಪ್ರಕಾರ ಅರ್ಜಿದಾರರಿಗೆ ನೀಡಲಾಗುತ್ತಿರುವ ಹಾರ್ಮೋನ್ ಬದಲಿ ಚಿಕಿತ್ಸೆ ಮುಂದುವರಿಸಲು ಅನುಮತಿ ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ ಸಂಬಂಧಿಸಿದ ವೈದ್ಯರು ಮತ್ತು ವೈದ್ಯಕೀಯ ಅಧಿಕಾರಿಗಳು ಅಂತಹ ಚಿಕಿತ್ಸೆಯನ್ನು ಯಾವುದೇ ಅಡೆತಡೆಯಿಲ್ಲದೆ ಮುಂದುವರಿಸಲು ಅನುಕೂಲ ಮಾಡಿಕೊಡಬೇಕು' ಎಂದು ಆದೇಶಿಸಿದೆ.

'ಅರ್ಜಿದಾರರಿಗೆ ನೀಡಲಾಗುತ್ತಿರುವ ಚಿಕಿತ್ಸೆ ಮುಂದುವರಿಕೆ ಹಾಲಿ ಅರ್ಜಿಯ ನಿರ್ಧಾರ ಮತ್ತು ಸುಪ್ರೀಂ ಕೋರ್ಟ್ ಹೊರಡಿಸುವ ಆದೇಶಕ್ಕೆ ಒಳಪಟ್ಟಿರುತ್ತದೆ' ಎಂದೂ ಇದೇ ವೇಳೆ ಸ್ಪಷ್ಟಪಡಿಸಿರುವ ನ್ಯಾಯಪೀಠ, ವಿಚಾರಣೆಯನ್ನು ಬೇಸಿಗೆ ರಜೆಯ ನಂತರಕ್ಕೆ ಮುಂದೂಡಿದೆ.

ಬಿಸಿಲು-ಮಳೆಗಾಲಗಳಲ್ಲಿ ನೀರನ್ನು ಹೀಗೆ ಕುಡಿಯಬೇಕು...

• ಡಾ.ವೀಣಾ ಎನ್. ಸುಳ್ಯ

ಸಂಸ್ಕೃತದಲ್ಲಿ ನೀರಿಗೆ ಸಮಾನಾರ್ಥವಾದ ಒಂದು ಪದ 'ಜೀವನ'. ಅಂತೆಯೇ ನೀರು ಜೀವಕ್ಕೂ ಜೀವನಕ್ಕೂ ಅತ್ಯಂತ ಅಗತ್ಯವಾದ ಪದಾರ್ಥ. ಹಾಗೆಯೇ ಜೀವಕ್ಕೆ ಮೂಲಾಧಾರವೂ ಹೌದು. ದೇಹದಲ್ಲಿರುವ ವಿವಿಧ ಅಂಗಾಂಗಗಳ ಎಲ್ಲಾ ಕಾರ್ಯಚಟುವಟಿಕೆಗಳಿಗೆ ನೀರು ಬೇಕೇ ಬೇಕು. ದೇಹದ ಪ್ರತಿ ಜೀವಕೋಶಗಳಿಗೂ ನೀರಿನ ಅಗತ್ಯವಿದೆ.

ಭೂಮಿಯ ಮೇಲ್ಮೈಯ ಮೇಲೆ ಶೇ 70ರಷ್ಟು ಭಾಗ ನೀರು ಇದ್ದರೂ ಕೇವಲ ಶೇ 3ರಷ್ಟು ಮಾತ್ರ ಶುದ್ಧ ಕುಡಿಯುವ ನೀರು ಲಭ್ಯ. ಮಾನವನ ದೇಹ ಕೂಡ ಶೇ 70ರಷ್ಟು ಭಾಗ ನೀರಿನಂಶದಿಂದ ಕೂಡಿದೆ. ದೇಹದಲ್ಲಿ ಉತ್ಪತ್ತಿಯಾಗುವ ಲಾಲಾರಸ, ಗ್ಯಾಸ್ಟ್ರಿಕ್ ಜ್ಯೂಸ್, ಪಿತ್ತರಸ, ಮೇದೋಜೀರಕದಿಂದ ಉತ್ಪತ್ತಿಯಾಗುವ ರಸ, ಸಣ್ಣ ಕರುಳಿನ ರಸ, ರಕ್ತ, ಕಣ್ಣೀರು, ಬೆವರು, ಮೂತ್ರ – ಇವೆಲ್ಲವೂ ದ್ರವರೂಪದಲ್ಲಿಯೇ ಇವೆ. ರಕ್ತದಲ್ಲಿರುವ ಪ್ಲಾಸ್ಮಾದ ಶೇ 90ರಷ್ಟು ಭಾಗ ನೀರು ಇರುತ್ತದೆ.



ದೇಹಕ್ಕೆ ನೀರು ಏಕೆ ಬೇಕು?

- ನಾವು ತೆಗೆದುಕೊಂಡ ಆಹಾರ ಜೀರ್ಣವಾಗಲು, ಜೀರ್ಣವಾದ ಪೋಷಕಾಂಶಗಳು ಜೀವಕೋಶವನ್ನು ಸೇರಲು
- ದೇಹದ ಕಲ್ಮಶಗಳನ್ನು ಬೆವರು, ಮೂತ್ರ, ಉಸಿರಾಟದ ಮೂಲಕ ಹೊರಹಾಕಲು
- ದೇಹದ ಉಷ್ಣತೆಯನ್ನು ಕಾಪಾಡಲು
- ಚರ್ಮದ ಆರೋಗ್ಯ ಮತ್ತು ಕಾಂತಿಯನ್ನು ಉಳಿಸಿಕೊಳ್ಳಲು
- ಬೆನ್ನುಹುರಿಯನ್ನು ರಕ್ಷಿಸಲು ಮತ್ತು ಕೀಲುಗಳಲ್ಲಿ ಚಲನೆಗೆ ಸಹಕರಿಸಲು ನೀರು ಬೇಕು.

ದೇಹಕ್ಕೆ ಅಗತ್ಯವಾದಷ್ಟು ನೀರು ಕುಡಿಯದೇ ಇದ್ದರೆ

- ಗಂಟಲು ಒಣಗುವುದು, ತಲೆನೋವು, ಆಯಾಸ, ಕಿರಿಕಿರಿ, ಗಲಿಬಿಲಿ, ತಲೆ ಸುತ್ತುವುದು ಉಂಟಾಗಬಹುದು.
- ಮೂತ್ರಕೋಶದಲ್ಲಿ ಸೋಂಕು, ಮೂತ್ರಪಿಂಡದಲ್ಲಿ ಕಲ್ಲು, ಮಲಬದ್ಧತೆ ಉಂಟಾಗಬಹುದು. ಹಾಗಾಗಿ, ಸಮತೋಲಿತ ಆಹಾರದ ಅತ್ಯಗತ್ಯ ಭಾಗ ನೀರು. ಅಷ್ಟೇ ಅಲ್ಲದೆ ನೀರು ಉತ್ತಮ ದ್ರವ ಆಹಾರವೂ ಆಗಿರುವುದರಿಂದ, ನಾವು ಕುಡಿಯುವ ನೀರು ಸುರಕ್ಷಿತವಾಗಿರುವುದು ಅತ್ಯಂತ ಅಗತ್ಯ.

ಆರೋಗ್ಯವಂತ ದೇಹಕ್ಕೆ ಎಷ್ಟು ನೀರು ಬೇಕು?

ಇದು ವಯಸ್ಸು, ದೈಹಿಕ ಚಟುವಟಿಕೆ, ತಾಪಮಾನ, ದೇಹದ ಆರೋಗ್ಯ ಇವುಗಳನ್ನು ಅವಲಂಬಿಸಿರುತ್ತದೆ. ಪುರುಷರು ಸುಮಾರು ಎರಡರಿಂದ ಮೂರು ಲೀಟರ್ ನೀರು ಕುಡಿಯಬೇಕಾಗಬಹುದು. ಮಹಿಳೆಯರು ಎರಡರಿಂದ ಎರಡೂವರೆ ಲೀಟರ್‌ನಷ್ಟು ನೀರು ಕುಡಿಯಬೇಕು. ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರಿಗೆ ಹೆಚ್ಚುವರಿ ನೀರಿನ ಅಗತ್ಯವಿದೆ.

ಎಲ್ಲ ಕಾಲದಲ್ಲಿಯೂ

- ಕುದಿಸಿ, ಆರಿಸಿದ ನೀರನ್ನು ಅಥವಾ ಬಿಸಿ ನೀರನ್ನು ಬಳಸುವುದು ಉತ್ತಮ.
- ಸೋಸಿದ/ ಫಿಲ್ಟರ್ ಮಾಡಿದ ನೀರನ್ನು ಮಾತ್ರ ಬಳಸಿ.
- ಆಹಾರ ತಯಾರಿಸುವ ಸಮಯದಲ್ಲಿಯೂ ಶುದ್ಧ ನೀರಿನ ಬಳಕೆಯನ್ನು ಮಾಡುವುದು ಅಗತ್ಯ.
- ತರಕಾರಿ ಹಣ್ಣುಗಳನ್ನು ತೊಳೆಯುವಾಗಲು ಶುದ್ಧ ನೀರಿನಲ್ಲಿಯೇ ತೊಳೆಯಬೇಕು.
- ಕೆರೆ, ನದಿ, ಹೊಳೆ, ಹರಿಯುವ ಕಾಲುವೆಗಳ ನೀರನ್ನು ನೇರವಾಗಿ ಕುಡಿಯಲು, ಆಹಾರ ತಯಾರಿಸಲು ಬಳಸಬೇಡಿ.
- ನೀರು ಸಂಗ್ರಹಿಸುವ ಪಾತ್ರೆಯನ್ನು ದಿನ ತೊಳೆಯಿರಿ. ನಂತರವಷ್ಟೆ ಶುದ್ಧವಾದ ನೀರನ್ನು ಸಂಗ್ರಹಿಸಿ.
- ಸಿಮೆಂಟ್ ಟ್ಯಾಂಕ್, ಹೂದಾನಿಗಳಲ್ಲಿ ಇಟ್ಟಿರುವ ನೀರನ್ನು ವಾರಕ್ಕೊಮ್ಮೆ ಖಾಲಿ ಮಾಡಿ ಒಣಗಿಸಿದ ನಂತರ ನೀರನ್ನು ತುಂಬಿಸಿ.
- ಬಾವಿಗಳಲ್ಲಿ, ಕಾರಂಜಿಗಳಲ್ಲಿ, ಸಿಮೆಂಟ್ ಟ್ಯಾಂಕಿಗಳಲ್ಲಿ ಲಾರ್ವಾ ಮೀನುಗಳನ್ನು ಬೆಳೆಸಿ.
- ರಸ್ತೆ ಬದಿಯಲ್ಲಿ ಕಬ್ಬಿನ ಹಾಲು, ಜ್ಯೂಸ್‌ಗಳನ್ನು ಆದಷ್ಟು ಕುಡಿಯದಿರಿ. ಮಲಮೂತ್ರ ವಿಸರ್ಜನೆಗಾಗಿ ಶೌಚಾಲಯವನ್ನೇ ಬಳಸಿ. ಶೌಚಾಲಯವನ್ನು ಬಳಸಿದ ನಂತರ ಕೈ ಕಾಲುಗಳನ್ನು ಸಾಬೂನಿನಿಂದ ಚೆನ್ನಾಗಿ ತೊಳೆಯಿರಿ
- ಆಹಾರ ಸೇವನೆಯ ಮುನ್ನ ಕೈಗಳನ್ನು ಸೋಪಿನಿಂದ ತೊಳೆದುಕೊಳ್ಳಿ. ಕೈ ಬೆರಳುಗಳ ಉಗುರುಗಳನ್ನು ಸಣ್ಣದಾಗಿ ಕತ್ತರಿಸಿಕೊಳ್ಳಿ.

ನೀರು ಕಲುಷಿತಗೊಳ್ಳಲು ಕಾರಣಗಳೇನು?

ತ್ಯಾಜ್ಯ ವಸ್ತುಗಳ ಅಸಮರ್ಪಕ ನಿರ್ವಹಣೆಯೇ ನೀರು ಕಲುಷಿತಕೊಳ್ಳಲು ಕಾರಣ. ಜೀವಂತ ತ್ಯಾಜ್ಯಗಳು, ಪ್ಲಾಸ್ಟಿಕ್ ಕಸಗಳು, ಕಾರ್ಖಾನೆ /ಗಣಿ ಕೈಗಾರಿಕೆಯ ತ್ಯಾಜ್ಯಗಳು, ವಿಷಕಾರಿ ತ್ಯಾಜ್ಯಗಳು ಅಡುಗೆ ಆಹಾರದ ತ್ಯಾಜ್ಯಗಳು, ತೈಲ ಸೋರಿಕೆ, ಅಸಮರ್ಪಕ ಕಸದ ನಿರ್ವಹಣೆ – ಇವೆಲ್ಲವೂ ನಾವು ಕುಡಿಯುವ ನೀರನ್ನು ಕಲುಷಿತಗೊಳಿಸುತ್ತಲೇ ಇರುತ್ತವೆ.

ನೀರಿನಿಂದ ಹರಡುವ ಕಾಯಿಲೆಗಳು

ಬ್ಯಾಕ್ಟೀರಿಯಾ, ವೈರಸ್, ಪರಾವಲಂಬಿ ಕ್ರಿಮಿಗಳಿಂದ ಹರಡುವ ಟೈಫಾಯಿಡ್, ಕಾಲರಾ, ಅತಿಸಾರ, ಹೆಪಟೈಟಿಸ್, ಪೋಲಿಯೋ, ಅಮೆಬಿಯಾಸಿಸ್, ದುಂಡು ಹುಳ ನೇರವಾಗಿ ಕಾಯಿಲೆಯನ್ನು ತಂದರೆ, ನಿಂತ ನೀರಿನಲ್ಲಿ ಸಂತಾನವೃದ್ಧಿ ಮಾಡುವ ಕ್ರಿಮಿಗಳಿಂದ ಹರಡುವ ಕಾಯಿಲೆಗಳಾದ ಮಲೇರಿಯಾ, ಪೈಲೇರಿಯಾ, ಡೆಂಗಿ, ಚಿಕುನ್‌ಗುನ್ಯಾ ಕಾಯಿಲೆಗಳಿಗೂ ಒಂದಲ್ಲ ಒಂದು ರೀತಿಯಲ್ಲಿ ನೀರು ಪ್ರಮುಖ ಕಾರಣವಾಗಿರುತ್ತದೆ.

ಬೇಸಿಗೆಯಲ್ಲಿ ವಾತಾವರಣದಲ್ಲಿ ಉಂಟಾದ ತಾಪಮಾನದ ವ್ಯತ್ಯಾಸದಿಂದ ದೇಹದ ಉಷ್ಣತೆಯನ್ನು ಕಾಪಾಡಲು ದೇಹ ಬೆವರುವುದು ಅತ್ಯಂತ ಸಹಜ.

ಹಾಗೆಯೇ ದೇಹವನ್ನು ತಂಪಾಗಿ ಇಡಬೇಕೆಂದು ತಣ್ಣನೆಯ ನೀರು ಕುಡಿಯಲು ಬಯಸುವುದು ಸಾಮಾನ್ಯ. ಬಾಯಾರಿಕೆಯಾದಾಗ ಸಿಕ್ಕಸಿಕ್ಕಲ್ಲಿ ಕಂಡ ಕಂಡ ನೀರು ಕುಡಿಯುವುದು ಆರೋಗ್ಯಕ್ಕೆ ಒಳ್ಳೆಯದಲ್ಲ.

ತಂಪು ನೀರು ಕುಡಿಯುವುದರಿಂದ ಆಗುವ ದುಷ್ಪರಿಣಾಮಗಳು

- ಗಂಟಲಿನಲ್ಲಿ ತನ್ನ ಪಾಡಿಗೆ ಸುಮ್ಮನೆ ಇದ್ದ ಬ್ಯಾಕ್ಟೀರಿಯಾಗಳು, ಉಷ್ಣತೆ ವ್ಯತ್ಯಾಸವಾದ ತಕ್ಷಣ, ಸಾವಿರಾರು ಸಂಖ್ಯೆಯಲ್ಲಿ ಹೆಚ್ಚಾಗುತ್ತವೆ; ಗಂಟಲಿನ ಸೋಂಕು, ಗಂಟಲು ನೋವು, ಶೀತ, ನೆಗಡಿ, ಕೆಮ್ಮಿಗೆ ಕಾರಣವಾಗುತ್ತವೆ.
- ತಲೆನೋವು, ಸೈನಸೈಟಿಸ್ ಉಂಟುಮಾಡುತ್ತವೆ.
- ಹಲ್ಲುಗಳಲ್ಲಿ ನೋವು, 'ಜುಮ್' ಎನ್ನುವ ತೊಂದರೆಯನ್ನು ಉಂಟುಮಾಡುತ್ತವೆ.
- ಜೀರ್ಣಕ್ರಿಯೆಯು ನಿಧಾನವಾಗುವುದರಿಂದ ಹೊಟ್ಟೆ ನೋವು ಉಂಟಾಗಬಹುದು.

ಪಾನೀಯಗಳನ್ನು ತಂಪು ಮಾಡಲು ಯಾವ ಐಸ್‌ಕ್ಯೂಬ್‌ಗಳನ್ನು ಬಳಸುತ್ತಾರೆ ಎಂಬುದರ ಬಗ್ಗೆ ಗಮನಹರಿಸುವುದು ಒಳ್ಳೆಯದು. ಕಲುಷಿತ ನೀರಿನಿಂದ ಮಾಡಿದ ಐಸ್‌ಕ್ಯೂಬ್‌ಗಳಲ್ಲಿ ಖಂಡಿತವಾಗಿಯೂ ಬ್ಯಾಕ್ಟೀರಿಯಾ, ವೈರಸ್‌ಗಳು ಇರುತ್ತವೆ. ಶುದ್ಧ ನೀರಿನಲ್ಲಿ ತಯಾರಿಸಿದ ಐಸ್‌ಕ್ಯೂಬ್‌ಗಳು ಮಾತ್ರ ಬಳಕೆಗೆ ಯೋಗ್ಯ. ಮನೆಯಲ್ಲಿ ಐಸ್‌ಕ್ಯೂಬ್‌ಗಳನ್ನು ತಯಾರಿಸಿಕೊಳ್ಳಬಹುದು.

ಮಳೆಗಾಲದಲ್ಲಿ, ಹೆಚ್ಚು ನೀರನ್ನು ಕುಡಿಯಲು ದೇಹ ಸೂಚಿಸುವುದಿಲ್ಲವಾದರೂ ದೇಹದ ಆರೋಗ್ಯಕ್ಕೆ ಅಗತ್ಯದಷ್ಟು ನೀರು ಕುಡಿಯಬೇಕು. ಮಳೆಗಾಲದಲ್ಲಿ ನೀರಿನ ಸುರಕ್ಷತೆಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು, ತ್ಯಾಜ್ಯ ವಸ್ತುಗಳು ಸೋರಿ ಹೋಗಿ ನೀರನ್ನು ಕಲುಷಿತ ಮಾಡುವ ಸಾಧ್ಯತೆಗಳು ಹೆಚ್ಚು. ಮಳೆ ನೀರನ್ನು ನೇರವಾಗಿ ಕುಡಿಯುವುದು ಸೂಕ್ತವಲ್ಲ.

ಮಳೆ ನೀರು ವಾಯುಮಂಡಲವನ್ನು ಪ್ರವೇಶಿಸಿದಾಗ ಅದರಲ್ಲಿ ಇರುವ ರಾಸಾಯನಿಕ ವಸ್ತುಗಳು, ಕ್ರಿಮಿಗಳಿಂದ ಮಳೆ ನೀರು ಕಲುಷಿತಗೊಳ್ಳುತ್ತದೆ.

ಹಾಗಾಗಿ ಕಾಲ ಯಾವುದೇ ಇರಲಿ; ಶುದ್ಧ ಕುಡಿಯುವ ನೀರಿನ ಸೇವನೆಗೆ ಮೊದಲ ಆದ್ಯತೆ ಸಿಗಲಿ. ❖



ಮನೋಬಲ ಯಶಸ್ಸಿನ ಮೂಲ

• ಲಾವಣ್ಯಗೌರಿ ವೆಂಕಟೇಶ್

ವಿದ್ಯಾರ್ಥಿಯ ಜೀವನವೆನ್ನುವುದು ಬದುಕಿನ ಪುಟಗಳಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಬಹುದಾದ ಘಟ್ಟ. ಅಷ್ಟೇನೂ ಜವಾಬ್ದಾರಿಗಳಿಲ್ಲದೇ, ಹಣದ ಹಿಂದೆ ಹೋಗದೇ, ಸಂಸಾರದ ತಾಪತ್ರಯಗಳಿಲ್ಲದೇ ಬರೀ ಅಧ್ಯಯನಕ್ಕೆ ಮೀಸಲಿಟ್ಟ ಸುಂದರ ಮಜಲು.

ಆದರೆ, ಈಗ ವಿದ್ಯಾರ್ಥಿಗಳ ಬದುಕು ಸ್ಪರ್ಧಾತ್ಮಕತೆಯ ಕಾರಣಕ್ಕೆ ಒತ್ತಡದಿಂದ ಕೂಡಿದೆ. ಉತ್ತಮ ಕಾಲೇಜು, ಉತ್ತಮ ಅಂಕಗಳು, ಉತ್ತಮ ಭವಿಷ್ಯ ಎಂದು ಓಡುತ್ತಿರುವ ವಿದ್ಯಾರ್ಥಿಗಳು ಮಾನಸಿಕವಾಗಿ ಒತ್ತಡವನ್ನು ಅನುಭವಿಸುತ್ತಿದ್ದಾರೆ. ಕೆಲವೊಮ್ಮೆ ಈ ಒತ್ತಡ ತಾಳಲಾರದೆ ಆತ್ಮಹತ್ಯೆಯಂಥ ವಿಪರೀತದ ಹಾದಿ ಹಿಡಿಯುತ್ತಿರುವುದು ವಿಷಾದದ ಸಂಗತಿ. ದೈಹಿಕ ಆರೋಗ್ಯದಂತೆ ಮಾನಸಿಕ ಆರೋಗ್ಯವೂ ಬಹಳ ಮುಖ್ಯ. ದೇಹದಲ್ಲಿ ಏರುಪೇರಾದಾಗ, ದೇಹದ ಆರೋಗ್ಯ ಸ್ಥಿತಿಯ ಅರಿವು ನಮಗಾಗುತ್ತದೆ. ಆದರೆ ಮಾನಸಿಕ ಆರೋಗ್ಯ ಸ್ಥಿತಿಯು ಹಾಗಲ್ಲ. ಕಣ್ಣಿಗೆ ಕಾಣದ, ಒಳಗೊಳಗೇ ನೋವುಣ್ಣುವ ಸ್ಥಿತಿ.

ಮೊದಲನೆಯದಾಗಿ, ವಿದ್ಯಾರ್ಥಿಗಳಿಗೆ ಎದುರಾಗುವುದು ಪರೀಕ್ಷೆಯ ಭಯ. ಪರೀಕ್ಷಾ ಕೊಠಡಿಯಲ್ಲಿ ಕುಳಿತು, ಪ್ರಶ್ನೆ ಪತ್ರಿಕೆಯ ಪ್ರಶ್ನೆಗಳು ಅರ್ಥವಾಗದೇ, ಉತ್ತರ ತಿಳಿಯದೇ ಇದ್ದಲ್ಲಿ ಬರುವ ಭಯ. ಇದಕ್ಕೆ ಪೋಷಕರ ಅತಿಯಾದ ನಿರೀಕ್ಷೆಯೇ ಕಾರಣ. ಸೋತರೆ ಅವಮಾನವಾಗುತ್ತದೆ ಎಂಬ ಕಾರಣವು ಈ ಭಯದ ಹಿಂದೆ ಅಡಗಿದೆ. ಇನ್ನು ಸರಿಯಾದ ಅಂಕಗಳು ಬಾರದೇ ಇದ್ದರೆ ಸಮಾಜದಲ್ಲಿ 'ಮರ್ಯಾದೆ' ದಕ್ಕುವುದಿಲ್ಲ ಎಂಬ ಕಾರಣಕ್ಕೆ ಪೋಷಕರು ಮಕ್ಕಳ ಮೇಲೆ ಬೆಟ್ಟದ್ದಷ್ಟು ನಿರೀಕ್ಷೆ ಇಟ್ಟುಕೊಳ್ಳುತ್ತಾರೆ.

ನಂತರ ಸಹಪಾಠಿಗಳಿಂದ ಒತ್ತಡ. ತನಗಿಂತ ಹೆಚ್ಚು ಅಂಕ ಸಹಪಾಠಿಗಳಿಗೆ ಬಂದುಬಿಟ್ಟರೆ ಎಂಬ ಆತಂಕ. ನಾವು ವಿದ್ಯಾರ್ಥಿಗಳಾಗಿದ್ದಾಗ, ಓದು-ಬರಹ, ಆಟಗಳಷ್ಟೆ ನಮ್ಮ ಆಲೋಚನೆಯಾಗಿತ್ತು. ಆದರೆ ಇಂದಿನ ಮಕ್ಕಳ ಚಿಂತನೆ ಭವಿಷ್ಯತ್ ಕಾಲದಲ್ಲಿದೆ! ಏನು ಓದಿದರೆ, ಯಾವ ಕೆಲಸ ಸಿಕ್ಕೀತು? ಎಷ್ಟು ಸಂಬಳ ಬಂದೀತು? ಸಮಾಜದಲ್ಲಿ ತನ್ನ ಸ್ಥಾನಮಾನ ಹೇಗಿರುತ್ತದೆ? – ಇಂಥ ಯೋಚನೆಗಳು ಮಕ್ಕಳ ಬಾಲ್ಯವನ್ನು ಕಿತ್ತುಕೊಳ್ಳುತ್ತಿವೆ.

ಇದಕ್ಕೆ ಸಾಮಾಜಿಕ ಮಾಧ್ಯಮಗಳ ಪ್ರಭಾವವೂ ಇದೆಯೆನ್ನಿ. ಈಗ ಬೆರಳಂಚಿನಲ್ಲಿ ಬಹುಪ್ರಪಂಚಗಳು ತೆರೆದುಕೊಳ್ಳುತ್ತವೆ. ಮುಂದುವರಿದ ತಂತ್ರಜ್ಞಾನವನ್ನು ತಪ್ಪಾಗಿ ಬಳಸಲಾಗುತ್ತಿದೆ. ಇದು ಕೂಡ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುವಂತೆ ಮಾಡಿದೆ. ಪೋಷಕರು ನೀಡಿದ ಅತಿಯಾದ ಸವಲತ್ತಿನಿಂದಾಗಿ ಮಕ್ಕಳಿಗೆ ಸೋಲು, ನಿರಾಕರಣೆಯ ಬಗ್ಗೆ ಗೊತ್ತೇ ಇಲ್ಲ. ಒಂದೊಮ್ಮೆ ಬದುಕಿನಲ್ಲಿ ಕುಗ್ಗಿದಾಗ, ಅದನ್ನು ಹೇಗೆ ಸ್ವೀಕರಿಸಬೇಕು, ಅದರಿಂದ ಹೇಗೆ ಹೊರಬರಬೇಕು ಎಂಬುದನ್ನು ಮಕ್ಕಳಿಗೆ ತಿಳಿಸಿ ಕೊಡದೇ ಇರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ.

ಗೂಗಲ್ ಮಾಡಿದಷ್ಟೆ ಸುಲಭವಾಗಿ ಎಲ್ಲವೂ ಸಿಗಬೇಕು ಎಂಬುದು ಇಂದಿನ ವಿದ್ಯಾರ್ಥಿಗಳ ಅಪೇಕ್ಷೆ. ಇದರಿಂದ ಆತಂಕ, ನಿರಾಶೆ ಹಾಗೂ ಏಕಾಗ್ರತೆಯ ಕೊರತೆ ಉಂಟಾಗುತ್ತದೆ. ಆತ್ಮವಿಶ್ವಾಸ ಕಡಿಮೆಯಾಗುತ್ತದೆ. ದೇಹದ ಆರೋಗ್ಯ ಸರಿಯಾಗಿರಬೇಕಾದರೆ, ಮಾನಸಿಕ ಆರೋಗ್ಯವೂ ಬಹಳ ಮುಖ್ಯ.

ಮನೋಬಲವೊಂದು ಇದ್ದರೆ ಏನನ್ನಾದರೂ ಸಾಧಿಸಬಹುದು. ಇದಕ್ಕೆ ಉತ್ತಮ ಉದಾಹರಣೆ ಭೌತವಿಜ್ಞಾನಿ, ಲೇಖಕ ಸ್ಟೀಫನ್ ಹಾಕಿಂಗ್. ಮೋಟಾರ್ ನ್ಯೂರಾನ್ ಕಾಯಿಲೆಯಿಂದಾಗಿ ಕುತ್ತಿಗೆಯಿಂದ ಕೆಳಭಾಗ ದೈಹಿಕವಾಗಿ ಅಶಕ್ತರಾಗಿದ್ದರೂ, ವೀಲ್ ಚೇರ್‌ನಲ್ಲಿ ಕುಳಿತೇ 'ಹಾಕಿಂಗ್ ವಿಕಿರಣ' ಸಿದ್ಧಾಂತವನ್ನು ಮಂಡಿಸಿದರು. ಅವರು ಬರೆದ 'ಎ ಬ್ರೀಫ್ ಹಿಸ್ಟರಿ ಆಫ್ ಟೈಮ್' ಪುಸ್ತಕವು ಅತ್ಯಂತ ಜನಪ್ರಿಯ ಪುಸ್ತಕವಾಗಿದೆ. ದೈಹಿಕ ನ್ಯೂನತೆಯ ನಡುವೆಯೂ ಮಾನವನ ಇಚ್ಛಾಶಕ್ತಿಯಿಂದ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಸ್ಟೀಫನ್ ಹಾಕಿಂಗ್ ಮಾದರಿಯಾಗಿದ್ದಾರೆ.

ಬಹುತೇಕ ಸಂದರ್ಭಗಳಲ್ಲಿ ಕೌಟುಂಬಿಕ ಬಿರುಕು ಕೂಡ ಮಕ್ಕಳ ಮನಸ್ಸಿನ ಮೇಲೆ ಅಗಾಧವಾದ ಪರಿಣಾಮವನ್ನು ಬೀರುತ್ತದೆ. ಎಲ್ಲಾ ಮಕ್ಕಳೂ ಒಂದೇ ತೆರನಾಗಿ ಇರುವುದಿಲ್ಲ, ಕೆಲವು ಮಕ್ಕಳು ತಮ್ಮ ಭಾವನೆಗಳನ್ನು ಹಂಚಿಕೊಂಡರೆ, ಮತ್ತೆ ಕೆಲವರು ತಮ್ಮ ಭಾವನೆಗಳನ್ನು ಹೊರ ಹಾಕುವಲ್ಲಿ ಮುಜುಗರ ಪಡುತ್ತಾರೆ. ಆದಷ್ಟೂ ಪೋಷಕರು ಕೌಟುಂಬಿಕ ತೊಂದರೆಗಳನ್ನು ಮಕ್ಕಳಿಂದ ದೂರ ಇಡುವುದರಿಂದ ಅವರ ವಿದ್ಯಾರ್ಥಿ ಜೀವನ ಇನ್ನಷ್ಟು ಸುಂದರವಾಗಬಲ್ಲದು. ಸಾಧ್ಯವಾದಷ್ಟೂ ಮಕ್ಕಳೊಂದಿಗೆ ಸಂಪರ್ಕದಲ್ಲಿರಬೇಕಾದದ್ದು ಪೋಷಕರ ಕರ್ತವ್ಯ. ಕೆಲಸ, ಸಂಸಾರದ ಹೊಣೆಗಾರಿಕೆಗಳು ಪೋಷಕರಿಗಿರುತ್ತವೆ. ಮಕ್ಕಳು ಮನೆಯಲ್ಲಿಯೇ ಇರಲಿ ಅಥವಾ ಹಾಸ್ಟೆಲ್‌ನಲ್ಲಿಯೇ ಇರಲಿ, ಆಗಾಗ ಅವರೊಟ್ಟಿಗೆ ಬೆರೆಯುವ ಪ್ರಯತ್ನವನ್ನು ಪೋಷಕರು ಮಾಡಬೇಕು.

ಕನಿಷ್ಠ ಸಂಭಾಷಣಾ ರೂಪದಲ್ಲಾದರೂ ಅವರೊಂದಿಗೆ ಕಾಲ ಕಳೆಯಿರಿ. ಮನದಾಳದ ಮಾತುಗಳನ್ನು ಮಕ್ಕಳು, ಪೋಷಕರೊಂದಿಗೆ ಹೇಳಿಕೊಳ್ಳುವಷ್ಟು ಸಲುಗೆಯನ್ನು ಬೆಳೆಸಿಕೊಳ್ಳಬೇಕು. ನಿಮ್ಮೊಂದಿಗೆ ನಾವಿದ್ದೇವೆ ಎಂಬ ಭರವಸೆಯನ್ನು ನೀಡಿ. ಒಂದು ಸಣ್ಣ ಬೆಂಬಲ ಕೂಡ ಒಂದು ದೊಡ್ಡ ಬದಲಾವಣೆಗೆ ಕಾರಣವಾಗಬಹುದು. ಇದು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ.

ಮಕ್ಕಳಿಗೆ ಕುಟುಂಬದೊಂದಿಗೆ, ಸ್ನೇಹಿತರೊಡನೆ ಬೆರೆಯಲು ಅವಕಾಶವನ್ನು ಮಾಡಿಕೊಡಿ. ಮಕ್ಕಳಿಗೆ ಚಿಕ್ಕ ವಯಸ್ಸಿನಿಂದಲೇ ಸಮಯ ನಿರ್ವಹಣೆಯ ಬಗ್ಗೆ ತಿಳಿಸಿಕೊಡಿ. ಓದಲು, ಬರೆಯಲು, ಆಟವಾಡಲು, ಕುಟುಂಬದೊಂದಿಗೆ ಬೆರೆಯಲು ಸಮಯ ಮಾಡಿಕೊಡಿ. ವಿದ್ಯಾಭ್ಯಾಸಕ್ಕೆ ಅನುಕೂಲವಾದ ವಾತಾವರಣವನ್ನು ನಿರ್ಮಿಸಿಕೊಡಿ. ಇದರಿಂದ ಅವರು ಮುಕ್ತವಾಗಿ ಭಾವನೆಗಳನ್ನು ಹಂಚಿಕೊಳ್ಳಲು ಸಮರ್ಥರಾಗುತ್ತಾರೆ.

ಮಾನಸಿಕ ದೃಢತೆ ಹೆಚ್ಚಲು ದೈಹಿಕ ವ್ಯಾಯಾಮವೂ ಮುಖ್ಯ ಯೋಗಾಭ್ಯಾಸ, ಸೈಕ್ಲಿಂಗ್, ವಾಕಿಂಗ್ ರೂಢಿಸಿಕೊಳ್ಳಿ. ಧ್ಯಾನ ಮಾಡುವುದರಿಂದಲೂ ಮಾನಸಿಕ ಆರೋಗ್ಯ ಬಲಿಷ್ಠವಾಗುತ್ತದೆ. ಮಕ್ಕಳು ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಶಕ್ತರಾಗುತ್ತಾರೆ. ಅವಶ್ಯಕತೆಯಿದ್ದಲ್ಲಿ ಮಾನಸಿಕತಜ್ಞರ ಸಲಹೆ ತೆಗೆದುಕೊಳ್ಳುವುದರಲ್ಲಿ ಯಾವುದೇ ಮುಜುಗರ ಬೇಡ. ಮೊದಲೇ ತಿಳಿಸಿದಂತೆ ದೈಹಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯವೂ ಅಷ್ಟೇ ಮುಖ್ಯ. ದೈಹಿಕ ಆರೋಗ್ಯ ಹದಗೆಟ್ಟಾಗ ವೈದ್ಯರ ಬಳಿ ಹೋಗುವ ನಾವು, ಮಾನಸಿಕ ಆರೋಗ್ಯ ಸರಿ ಇಲ್ಲದಾಗ, ವೈದ್ಯರ ಬಳಿ ಹೋಗಲು ಹಿಂದೇಟು ಹಾಕುವುದೇಕೆ? ಮಾನಸಿಕ ಆರೋಗ್ಯದ ಬಗ್ಗೆ ಮಾತನಾಡುವುದು ದುರ್ಬಲತೆ ಅಲ್ಲ. ಅದು ಬಲದ ಸಂಕೇತ! ಮಾನಸಿಕ ಕಾಯಿಲೆ ಎಂದಾಕ್ಷಣ 'ಹುಚ್ಚು' ಎನ್ನುವ ತಪ್ಪು ಕಲ್ಪನೆ ನಮ್ಮಲ್ಲಿ ಬಹಳಷ್ಟು ಜನರಲ್ಲಿದೆ. ಈ ಭಾವನೆಯನ್ನು ಮೊದಲು ತೆಗೆದು ಹಾಕಿ.

ವಿದ್ಯಾರ್ಥಿಗಳು ಮಾನಸಿಕ ಆರೈಕೆಯನ್ನು ಜತನದಿಂದ ಮಾಡಿಕೊಂಡಲ್ಲಿ, ಆರೋಗ್ಯಕರ ಹಾಗೂ ಯಶಸ್ವಿ ಜೀವನವನ್ನು ನಡೆಸಬಹುದು. ಒಳ್ಳೆಯ ಮನಸ್ಸು ಒಳ್ಳೆಯ ಜೀವನಕ್ಕೆ ದಾರಿ ತೋರಿಸುತ್ತದೆ. ವಿದ್ಯಾರ್ಥಿಗಳ ಮಾನಸಿಕ ಆರೋಗ್ಯವನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಓದುವುದು ಅವರ ಕರ್ತವ್ಯ. ಅದಕ್ಕೆ ಸರಿಯಾದ ವಾತಾವರಣವನ್ನು ಸೃಷ್ಟಿಸಿಕೊಡುವುದು ನಮ್ಮ ಬದ್ಧತೆ. ಪ್ರೀತಿ, ಬೆಂಬಲ ಹಾಗೂ ಜಾಗೃತಿ– ಈ ಮೂರು ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ರಕ್ಷಾ ಕವಚಗಳು. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿಯ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕೆ ಪಕ್ಕದ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಗಣಿತ

ವಾಸ್ತವ ಸಂಖ್ಯೆಗಳು

ಅಭ್ಯಾಸ 1.2

1) $\sqrt{5}$ ಒಂದು ಅಭಾಗಲಬ್ದ ಸಂಖ್ಯೆ ಎಂದು ಸಾಧಿಸಿ

ಉತ್ತರ:– (.... ಹಿಂದಿನ ಸಂಚಿಕೆಯಿಂದ)

ಸಮೀಕರಣ 1ರಲ್ಲಿ b^2 ಆದೇಶಿಸಿದಾಗ

$5b^2 = (5c)^2$

$5b^2 = 25c^2$

$b^2 = 5c^2$

ಅಂದರೆ 5 ಇದು $5b^2$ ಅನ್ನು ಭಾಗಿಸುತ್ತದೆ

5 ಇದು b ಅನ್ನು ಭಾಗಿಸುತ್ತದೆ

a ಮತ್ತು b ಗಳು ಕನಿಷ್ಠ 5 ಸಾಮಾನ್ಯ ಅಪವರ್ತನ ಹೊಂದಿವೆ

a ಮತ್ತು b ಗಳು ಭಾಗಲಬ್ಧ ಸಂಖ್ಯೆಗಳಲ್ಲ ಹೀಗಾಗಿ $\sqrt{5}$ ಒಂದು ಅಭಾಗಲಬ್ದ ಸಂಖ್ಯೆಯಾಗಿದೆ.

2) $3+2\sqrt{5}$ ಒಂದು ಅಭಾಗಲಬ್ದ ಸಂಖ್ಯೆ ಎಂದು ಸಾಧಿಸಿ

ಉತ್ತರ:– $3+2\sqrt{5}$ ಒಂದು ಭಾಗಲಬ್ದ ಸಂಖ್ಯೆ ಎಂದು ಭಾವಿಸಿ

$3 + 2\sqrt{5} = x/y$ {ಇಲ್ಲಿ co-prime x and y $(y \neq 0)$ }

$2\sqrt{5} = \frac{x}{y} - 3$

$\sqrt{5} = \frac{1}{2}(\frac{x}{y} - 3)$

$2\sqrt{5} = \frac{x}{y} - 3$

$\sqrt{5} = \frac{1}{2}(\frac{x}{y} - 3)$

Since, x and y are integers, ಹೀಗಾಗಿ $\frac{1}{2}(\frac{x}{y} - 3)$ ಒಂದು ಭಾಗಲಬ್ದ ಸಂಖ್ಯೆಯಾಗಿದೆ. ಅಂದರೆ ಇದರರ್ಥ $\sqrt{5}$ ಭಾಗಲಬ್ದ ಸಂಖ್ಯೆಯಾಗಿದೆ ಆದರೆ ನಿಜ ಹೇಳಬೇಕೆಂದರೆ $\sqrt{5}$ ಇದೂ ಭಾಗಲಬ್ದ ಸಂಖ್ಯೆಯಲ್ಲ! ಆದುದ್ದರಿಂದ $3+2\sqrt{5}$ ಒಂದು ಅಭಾಗಲಬ್ದ ಸಂಖ್ಯೆಯಾಗಿದೆ.

3) ಈ ಕೆಳಗಿನ ಸಂಖ್ಯೆಗಳನ್ನು ಅಭಾಗಲ್ಧ ಸಂಖ್ಯೆಗಳೆಂದು ಸಾಧಿಸಿ

(i) $1/\sqrt{2}$
(ii) $7\sqrt{5}$
(iii) $6 + \sqrt{2}$

ಉತ್ತರ:–

(i) $1/\sqrt{2}$ ಒಂದು ಭಾಗಲಬ್ದ ಸಂಖ್ಯೆ ಎಂದು ಭಾವಿಸಿ

co-prime x and y $(y \neq 0)$

$1/\sqrt{2} = x/y$

$\therefore \sqrt{2} = y/x$

Since, x and y are integers, ಹೀಗಾಗಿ $\sqrt{2}$ ಒಂದು ಭಾಗಲಬ್ದ ಸಂಖ್ಯೆಯಾಗಿದೆ. ಆದರೆ ನಿಜ ಹೇಳಬೇಕೆಂದರೆ $\sqrt{2}$ ಇದೂ ಭಾಗಲಬ್ಧ ಸಂಖ್ಯೆಯಲ್ಲ!

ಆದುದ್ದರಿಂದ $1/\sqrt{2}$ ಒಂದು ಅಭಾಗಲಬ್ದ ಸಂಖ್ಯೆಯಾಗಿದೆ.

(ii) $7\sqrt{5}$ ಒಂದು ಭಾಗಲಬ್ದ ಸಂಖ್ಯೆ ಎಂದು ಭಾವಿಸಿ

co-prime x and y $(y \neq 0)$

$7\sqrt{5} = x/y$

$\therefore \sqrt{5} = x/7y$

Since, x and y are integers, ಹೀಗಾಗಿ $\sqrt{5}$ ಒಂದು ಭಾಗಲಬ್ದ ಸಂಖ್ಯೆಯಾಗಿದೆ. ಆದರೆ ನಿಜ ಹೇಳಬೇಕೆಂದರೆ $\sqrt{5}$ ಇದೂ ಭಾಗಲಬ್ಧ ಸಂಖ್ಯೆಯಲ್ಲ!

ಆದುದ್ದರಿಂದ $7\sqrt{5}$ ಒಂದು ಅಭಾಗಲಬ್ದ ಸಂಖ್ಯೆಯಾಗಿದೆ.

(iii) $6 + \sqrt{2}$ ಒಂದು ಭಾಗಲಬ್ದ ಸಂಖ್ಯೆ ಎಂದು ಭಾವಿಸಿ

co-prime x and y $(y \neq 0)$

$6 + \sqrt{2} = x/y$

$\therefore \sqrt{2} = (x/y) - 6$

Since, x and y are integers, ಹೀಗಾಗಿ $(x/y) - 6$ ಒಂದು ಭಾಗಲಬ್ದ ಸಂಖ್ಯೆಯಾಗಿದೆ ಹೀಗಾಗಿ $\sqrt{2}$ ಭಾಗಲಬ್ದ ಸಂಖ್ಯೆಯಾಗಿದೆ ಆದರೆ ನಿಜ ಹೇಳಬೇಕೆಂದರೆ $\sqrt{2}$ ಇದೂ ಭಾಗಲಬ್ಧ ಸಂಖ್ಯೆಯಲ್ಲ!

ಆದುದ್ದರಿಂದ $6 + \sqrt{2}$ ಒಂದು ಅಭಾಗಲಬ್ದ ಸಂಖ್ಯೆಯಾಗಿದೆ.

ಹಿಂದಿನ ವಾರ್ಷಿಕ ಪರೀಕ್ಷೆಯಿಂದ

1) 2 ಮತ್ತು 3ರ ಲ.ಸಾ.ಅ___________.

ಎ) 2 ಬಿ)3 ಸಿ)5 ಡಿ) 6

ಉತ್ತರ:–(ಡಿ)6 (2025ರ ಏಪ್ರಿಲ್: ವಾರ್ಷಿಕ ಪರೀಕ್ಷೆ)

2) 15 ಮತ್ತು 20 ಈ ಸಂಖ್ಯೆಗಳ ಮ.ಸಾ.ಅ ಮತ್ತು ಲ.ಸಾ.ಅ ಗಳ ಗುಣಲಬ್ಧವು__________.

ಎ) 15 ಬಿ) 20 ಸಿ) 300 ಡಿ) 35

ಉತ್ತರ:–(ಸಿ)300 (2024ರ ಏಪ್ರಿಲ್: ವಾರ್ಷಿಕ ಪರೀಕ್ಷೆ)

3) $5+\sqrt{3}$ ಒಂದು ಅಭಾಗಲಬ್ದ ಸಂಖ್ಯೆ ಎಂದು ಸಾಧಿಸಿ (2023ರ ಏಪ್ರಿಲ್: ವಾರ್ಷಿಕ ಪರೀಕ್ಷೆ)

ಉತ್ತರ:– $5+\sqrt{3}$ ಒಂದು ಭಾಗಲಬ್ಧ ಸಂಖ್ಯೆ ಎಂದು ಊಹಿಸೋಣ

ಆಗ, $5+\sqrt{3}$ ಆಗುವಂತೆ, a ಮತ್ತು bಗಳು ಸಹ ಅವಿಭಾಜ್ಯಗಳಾಗಿವೆ.

ಮರುಜೋಡಿಸಿದಾಗ $\sqrt{3} = \frac{a}{b} - 5$

$\sqrt{3} = \frac{a-5b}{b}$

a ಮತ್ತು bಗಳು ಪೂರ್ಣಾಂಕಗಳಾಗಿರುವುದರಿಂದ

$\frac{a}{b} - 5$ ಯು ಭಾಗಲಬ್ಧ ಸಂಖ್ಯೆಯಾಗಿದೆ. ಹಾಗೆಯೇ

$\sqrt{3}$ ಕೂಡಾ ಭಾಗಲಬ್ದ ಸಂಖ್ಯೆಯಾಗಿದೆ.

ಆದರೆ $\sqrt{3}$ ಒಂದು ಭಾಗಲಬ್ಧ ಸಂಖ್ಯೆ ಎಂಬ ಸಂಗತಿಯು ಸತ್ಯ ಸಂಗತಿಗೆ ವಿರುದ್ಧವಾಗಿದೆ.

$5+\sqrt{3}$ ಒಂದು ಭಾಗಲಬ್ಧ ಸಂಖ್ಯೆ ಎಂಬ ನಮ್ಮ ಊಹೆ ತಪ್ಪು,

ಆದ್ದರಿಂದ $5+\sqrt{3}$ ಒಂದು ಅಭಾಗಲಬ್ಧ ಸಂಖ್ಯೆಯಾಗಿದೆ.

3) $3+\sqrt{2}$ ಒಂದು ಅಭಾಗಲಬ್ದ ಸಂಖ್ಯೆ ಎಂದು ಸಾಧಿಸಿ (2024ರ ಏಪ್ರಿಲ್: ವಾರ್ಷಿಕ ಪರೀಕ್ಷೆ)

ಉತ್ತರ:– $3+\sqrt{2}$ ಒಂದು ಭಾಗಲಬ್ಧ ಸಂಖ್ಯೆ ಎಂದು ಊಹಿಸೋಣ

ಆಗ, $3+\sqrt{2} = \frac{a}{b}$ ಆಗುವಂತೆ, a ಮತ್ತು b ಗಳು ಸಹ ಅವಿಭಾಜ್ಯಗಳಾಗಿವೆ.

ಮರುಜೋಡಿಸಿದಾಗ $\sqrt{2} = \frac{a}{b} - 3$

$\sqrt{2} = \frac{a-3b}{b}$

a ಮತ್ತು bಗಳು ಪೂರ್ಣಾಂಕಗಳಾಗಿರುವುದರಿಂದ

$\frac{a-3b}{b}$ ಯು ಭಾಗಲಬ್ಧ ಸಂಖ್ಯೆಯಾಗಿದೆ. ಹಾಗೆಯೇ

$\sqrt{2}$ ಕೂಡಾ ಭಾಗಲಬ್ದ ಸಂಖ್ಯೆಯಾಗಿದೆ.

ಆದರೆ $\sqrt{2}$ ಒಂದು ಭಾಗಲಬ್ಧ ಸಂಖ್ಯೆ ಎಂಬ ಸಂಗತಿಯು ಸತ್ಯ ಸಂಗತಿಗೆ ವಿರುದ್ಧವಾಗಿದೆ.

$3+\sqrt{2}$ ಒಂದು ಭಾಗಲಬ್ಧ ಸಂಖ್ಯೆ ಎಂಬ ನಮ್ಮ ಊಹೆ ತಪ್ಪು,

ಆದ್ದರಿಂದ $3+\sqrt{2}$ ಒಂದು ಅಭಾಗಲಬ್ಧ ಸಂಖ್ಯೆಯಾಗಿದೆ.

MATHS

Inverse trigonometric functions

1) Match List I with List II

List I	List II
a) Domain of $sin^{-1} x$	i) $(-\infty, \infty)$
b) Domain of $tan^{-1} x$	ii) $[0, \pi]$
c) Range of $cos^{-1} x$	iii) [-1, 1]

Choose the correct answer from the options given below

A) a-i , b-ii, c-iii B) a-iii, b-ii, c-i
C) a-ii, b-i, c-iii D) a-iii, b-i, c-ii

Ans:- (D) a-iii, b-i, c-ii

2) What is the reflection of the graph of the function y=sinx along the line y=x

(A) $\sin^{-1} x$ (B) $-\sin^{-1} x$
(C) $\cos^{-1} x$ (D) $-cos^{-1} x$

Ans:-A

3) In which of the following the inverse of the function y=sinx does not exist.

(A) $[0, \pi]$ (B) $[-\frac{\pi}{2}, \frac{\pi}{2}]$
(C) $[\frac{\pi}{2}, \frac{3\pi}{2}]$ (D) $[-\frac{3\pi}{2}, -\frac{\pi}{2}]$

Ans;- A

4) The graph of the function $y=\cos^{-1}x$ is the mirror image of the graph of the function y= cosx along the line

(A) x = 0 (B) y = x
(C) y = 1 (D) y = 0

Ans:- B

5)

Statement 1: $sin^{-1}\left(sin\left(\frac{2\pi}{3}\right)\right) = \frac{2\pi}{3}$

Statement 2: $sin^{-1}(sin(\theta)) = \theta, \text{ if } \theta \in \left[-\frac{\pi}{2}, \frac{\pi}{2}\right]$

A) Statement 1 is true and Statement 2 is false
B) Statement 1 is true and Statement 2 is true, Statement 2 is correct explanation for Statement 1
C) Statement 1 is false and Statement 2 is true
D) Statement 1 is false and Statement 2 is false

Ans:-C

6) Assertion (A): Domain of $f(x) = sin^{-1} x + cos^{-1} x$ is [-1, 1]

Reason (R): Domain of a function is the set of all possible values for which function will be defined.

Ans Code

A) A is false and R is true
B) A is false and R is true
C) A is true and R is true
D) A is false and R is false.

Ans:- C

Answer the following

20. Show that $\sin^{-1} x + \cos^{-1} x = \frac{\pi}{2}$; for $-1 \le x \le 1$

Soln :– Let, $\theta = \sin^{-1} x$;

when $-\frac{\pi}{2} \le \theta \le \frac{\pi}{2}$ & $-1 \le x \le 1$

$\therefore \sin\theta = x$;

$\Rightarrow \cos\left(\frac{\pi}{2} - \theta\right) = x \quad \left(\because \sin\theta = \cos\left(\frac{\pi}{2} - \theta\right)\right)$

$\Rightarrow \frac{\pi}{2} - \theta = \cos^{-1} x \quad \left(\because 0 \le \left(\frac{\pi}{2} - \theta\right) \le \pi\right)$

$\Rightarrow \frac{\pi}{2} - \sin^{-1} x = \cos^{-1} x \quad (\because \theta = \sin^{-1} x)$


$\Rightarrow \frac{\pi}{2} = \sin^{-1} x + \cos^{-1} x$

Hence, $\cos^{-1} x + \sin^{-1} x = \frac{\pi}{2}$

21. Evaluate $\tan\left[\sin^{-1}\left(-\frac{1}{\sqrt{5}}\right)\right]$

Soln :– Let $\sin^{-1}\left(-\frac{1}{\sqrt{5}}\right) = \theta$

$\therefore \sin\theta = -\frac{1}{\sqrt{5}}$ & $-\frac{\pi}{2} < \theta < 0$



But $\sin\theta = \frac{MP}{OP} = -\frac{1}{\sqrt{5}}$

hence, MP = −1 and OP = $\sqrt{5}$

$\therefore OM = \sqrt{OP^2 - MP^2} = \sqrt{5 - 1} = 2$

Hence, $\tan\theta = \frac{MP}{OM} = -\frac{1}{2}$

$\therefore \tan\left[\sin^{-1}\left(-\frac{1}{\sqrt{5}}\right)\right] = -\frac{1}{2}$


22. Evaluate $\cos\left[\tan^{-1}\frac{15}{8} - \sin^{-1}\frac{12}{13}\right]$

Soln :– Let, $\tan^{-1}\frac{15}{8} = \alpha$,

$\sin^{-1}\frac{12}{13} = \beta$

$\therefore \tan\alpha = \frac{15}{8}$, $\sin\beta = \frac{12}{13}$

Both α and β lie between 0 and $\frac{\pi}{2}$



(Contd….)

ಸರ್ಕಾರಿ ಗೌರವದೊಂದಿಗೆ ಸುಧಾಕರ್ ಅಂತ್ಯಕ್ರಿಯೆ

ಸಂಜೆ 4 ಗಂಟೆವರೆಗೂ ಸಾರ್ವಜನಿಕರಿಂದ ಅಂತಿಮ ದರ್ಶನ

ಪ್ರಜಾವಾಣಿ ವಾರ್ತೆ

ಚಳ್ಳಕೆರೆ (ಚಿತ್ರದುರ್ಗ): ಯೋಜನಾ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ಅವರ ಅಂತ್ಯಕ್ರಿಯೆ ಇಲ್ಲಿನ ಜೈನ ಮುಕ್ತಿಧಾಮದಲ್ಲಿ ಸೋಮವಾರ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು.

ಬಸವೇಶ್ವರ ವೃತ್ತದ ಬಳಿಯಲ್ಲಿರುವ ಸಚಿವರ ನಿವಾಸದಿಂದ ಬೆಳಿಗ್ಗೆ 10 ಗಂಟೆಗೆ ಪಾರ್ಥಿವ ಶರೀರವನ್ನು 'ಡಿ.ಸುಧಾಕರ್ ಕ್ರೀಡಾಂಗಣ'ಕ್ಕೆ ಕೊಂಡೊಯ್ಯಲಾಯಿತು. ಸಂಜೆ 4 ಗಂಟೆವರೆಗೂ ಸಾರ್ವಜನಿಕರು ಅಂತಿಮ ದರ್ಶನ ಪಡೆದರು. ನಂತರ ಜೈನ ಮುಕ್ತಿಧಾಮದವರೆಗೆ ಪಾರ್ಥಿವ ಶರೀರದ ಮೆರವಣಿಗೆ ನಡೆಸಲಾಯಿತು. ಈ ವೇಳೆ ಸಾವಿರಾರು ಜನ ಪಾಲ್ಗೊಂಡರು.

ಮುಕ್ತಿಧಾಮದಲ್ಲಿ ಕುಟುಂಬದ ಸದಸ್ಯರು ಜೈನ ಸಂಪ್ರದಾಯದಂತೆ ಧಾರ್ಮಿಕ ವಿಧಿ–ವಿಧಾನ ಪೂರೈಸಿದರು. ಪೊಲೀಸ್ ಸಿಬ್ಬಂದಿ ಗೌರವ ವಂದನೆ ಸಲ್ಲಿಸಿದರು. ನಂತರ ಪುತ್ರ ಸುಹಾಸ್ ಮೃತದೇಹಕ್ಕೆ ಅಗ್ನಿ ಸ್ಪರ್ಶ ಮಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಸಚಿವ ಸಂಪುಟದ ಬಹುತೇಕ ಸಹೋದ್ಯೋಗಿಗಳು, ಶಾಸಕರು, ನಿಗಮ ಮಂಡಳಿಗಳ ಅಧ್ಯಕ್ಷರು, ವಿವಿಧ ಪಕ್ಷಗಳ ಮುಖಂಡರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

'ಸುಧಾಕರ್ ಅವರು ಕಾಂಗ್ರೆಸ್ ಪಕ್ಷ ಅಥವಾ ಚಿತ್ರದುರ್ಗ ಜಿಲ್ಲೆಗೆ ಸೀಮಿತರಾದವರಲ್ಲ. ಅವರು ರಾಜ್ಯದ ಆಸ್ತಿಯಾಗಿದ್ದರು. ಜಾತಿ- ಮತಗಳಿಗಿಂತ ಜನಸೇವೆಯೇ ಮುಖ್ಯ ಎಂಬುದನ್ನು ನಂಬಿದ್ದರು' ಎಂದು ಸುರ್ಜೇವಾಲಾ ಹೇಳಿದರು.

ಜೈನಮುನಿಗಳಿಂದ ಅಂತಿಮ ದರ್ಶನ: ವಿವಿಧೆಡೆಯಿಂದ ಬಂದಿದ್ದ ಜೈನಮುನಿಗಳು ಸುಧಾಕರ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು. ರಾಜ್ಯಾಧ್ಯಕ್ಷ ತಿಜಾರಿಶ್ರೀ ಜೈನಮುನಿ, ವರೂರು ಭಟ್ಟಾರಕ ಪಟ್ಟಾಚಾರ್ಯವರ್ಯ ಶ್ರೀ, ಎನ್.ಆರ್. ಪುರದ ಲಕ್ಷ್ಮೀಸೇನ ಭಟ್ಟಾರಕ ಸ್ವಾಮೀಜಿ ಪಾಲ್ಗೊಂಡಿದ್ದರು.

'ಡಿ.ಸುಧಾಕರ್ ಸಾವಿನಿಂದ ಜೈನ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ. ಅವರು ಸರಳ ವ್ಯಕ್ತಿಯಾಗಿದ್ದರು. ಜೈನ ಕೇಂದ್ರಗಳಿಗೆ ಅಪಾರ ಸೇವೆ ಸಲ್ಲಿಸಿದ್ದರು. ಅವರು ಮಾಡಿರುವ ಸೇವಾ ಕಾರ್ಯ ಸದಾಕಾಲ ಜನಮಾನಸದಲ್ಲಿ ಉಳಿಯಲಿದೆ' ಎಂದು ಲಕ್ಷ್ಮೀಸೇನ ಭಟ್ಟಾರಕ ಸ್ವಾಮೀಜಿ ತಿಳಿಸಿದರು.



ಚಳ್ಳಕೆರೆಯಲ್ಲಿ ನಡೆದ ಅಂತ್ಯಕ್ರಿಯೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವ ಡಿ.ಸುಧಾಕರ್ ಪತ್ನಿ ಹರ್ಷಿಣಿ ಅವರಿಗೆ ರಾಷ್ಟ್ರಧ್ವಜ ಹಸ್ತಾಂತರಿಸಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸುಹಾಸ್ ಇದ್ದರು

ಗೋಡೆ ಕುಸಿದು ಬಾಲಕಿ ಸಾವು

ಪ್ರಜಾವಾಣಿ ವಾರ್ತೆ

ವಡಗೇರಾ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ತುಮಕೂರು ಗ್ರಾಮದಲ್ಲಿ ಸೋಮವಾರ ಮಳೆಯಿಂದ ತೇವಾಂಶಗೊಂಡಿದ್ದ ಗೋಡೆ ಕುಸಿದು ಬಿದ್ದು ಒಬ್ಬ ಬಾಲಕಿ ಮೃತಪಟ್ಟು, ಇಬ್ಬರು ಸಹೋದರಿಯರು ಗಾಯಗೊಂಡಿದ್ದಾರೆ.

ಸಿದ್ದಪ್ಪ ಮತ್ತು ಮರೆಮ್ಮ ದಂಪತಿ ಪುತ್ರಿ ಅಕ್ಷತಾ (7) ಮೃತ ಬಾಲಕಿ. ಆಕೆಯ ಸಹೋದರಿಯರಾದ ಸಂಗೀತಾ ಮತ್ತು ಭೂಮಿಕಾ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

'ಭಾನುವಾರ ಸಂಜೆ ಸುರಿದ ಮಳೆಯಿಂದಾಗಿ ಅಡುಗೆ ಮನೆಯ ಗೋಡೆ ತೇವಗೊಂಡಿತ್ತು. ಬೆಳಿಗ್ಗೆ ಮೂವರು ಮಕ್ಕಳು ಗೋಡೆಯ ಪಕ್ಕದಲ್ಲಿ ಆಟವಾಡುತ್ತಿದ್ದರು. ಏಕಾಏಕಿ ಗೋಡೆ ಕುಸಿದು ಬಿದ್ದು, ಗಂಭೀರವಾಗಿ ಗಾಯಗೊಂಡ ಅಕ್ಷತಾ ಮೃತಪಟ್ಟಿದ್ದಾಳೆ' ಎಂದು ಬಾಲಕಿ ತಂದೆ ಸಿದ್ದಪ್ಪ ದೂರಿನಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ



ಹುಬ್ಬಳ್ಳಿಯ ವಿದ್ಯಾನಗರದ ಪಿ.ಬಿ.ರಸ್ತೆಯಲ್ಲಿ ಸೋಮವಾರ ಸಂಜೆ ಸುರಿದ ಮಳೆಯ ಮಧ್ಯದಲ್ಲಿ ದ್ವಿಚಕ್ರ ವಾಹನದಲ್ಲಿ ಮೂವರು ಸಾಗಿದರು–ಪ್ರಜಾವಾಣಿ ಚಿತ್ರ

ಹುಬ್ಬಳ್ಳಿ, ಹಾವೇರಿ ಜಿಲ್ಲೆಯಲ್ಲಿ ಮಳೆ

ಹುಬ್ಬಳ್ಳಿ: ಧಾರವಾಡ, ಹಾವೇರಿ, ಬೆಳಗಾವಿ ಮತ್ತು ವಿಜಯನಗರ ಜಿಲ್ಲೆಯ ವಿವಿಧೆಡೆ ಸೋಮವಾರ ಉತ್ತಮ ಮಳೆಯಾಯಿತು.

ಧಾರವಾಡ ಜಿಲ್ಲೆಯ ಹುಬ್ಬಳ್ಳಿ, ಹಾವೇರಿ ಜಿಲ್ಲೆಯ ಹಾವೇರಿ ನಗರ, ಹಾನಗಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಳೆಯಾಯಿತು.

ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿ, ಖಾನಾಪುರ ಮತ್ತು ಬೈಲಹೊಂಗಲದಲ್ಲಿ ಮಳೆ ಸುರಿಯಿತು.

ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಧಾರಾಕಾರ ಮಳೆಯಾಯಿತು. ಕೆಲ ಕಡೆ ಜಮೀನುಗಳಲ್ಲಿ ನೀರು ನಿಂತಿದೆ.

14 ಜಿಲ್ಲೆಗಳಲ್ಲಿ ಇಂದು ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಕನ್ನಡ, ಕೊಪ್ಪಳ, ಚಿಕ್ಕಮಗಳೂರು ಸೇರಿದಂತೆ 14 ಜಿಲ್ಲೆಗಳ ಕೆಲವೆಡೆ ಮಂಗಳವಾರ ಗುಡುಗು ಸಹಿತ ಸಾಧಾರಣ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕೊಪ್ಪಳ ಜಿಲ್ಲೆಗಳು, ಕರಾವಳಿ ಕರ್ನಾಟಕದ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆ, ದಕ್ಷಿಣ ಕರ್ನಾಟಕದ ಶಿವಮೊಗ್ಗ, ದಾವಣಗೆರೆ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು ಜಿಲ್ಲೆಗಳಲ್ಲಿ ಒಂದು ಅಥವಾ ಎರಡು ಸ್ಥಳಗಳಲ್ಲಿ ಮಳೆಯಾಗಬಹುದು ಎಂದು ಇಲಾಖೆ ಮುಖ್ಯಸ್ಥರು ತಿಳಿಸಿದ್ದಾರೆ.

ಗೃಹಲಕ್ಷ್ಮಿ ಯೋಜನೆ: 5 ದಿನಗಳಲ್ಲಿ ಫಲಾನುಭವಿಗಳಿಗೆ ಹಣ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಗೃಹಲಕ್ಷ್ಮಿ ಯೋಜನೆ ಮಾರ್ಚ್ ತಿಂಗಳ ಕಂತಿನ ಹಣ ನಾಲ್ಕು ಅಥವಾ ಐದು ದಿನಗಳಲ್ಲಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಆಗುತ್ತದೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ತಾಲ್ಲೂಕಿನ ಬಾಕನೂರಿನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಇದೇ ಯೋಜನೆಯ ಏಪ್ರಿಲ್ ಕಂತಿನ ಹಣವೂ ಹತ್ತು ದಿನಗಳಲ್ಲಿ ಫಲಾನುಭವಿಗಳ ಕೈಸೇರಲಿದೆ' ಎಂದರು.



ಲಕ್ಷ್ಮೀ ಹೆಬ್ಬಾಳಕರ

ಮುಳುಗಿದ ದೋಣಿ: 24 ಮೀನುಗಾರರ ರಕ್ಷಣೆ

ಕಾರವಾರ: ಗೋವಾದ ಬೇತುಲ್ ಸಮುದ್ರ ಪ್ರದೇಶದಲ್ಲಿ ಭಾನುವಾರ ಮುಳುಗಡೆ ಆಗಿದ್ದ ತಾಲ್ಲೂಕಿನ ಮುದಗಾದ ಮೀನುಗಾರಿಕೆ ದೋಣಿಯಲ್ಲಿದ್ದ 24 ಮೀನುಗಾರರನ್ನು ರಕ್ಷಿಸಲಾಗಿದೆ.

'ಮುದಗಾ ಬಂದರಿನಿಂದ ವಾರದ ಹಿಂದೆ ಆಳಸಮುದ್ರ ಮೀನುಗಾರಿಕೆಗೆ ತೆರಳಿದ್ದ 'ಶ್ರೀ ಅಮ್ಮ' ಹೆಸರಿನ ದೋಣಿ ಅವಘಡಕ್ಕೆ ತುತ್ತಾಗಿದೆ. ಅದರಲ್ಲಿನ ಮೀನುಗಾರರನ್ನು ಅಕ್ಕಪಕ್ಕದಲ್ಲಿದ್ದ ಬೇರೆ ಮೀನುಗಾರಿಕೆ ದೋಣಿಗಳಲ್ಲಿನ ಕಾರ್ಮಿಕರು ರಕ್ಷಿಸಿದರು. ದೋಣಿ ಮತ್ತು ಮೀನುಗಾರಿಕೆ ಬಲೆಗಳು ಸಮುದ್ರ ಪಾಲಾಗಿವೆ. ದೋಣಿಯು ಮುದಗಾ ಗ್ರಾಮದ ದಿನೇಶ್ ಕಾಂಚನ್ ಎಂಬವರಿಗೆ ಸೇರಿದ್ದು' ಎಂದು ಪ್ರತ್ಯಕ್ಷದರ್ಶಿ ಮೀನುಗಾರರೊಬ್ಬರು ತಿಳಿಸಿದರು.

'ದೋಣಿ ಮುಳುಗಿರುವ ಮತ್ತು ಅದರಲ್ಲಿನ ಮೀನುಗಾರರು ಅಪಾಯದಿಂದ ಪಾರಾಗಿರುವ ಬಗ್ಗೆ ಮಾಹಿತಿ ಲಭಿಸಿದೆ' ಎಂದು ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ಪ್ರತೀಕ್ ಶೆಟ್ಟಿ ತಿಳಿಸಿದ್ದಾರೆ.

ಜುಲೈ 1ರಿಂದ ವಿಬಿ–ಜಿ ರಾಮ್ ಜಿ

ಒಂದನೇ ಪುಟದಿಂದ...

ಅಲ್ಲದೇ 'ವಿಬಿ–ಜಿ ರಾಮ್ ಜಿ ಕಾಯ್ದೆ ಅನ್ವಯ ಎಲ್ಲ ಕಾರ್ಮಿಕರಿಗೆ ಉದ್ಯೋಗ ಚೀಟಿ ನೀಡುವವರೆಗೆ ನರೇಗಾದಡಿ ನೀಡಲಾಗಿದ್ದ ಉದ್ಯೋಗ ಚೀಟಿಯನ್ನೇ ಮಾನ್ಯ ಮಾಡಲಾಗುವುದು' ಎಂದೂ ವಿವರಿಸಲಾಗಿದೆ.

'ಇ–ಕೆವೈಸಿ ಮೂಲಕ ಉದ್ಯೋಗ ಚೀಟಿ ಪಡೆಯಲು ಬಾಕಿ ಇರುವ ಕಾರ್ಮಿಕರಿಗೂ ಕೆಲಸ ನಿರಾಕರಿಸಬಾರದು. ಜೊತೆಗೆ, ಉದ್ಯೋಗ ಚೀಟಿಗೆ ನೋಂದಣಿಯಾಗದ ಕಾರ್ಮಿಕರು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕೆಲಸ ಮುಂದುವರಿಸಬಹುದು' ಎಂದು ಕೇಂದ್ರ ಸರ್ಕಾರ ಹೇಳಿದೆ.

'ವಿವರಗಳು ಈಗಾಗಲೇ ದೊರೆಯಬೇಕಿತ್ತು'

ವಿಬಿ–ಜಿ ರಾಮ್ ಜಿ ಜಾರಿ ಎಂಬುದೆಲ್ಲ ಹೆಡ್‌ಲೈನ್ ಗಳಿಸುವ ಮತ್ತೊಂದು ತಂತ್ರವಷ್ಟೆ. ಜುಲೈನಿಂದ ಹೊಸ ಕಾಯ್ದೆ ಜಾರಿಯಾಗುವುದಿದ್ದರೆ, ಈ ಸಂಬಂಧ ರೂಪಿಸಬೇಕಾಗಿದ್ದ ಎಲ್ಲ ನಿಯಮಗಳು ಹಾಗೂ ವಿವರಗಳು ಈಗಾಗಲೇ ನಮಗೆ ದೊರೆಯಬೇಕಿದ್ದವು. ಕೇಂದ್ರಾಡಳಿತ ಪ್ರದೇಶ ಮತ್ತು ರಾಜ್ಯಗಳೊಂದಿಗೆ ಅರ್ಥಪೂರ್ಣ ರೀತಿಯಲ್ಲಿ ಚರ್ಚೆ ನಡೆಸಬೇಕು. ಇದು ಕೇವಲ ಔಪಚಾರಿಕತೆಯಾಗಬಾರದು

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ನೀತಿ ನಿಯಮಗಳ ಬೇಲಿ ಇಲ್ಲದೆ ಸಮಾಜ ಜೀವನ ಅಸಾಧ್ಯ.

-ಎಂ. ಗೋಪಾಲಕೃಷ್ಣ ಅಡಿಗ

ಸಂಪಾದಕೀಯ

ಅನನುಭವಿ ವಿಜಯ್‌ಗೆ ದೊಡ್ಡ ಹೊಣೆ ಎದುರಿಗಿದೆ ಸವಾಲುಗಳ ಸರಮಾಲೆ

ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ನಾಯಕ ಸಿ. ಜೋಸೆಫ್ ವಿಜಯ್ ಅವರು ತಮಿಳುನಾಡಿನ ಮುಖ್ಯಮಂತ್ರಿ ಆಗಿ ಪ್ರಮಾಣ ವಚನ ಸ್ವೀಕರಿಸಿರುವುದು ಆ ರಾಜ್ಯದ ರಾಜಕಾರಣದಲ್ಲಿ ಹೊಸತೊಂದು ಅಧ್ಯಾಯಕ್ಕೆ ಮುನ್ನುಡಿ ಬರೆದಿದೆ. ವಿಜಯ್ ಅವರು ಪ್ರಮಾಣ ವಚನ ಸ್ವೀಕರಿಸುವ ಮೊದಲು ಒಂದಿಷ್ಟು ಅನಿಶ್ಚಿತ ಪರಿಸ್ಥಿತಿ ಎದುರಿಸಬೇಕಾಯಿತು. ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ಅವರು ವಿಜಯ್ ಅವರನ್ನು ಸರ್ಕಾರ ರಚನೆಗೆ ಆಹ್ವಾನಿಸಲು ಒಂದಿಷ್ಟು ವಿಳಂಬ ಮಾಡಿದರು. ಹಾಗೆ ಮಾಡಿದ್ದರ ಹಿಂದೆ ರಾಜಕೀಯ ಲೆಕ್ಕಾಚಾರಗಳು ಇದ್ದಿರಬಹುದು. ಚುನಾವಣಾಪೂರ್ವ ಮೈತ್ರಿಕೂಟವೊಂದಕ್ಕೆ ಬಹುಮತ ಸಿಗದೆ ಇದ್ದಾಗ, ಮೈತ್ರಿಕೂಟವು ಸರ್ಕಾರ ರಚನೆಗೆ ಮುಂದಾಗದೆ ಇದ್ದಾಗ, ಅತಿದೊಡ್ಡ ಪಕ್ಷಕ್ಕೆ ಸರ್ಕಾರ ರಚನೆಗೆ ಆಹ್ವಾನ ಕೊಡುವುದು ದೇಶದಲ್ಲಿ ಒಪ್ಪಿತ ಸಂಪ್ರದಾಯವಾಗಿ ಬೆಳೆದುಬಂದಿದೆ. ಆದರೂ ತಮಿಳುನಾಡಿನ ರಾಜ್ಯಪಾಲರು, ಇತರ ಪಕ್ಷಗಳ ಬೆಂಬಲ ಸಿಕ್ಕಿರುವ ಬಗ್ಗೆ ದಾಖಲೆ ಒದಗಿಸಬೇಕು ಎಂದು ವಿಜಯ್ ಅವರಿಗೆ ಸೂಚಿಸಿದರು. ಅಂದರೆ ಮುಂದಿನ ದಿನಗಳಲ್ಲಿ ರಾಜ್ಯಪಾಲರಿಂದ ಸರ್ಕಾರದ ಕೆಲವು ಕೆಲಸಗಳಿಗೆ ಅಡ್ಡಿ ಎದುರಾಗಬಹುದು ಎಂಬ ಸೂಚನೆಯು ಈ ನಡೆಯ ಮೂಲಕ ವಿಜಯ್ ಅವರಿಗೆ ರವಾನೆ ಆದಂತಾಗಿದೆ. ವಿಧಾನಸಭೆಯಲ್ಲಿ ವಿಜಯ್ ಅವರಿಗೆ ಬಹಳ ಕಡಿಮೆ ಪ್ರಮಾಣದ ಬಹುಮತ ಇದೆ. ದ್ರಾವಿಡ ಸಿದ್ಧಾಂತವನ್ನು ಪ್ರತಿಪಾದಿಸದ ಪಕ್ಷವೊಂದು ತಮಿಳುನಾಡಿನಲ್ಲಿ 1967ರ ನಂತರ ಇದೇ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿದೆ. ಆ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ರಚನೆ ಆಗಿರುವುದೂ ಈಚಿನ ದಶಕಗಳಲ್ಲಿ ಇದೇ ಮೊದಲು.



ತಮಿಳುನಾಡು ರಾಜಕಾರಣದಲ್ಲಿ ಮುನ್ನೆಲೆಗೆ ಬಂದಿರುವ ವಿಜಯ್ ಎದುರು ಸಮಸ್ಯೆಗಳು ಸಾಲುಗಟ್ಟಿವೆ. ವಿಜಯ್ ಗೆಲುವು ತಮಿಳುನಾಡು ರಾಜಕಾರಣದಲ್ಲಿ ಹೊಸ ಸಾಧ್ಯತೆಗಳಿಗೂ ಅವಕಾಶ ಕಲ್ಪಿಸಿದೆ.

ವಿಜಯ್ ಅವರು ಚುನಾವಣೆಯಲ್ಲಿ ಸಾಧಿಸಿರುವ ಜಯವು ತಮಿಳುನಾಡಿನ ರಾಜಕಾರಣವನ್ನು ದ್ರಾವಿಡ ಸಿದ್ಧಾಂತದ ಆಚೆಗಿನ ಪಕ್ಷಗಳಿಗೂ ಮುಕ್ತಗೊಳಿಸಿದೆ; ಆ ರಾಜ್ಯದಲ್ಲಿ ಇನ್ನು ಮುಂದೆ ದ್ರಾವಿಡ ಚಳವಳಿಗೆ ಹೊರತಾಗಿರುವ ಪಕ್ಷಗಳೂ ಪ್ರವರ್ಧಮಾನಕ್ಕೆ ಬರಬಹುದು ಎಂಬುದನ್ನು ತೋರಿಸಿಕೊಟ್ಟಿದೆ. ಇದು ರಾಷ್ಟ್ರೀಯ ಪಕ್ಷಗಳಿಗೆ ತಮಿಳುನಾಡಿನಲ್ಲಿ ತಮ್ಮ ನೆಲೆ ವಿಸ್ತರಿಸಿಕೊಳ್ಳಲು ಹೊಸ ಆಸೆಯನ್ನು ಮೂಡಿಸಬಹುದು. ಕಾಮರಾಜ್, ಪೆರಿಯಾರ್ ರಾಮಸ್ವಾಮಿ ಅವರ ಚಿಂತನೆಗಳು ತಮ್ಮ ಪಕ್ಷದ ಪಾಲಿಗೆ ಮಾರ್ಗದರ್ಶಿ ಆಗಿವೆ ಎಂದು ವಿಜಯ್ ಈ ಹಿಂದೆ ಹೇಳಿದ್ದರು. ಪ್ರಸ್ತುತ, ಕಾಂಗ್ರೆಸ್ ಪಕ್ಷವು ವಿಜಯ್ ನೇತೃತ್ವದ ಸರ್ಕಾರದ ಭಾಗವಾಗಿದೆ. ವಿಜಯ್ ಅವರು ಧರ್ಮನಿರಪೇಕ್ಷ ಹಾಗೂ ಮಧ್ಯಮಪಂಥವನ್ನು ಅನುಸರಿಸಬಹುದು ಎಂಬ ಸೂಚನೆಗಳಿವೆ. ವಿಜಯ್ ಅವರಿಗೆ ಬೆಂಬಲ ನೀಡಿರುವ ಪಕ್ಷಗಳು ಬೇಷರತ್ತಾಗಿ ಹಾಗೆ ಮಾಡಿಲ್ಲ ಎಂಬುದು ಗಮನಾರ್ಹ. ಈಗ ಹೇಳಿರುವ ಹಾದಿಯನ್ನು ಬಿಟ್ಟು ಸರ್ಕಾರವು ಬೇರೆ ಹಾದಿ ತುಳಿದಲ್ಲಿ, ಎಡಪಕ್ಷಗಳು ತಮ್ಮ ಬೆಂಬಲದ ಬಗ್ಗೆ ಮರುಚಿಂತನೆ ನಡೆಸಬಹುದು. ಸ್ಥಿರವಾದ ಹಾಗೂ ಧರ್ಮನಿರಪೇಕ್ಷ ತತ್ತ್ವದಲ್ಲಿ ನಂಬಿಕೆ ಇರುವ ಸರ್ಕಾರವನ್ನು ಬಯಸಿ ಬೆಂಬಲ ನೀಡಿರುವುದಾಗಿ ಈ ಪಕ್ಷಗಳು ಹಾಗೂ ವಿಸಿಕೆ ಹೇಳಿವೆ. ಇವು ಡಿಎಂಕೆ ಜೊತೆ ಕೂಡ ಸಮಾಲೋಚನೆ ನಡೆಸಿವೆ. ಹೀಗಾಗಿ ಇವು ಡಿಎಂಕೆ ಮೈತ್ರಿಕೂಟದ ಭಾಗವಾಗಿಯೂ ಇರುವಂತೆ ಕಾಣುತ್ತಿದೆ. ಕಾಂಗ್ರೆಸ್ ಪಕ್ಷವು ತನಗೆ ದ್ರೋಹ ಎಸಗಿದೆ ಎಂದು ಡಿಎಂಕೆ ದೂರಿದೆ. ದಶಕದ ನಂಟನ್ನು ಬಹಳ ಸಲೀಸಾಗಿ ಕಾಂಗ್ರೆಸ್ ಮುರಿದುಕೊಂಡಿದೆ ಎಂದು ಡಿಎಂಕೆ ಅಸಮಾಧಾನ ವ್ಯಕ್ತಪಡಿಸಿದೆ. ವಿಜಯ್ ಅವರನ್ನು ಬೆಂಬಲಿಸಿರುವುದಕ್ಕೆ ಕಾಂಗ್ರೆಸ್‌ಗೆ ತನ್ನದೇ ಆದ ಸಮರ್ಥನೆಗಳಿವೆ. ರಾಜ್ಯದಲ್ಲಿ ಮುಂದಿನ ಎಲ್ಲ ಚುನಾವಣೆಗಳನ್ನು ವಿಜಯ್ ಪಕ್ಷದ ಜೊತೆಗೂಡಿ ಎದುರಿಸುವುದಾಗಿ ಅದು ಹೇಳಿದೆ.

ಮಹಿಳೆಯರ ರಕ್ಷಣೆಗೆ ಪ್ರತ್ಯೇಕ ದಳ, ಮಾದಕ ಪದಾರ್ಥ ವಿರೋಧಿ ಘಟಕ ಹಾಗೂ ಅರ್ಹರಿಗೆ ಉಚಿತ ವಿದ್ಯುತ್ ಘೋಷಣೆ ಮಾಡುವ ಮೂಲಕ ವಿಜಯ್ ಅವರು ಸರ್ಕಾರಿಯಂತ್ರಕ್ಕೆ ಚಾಲನೆ ನೀಡಿದ್ದಾರೆ. ಡಿಎಂಕೆ ನೇತೃತ್ವದ ಹಿಂದಿನ ಸರ್ಕಾರವು ರಾಜ್ಯದ ಮೇಲೆ ₹10 ಲಕ್ಷ ಕೋಟಿ ಮೊತ್ತದ ಸಾಲದ ಹೊರೆ ಹೊರಿಸಿದೆ ಎಂದು ಅವರು ಆರೋಪಿಸಿದ್ದಾರೆ. ರಾಜ್ಯದ ಹಣಕಾಸಿನ ಸ್ಥಿತಿಯ ಬಗ್ಗೆ ಶ್ವೇತಪತ್ರ ಹೊರಡಿಸುವುದಾಗಿಯೂ ಹೇಳಿದ್ದಾರೆ. ದೇಶದ ಬಹುತೇಕ ರಾಜ್ಯಗಳು ಸಾಲದ ಭಾರೀ ಹೊರೆಯನ್ನು ಹೊತ್ತಿವೆ. ಸಾಲದ ಹೊರೆಯು ವಿಜಯ್ ಅವರಿಗೆ ತಮ್ಮ ಜನಪ್ರಿಯ ಘೋಷಣೆಗಳನ್ನು ಜಾರಿಗೆ ತರಲು ಅಡ್ಡಿಯಾಗಿ ಪರಿಣಮಿಸಬಹುದು. ರಾಜಕಾರಣ ಹಾಗೂ ಆಡಳಿತದಲ್ಲಿ ಯಾವುದೇ ಅನುಭವ ಇಲ್ಲದ ಅವರು, ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯದ ಹಿತಾಸಕ್ತಿಯನ್ನು ರಕ್ಷಿಸುವ ಹೊಣೆ ಸೇರಿದಂತೆ ಹಲವು ಬಗೆಯ ಸವಾಲುಗಳನ್ನು ಎದುರಿಸಬೇಕಾಗಿದೆ. ಆ ಸವಾಲುಗಳನ್ನು ಹೇಗೆ ಎದುರಿಸುತ್ತಾರೆ ಎನ್ನುವುದೇ ಅವರ ಮುಂದಿನ ರಾಜಕೀಯ ಭವಿಷ್ಯವನ್ನು ನಿರ್ಧರಿಸಲಿದೆ.

ಜಾಲಜಗಲಿ

ಸಿದ್ಧಾಂತ ಎಲ್ಲಿದೆ?



ಈ ಮೊದಲು ಜನಪ್ರತಿನಿಧಿಗಳು ಹೋರಾಟ, ಸಿದ್ಧಾಂತದ ತಳಹದಿಯಿಂದ ಬಂದು ಜನರಿಂದ ಆಯ್ಕೆ ಆಗುತ್ತಿದ್ದರು. ಇಂದು ಮೊದಲು ಡಿಸ್ಟಿಲರಿ ಸ್ಥಾಪಿಸಿ ಅಥವಾ ಗುತ್ತಿಗೆದಾರರಾಗಿ, ನಂತರ ರಿಯಲ್ ಎಸ್ಟೇಟ್ ಉದ್ಯಮಿಯಾಗಿ ಕೋಟಿ ಕೋಟಿ ಸಂಪಾದನೆ ಮಾಡಿ ರಾಜಕಾರಣಕ್ಕೆ ಬಂದು ಜನರಿಂದ ಆಯ್ಕೆ ಆಗುತ್ತಾರೆ.

ರೋಹಿತ್ ಸಿಂಹ, ಎಂಜಿನಿಯರ್, 'ಎಕ್ಸ್'ನಿಂದ

ಕಿಡಿನುಡಿ



ಕನ್ನಡನಾಡಿಗೆ ಭೇಟಿ ನೀಡಿದ್ದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು, ಕಳೆದ 12 ವರ್ಷಗಳಲ್ಲಿ ತಮ್ಮ ಆಡಳಿತದಿಂದ 6.5 ಕೋಟಿ ಕನ್ನಡಿಗರಿಗೆ ಆಗಿರುವ ಅನ್ಯಾಯದ ಬಗ್ಗೆ ಮಾತನಾಡುವ ಬದಲು, 'ಕುರ್ಚಿ' ರಾಜಕಾರಣದ ಬಗ್ಗೆ ಮಾತನಾಡಿರುವುದು ದುರದೃಷ್ಟಕರ.

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

25 ವರ್ಷಗಳ ಹಿಂದೆ

ಶನಿವಾರ, 12-5-2001

- **ಗುತ್ತಿಗೆ ವೈದ್ಯ ಸಿಬ್ಬಂದಿಯ ಸೇವೆ ಕಾಯಂ: ಮಾಲಕರೆಡ್ಡಿ**

ಶಿವಮೊಗ್ಗ, ಮೇ 11– ಆರೋಗ್ಯ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು 3 ವರ್ಷಗಳ ಕಾಲ ಚೆನ್ನಾಗಿ ಕಾರ್ಯ ನಿರ್ವಹಿಸುವ ವೈದ್ಯ ಸಿಬ್ಬಂದಿಯ ಸೇವೆಯನ್ನು ಕಾಯಂ ಮಾಡಲಾಗುವುದು ಎಂದು ಆರೋಗ್ಯ ಸಚಿವ ಡಾ. ಎ.ಬಿ. ಮಾಲಕರೆಡ್ಡಿ ತಿಳಿಸಿದರು.

ಕರ್ನಾಟಕ ರಾಜ್ಯದ ಹಿರಿಯ ಮತ್ತು ಕಿರಿಯ ಆರೋಗ್ಯ ಸಹಾಯಕರ ಸಂಘವು ಏರ್ಪಡಿಸಿದ್ದ ಹಿರಿಯ ಮತ್ತು ಕಿರಿಯ ಆರೋಗ್ಯ ಸಹಾಯಕರ ರಾಜ್ಯಮಟ್ಟದ ಪ್ರಥಮ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯಮಟ್ಟದಲ್ಲಿ ಕೇಂದ್ರೀಕೃತ ವ್ಯವಸ್ಥೆಯಲ್ಲಿ ನೇಮಕಾತಿ ಪ್ರಕ್ರಿಯೆ ತುಂಬ ಸಮಯ ತೆಗೆದುಕೊಳ್ಳುತ್ತದೆ. ಆದ್ದರಿಂದ ನೇಮಕಾತಿ ಪ್ರಕ್ರಿಯೆಯನ್ನು ವಿಕೇಂದ್ರೀಕರಣಗೊಳಿಸಿ ಜಿಲ್ಲಾಮಟ್ಟದಲ್ಲಿ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ ಎಂದರು.

- **ಹಿಪ್ಪರಗಿ ಬ್ಯಾರೇಜ್‌ವರೆಗೆ ಭೀಮಾ ನೀರು: ಮಹಾರಾಷ್ಟ್ರ ಭರವಸೆ**

ವಿಜಾಪುರ, ಮೇ 11– ಮಹಾರಾಷ್ಟ್ರ ಸರ್ಕಾರ ಉಜನಿ ಅಣೆಕಟ್ಟೆಯಿಂದ ಭೀಮಾ ನದಿಗೆ ಬಿಟ್ಟಿರುವ ನೀರನ್ನು ಹಿಪ್ಪರಗಿ ಬ್ಯಾರೇಜ್‌ವರೆಗೆ ಮಾತ್ರ ಹರಿಸಲಾಗುವುದು ಎಂದು ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲಾ ಉಸ್ತುವಾರಿ ಸಚಿವ ಆನಂದರಾವ್ ದೇವಕತೆ ತಿಳಿಸಿದರು.

75 ವರ್ಷಗಳ ಹಿಂದೆ

ಶನಿವಾರ, 12-5-1951

- **ರಾಷ್ಟ್ರಾಧ್ಯಕ್ಷರಿಂದ ಸೋಮನಾಥ ವಿಗ್ರಹ ಪ್ರತಿಷ್ಠಾಪನೆ**

ಪ್ರಭಾಸ್ ಪಟ್ಟಣ, ಮೇ 11– ಪ್ರಶಾಂತ ಗಂಭೀರ ವಾತಾವರಣದಲ್ಲಿ ಇತಿಹಾಸ ಪ್ರಸಿದ್ಧ ಪುನರ್‌ನಿರ್ಮಿತ ಸೋಮವಾಥ ದೇವಾಲಯದಲ್ಲಿ ಜ್ಯೋತಿರ್ಲಿಂಗ ವಿಗ್ರಹದ ಪ್ರತಿಷ್ಠಾಪನೆಯನ್ನು ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು 9.47 ಗಂಟೆಗೆ ನೆರವೇರಿಸಿದರು.

ಬಿಳಿ ಖದ್ದರ್ ಧೋತಿಯುಟ್ಟು, ತೆಳು ಹಳದಿಬಣ್ಣದ ರೇಷ್ಮೆಯ ಉತ್ತರೀಯ ಹೊದ್ದು ಬರೀತಲೆಯಲ್ಲಿ ರಾಷ್ಟ್ರಾಧ್ಯಕ್ಷರು, ವಿಗ್ರಹದ ಅಡಿಯಲ್ಲಿ ನೆಟ್ಟಿದ್ದ ಚಿನ್ನದ ಸರಳನ್ನು ಎಳೆದು ಪ್ರತಿಷ್ಠಾಪನೆ ಮಾಡಿದರು. ವಿಶ್ವದ ನೂರೆಂಟು ಸ್ಥಳಗಳಿಂದ ತಂದ ನೀರಿನಲ್ಲಿ ತೊಳೆದ ಲಿಂಗದ ಮೇಲೆ 3 ಸಾಲು ಗಂಧ ಬಳಿಯಲಾಯಿತು.

ಸಾಂತ್ವನ ಕೇಂದ್ರ: ಯಾಕೆ ಕೆಂಗಣ್ಣು?



ವಿಶ್ಲೇಷಣೆ

ರೂಪ ಹಾಸನ

ಸಂತ್ರಸ್ತ ಹೆಣ್ಣುಮಕ್ಕಳಿಗೆ ನೆರವು ಒದಗಿಸುವ 'ಸಾಂತ್ವನ ಕೇಂದ್ರ'ಗಳನ್ನು ಹಣಕಾಸಿನ ಕೊರತೆ ಹಾಗೂ ಇತರೆ ನೆಪಗಳನ್ನೊಡ್ಡಿ ಮುಚ್ಚಲು ಸರ್ಕಾರ ಹವಣಿಸುತ್ತಿದೆ. ಸಂಕಷ್ಟದಲ್ಲಿರುವ ಮಹಿಳೆಯರಿಗೆ ನೆರವು ನೀಡುವುದು ಸರ್ಕಾರಕ್ಕೆ ಹೊರೆಯೆನ್ನಿಸುತ್ತಿದೆಯೆ?

ಲಿಂಗಾಧಾರಿತ ತಾರತಮ್ಯ, ಅಸಮಾನತೆಗಳು ಸಮಾಜದಲ್ಲಿ ಆಳವಾಗಿ ಬೇರೂರಿವೆ. ಅವುಗಳಿಂದಾಗಿ ಹೆಣ್ಣುಮಕ್ಕಳು ಮತ್ತೆ ಮತ್ತೆ ಸಂಕಷ್ಟ, ದೌರ್ಜನ್ಯ, ಹಿಂಸೆ, ಕಿರುಕುಳಕ್ಕೆ ಗುರಿಯಾಗುತ್ತಿದ್ದಾರೆ. ಅಂಥ ದೌರ್ಜನ್ಯಗಳ ಬಗ್ಗೆ ಜಾಗೃತಿ ಮೂಡಿಸುವುದು, ದೌರ್ಜನ್ಯ ನಡೆಯದಂತೆ ತಡೆಯುವುದು, ಸಂಕಷ್ಟಕ್ಕೆ ಒಳಗಾದವರಿಗೆ ತಕ್ಷಣದ ಸಾಂತ್ವನ, ಆಪ್ತ ಸಮಾಲೋಚನೆ, ಕಾನೂನು ನೆರವು, ಆರ್ಥಿಕ ಬೆಂಬಲ ನೀಡಿ ಮಹಿಳೆ ಧೃತಿಗೆಡದಂತೆ, ಬದುಕಿನಿಂದ ವಿಮುಖಗೊಳ್ಳದಂತೆ ಅನುಪಾಲನೆ ಮಾಡುವುದು ಸರ್ಕಾರದ ಕರ್ತವ್ಯವಾಗಿದೆ. ಈ ಎಲ್ಲ ಉದ್ದೇಶಗಳನ್ನು ಮೂಲಮಟ್ಟದಲ್ಲಿ ಮತ್ತು ವಿಕೇಂದ್ರೀಕೃತವಾಗಿ ಪೂರೈಸುವ ಒಂದು ಸಾಧನವಾಗಿ 'ಸಾಂತ್ವನ ಕೇಂದ್ರ'ಗಳು ಕಾರ್ಯನಿರ್ವಹಿಸುತ್ತಿವೆ.

ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ರಾಜ್ಯದ ಪ್ರತಿ ತಾಲ್ಲೂಕಿನಲ್ಲಿಯೂ 'ಸಾಂತ್ವನ' ಕೇಂದ್ರಗಳನ್ನು ನಡೆಸಲಾಗುತ್ತಿದೆ. ಇವುಗಳನ್ನು ಇಲಾಖೆಯು ಸ್ವಯಂ ನಿರ್ವಹಿಸಲು ಸಾಧ್ಯವಿಲ್ಲವೆಂದು, ಸ್ವಯಂಸೇವಾ ಸಂಸ್ಥೆಗಳ ಮೂಲಕ ನಿರ್ವಹಣೆ ಮಾಡಲಾಗುತ್ತಿದೆ. ಪ್ರತಿ ಕೇಂದ್ರದಲ್ಲಿಯೂ 181 ಸಹಾಯವಾಣಿ ಸ್ಥಾಪಿಸಲಾಗಿದ್ದು, ದಿನದ 24 ಗಂಟೆಯೂ ಸಂಕಷ್ಟಕ್ಕೊಳಗಾದ ಮಹಿಳೆಯರಿಂದ ಶುಲ್ಕರಹಿತ ಕರೆಗಳನ್ನು ಸ್ವೀಕರಿಸಿ, ತಕ್ಷಣವೇ ನೆರವು ನೀಡಲಾಗುತ್ತಿದೆ. ಈ ಕೇಂದ್ರಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಾ 25 ವರ್ಷಗಳೇ ಸಂದಿವೆ.

ಹೆಣ್ಣುಮಕ್ಕಳ ಮೇಲಾಗುವ ವರದಕ್ಷಿಣೆ ಹಿಂಸೆ, ಕೌಟುಂಬಿಕ ದೌರ್ಜನ್ಯ-ವ್ಯಾಜ್ಯ, ವಿವಾಹೇತರ ಸಂಬಂಧದ ಕಲಹ, ಕುಡುಕ ಗಂಡನಿಂದ ಕಿರುಕುಳ, ಅತ್ಯಾಚಾರ ಹಾಗೂ ಲೈಂಗಿಕ ಕಿರುಕುಳಗಳಿಗೆ ಆಪ್ತಸಮಾಲೋಚನೆ, ಸಾಂತ್ವನ, ತಾತ್ಕಾಲಿಕ ಆಶ್ರಯ, ಕಾನೂನಿನ ಸಹಾಯ, ತಳಹಂತದಲ್ಲಿ ಜಾಗೃತಿ ಕಾರ್ಯಕ್ರಮ ಹಾಗೂ ಪೊಲೀಸ್ ಬೆಂಬಲವನ್ನು ಒದಗಿಸುವ ಉದ್ದೇಶದಿಂದ 'ಸಾಂತ್ವನ' ಯೋಜನೆಯನ್ನು ಎಸ್.ಎಂ. ಕೃಷ್ಣ ಅವರ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 2000-2001ನೇ ಸಾಲಿನಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಲಾಯಿತು. ಅದೊಂದು ಪರಿಣಾಮಕಾರಿ ಯೋಜನೆಯೆಂದು ಮನವರಿಕೆಯಾದ ನಂತರ 2007-2008ರಿಂದ ರಾಜ್ಯದ ಎಲ್ಲ ತಾಲ್ಲೂಕುಗಳಲ್ಲೂ ಸಾಂತ್ವನ ಕೇಂದ್ರಗಳು ಸ್ಥಾಪನೆಯಾಗಿ, ಒಟ್ಟು 194 ಕೇಂದ್ರಗಳು ಕಾರ್ಯನಿರ್ವಹಿಸುತ್ತಾ ಬಂದವು.

ಇತ್ತೀಚಿನ ವರ್ಷಗಳಲ್ಲಿ ಸಾಂತ್ವನ ಕೇಂದ್ರಗಳನ್ನು ಶಾಶ್ವತವಾಗಿ ಮುಚ್ಚುವ ಪ್ರಯತ್ನಗಳು ಸರ್ಕಾರದಿಂದ ನಡೆಯುತ್ತಿವೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ, ಹೆಣ್ಣುಮಕ್ಕಳಿಗಾಗಿ ವಿವಿಧ ಯೋಜನೆಗಳು, ಸವಲತ್ತುಗಳು, ಕಾರ್ಯಕ್ರಮಗಳು ಜಾರಿಯಲ್ಲಿವೆ. ಆದರೆ, ಸಂಕಷ್ಟಕ್ಕೆ ಸಿಲುಕಿ, ಸಹಾಯಕ್ಕಾಗಿ ಇಲಾಖೆಯನ್ನು ಸಂಪರ್ಕಿಸುವ ಮಹಿಳೆಯರೊಂದಿಗೆ ಗಂಟೆಗಟ್ಟಲೆ ಮಾತುಕತೆ, ಮಧ್ಯಸ್ಥಿಕೆ ನಡೆಸಿ, ಸೂಕ್ತ ಮಾರ್ಗದರ್ಶನ, ಬೆಂಬಲ ಮತ್ತು ದಾರಿ ತೋರಲು ಯಾವ ಸಶಕ್ತ ಉಪಕ್ರಮವೂ ಇಲ್ಲ. ಸಾಂತ್ವನ ಕೇಂದ್ರಗಳು ಈ ಕೆಲಸವನ್ನು ಸಮರ್ಥವಾಗಿ ಮಾಡುತ್ತಾ ಬಂದಿವೆ.

2021ರಲ್ಲಿ ಬಿಜೆಪಿ ಸರ್ಕಾರವಿದ್ದಾಗ, ಮೊದಲ ಬಾರಿಗೆ 71 ಸಾಂತ್ವನ ಕೇಂದ್ರಗಳನ್ನು ಸ್ಥಗಿತಗೊಳಿಸಲು ಆದೇಶಿಸಲಾಯಿತು. ಅದು ಕೋವಿಡ್ ಸೋಂಕು ತೀವ್ರವಾಗಿದ್ದ ಸಂದರ್ಭ. ಆರ್ಥಿಕ ಕೊರತೆ ಮತ್ತು ಜಿಲ್ಲೆಗಳಲ್ಲಿ 'ಸಖಿ' ಒನ್ ಸ್ಟಾಪ್ ಸೆಂಟರ್, ಸ್ವಾಧಾರ ಕೇಂದ್ರ, ರಾಜ್ಯದ ಹಲವೆಡೆ ಮಹಿಳಾನಿಲಯಗಳು ಇಂತಹುದೇ ಕಾರ್ಯ ನಿರ್ವಹಿಸುತ್ತಿರುವುದರಿಂದ 'ಸಾಂತ್ವನ' ಕೇಂದ್ರಗಳು ಅನುಪಯುಕ್ತವೆಂಬ ಕುಂಟುನೆಪ ನೀಡಲಾಗಿತ್ತು. ಸರ್ಕಾರದ ಆದೇಶ ಜಾರಿಗೆ ಬಂದಿದ್ದರೆ ಆ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿದ್ದ 300ಕ್ಕೂ ಹೆಚ್ಚು ಮಹಿಳಾ ಸಿಬ್ಬಂದಿ ನಿರುದ್ಯೋಗಿಗಳಾಗುತ್ತಿದ್ದರು. ಅದನ್ನು ತಪ್ಪಿಸಲು ನಿರಂತರ ಪ್ರತಿಭಟನೆ ನಡೆಸಿ, ಸರ್ಕಾರಕ್ಕೆ ವಸ್ತುಸ್ಥಿತಿಯನ್ನು ಮನವರಿಕೆ ಮಾಡಿಕೊಡಲಾಯ್ತು.

ಅಂದು ವಿರೋಧ ಪಕ್ಷದ ನಾಯಕರಾಗಿದ್ದ, ಇಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ಆರ್ಥಿಕ ಕೊರತೆಯ ನೆಪವೊಡ್ಡಿ, ಸಾಂತ್ವನ ಕೇಂದ್ರಗಳನ್ನು ಸ್ಥಗಿತಗೊಳಿಸದಂತೆ' ಅಂದಿನ ಮುಖ್ಯಮಂತ್ರಿಗೆ ಪತ್ರ ಬರೆದಿದ್ದರು. ಇದೆಲ್ಲದರ ಪರಿಣಾಮ, ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿದಿತ್ತು. ಆದರೆ, ಅಷ್ಟರಲ್ಲಿ ಕೆಲವು ತಾಲ್ಲೂಕುಗಳಲ್ಲಿ ಸಾಂತ್ವನ ಕೇಂದ್ರಗಳು ಮುಚ್ಚಿಹೋಗಿದ್ದವು. ಪ್ರಸ್ತುತ ರಾಜ್ಯದಲ್ಲಿ 176 ಸಾಂತ್ವನ ಕೇಂದ್ರಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ.

2024ರಲ್ಲಿಯೂ ಹಣದ ಕೊರತೆಯಿಂದಾಗಿ ಸಾಂತ್ವನ ಕೇಂದ್ರಗಳನ್ನು ಸೆಪ್ಟೆಂಬರ್ 2025ರೊಳಗೆ ಸ್ಥಗಿತಗೊಳಿಸುವಂತೆ ಸರ್ಕಾರಿ ಆದೇಶ ಹೊರಬಿತ್ತು. ವಿಪರ್ಯಾಸವೆಂದರೆ, ಸಾಂತ್ವನ ಕೇಂದ್ರಗಳನ್ನು ಮುಚ್ಚಬಾರದೆಂದು ಅಂದು ಪತ್ರ ಬರೆದಿದ್ದ ಸಿದ್ದರಾಮಯ್ಯ ಅವರೇ ಈಗ ಮುಖ್ಯಮಂತ್ರಿ!

ಪ್ರಸ್ತುತ, ಪ್ರತಿ ಸಾಂತ್ವನ ಕೇಂದ್ರದಲ್ಲಿ ನಾಲ್ಕು ಸಿಬ್ಬಂದಿಯಷ್ಟೇ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರಿಗೆ ನಾಲ್ಕು ತಿಂಗಳಿಗೊಮ್ಮೆ ಗೌರವಧನ ಬಿಡುಗಡೆಯಾಗುತ್ತಿದೆ. ಒಂದು ಕೇಂದ್ರಕ್ಕೆ, ತಿಂಗಳಿಗೆ 55ರಿಂದ 60 ಸಾವಿರ ರೂಪಾಯಿಗಳನ್ನಷ್ಟೇ ಸರ್ಕಾರ ವೆಚ್ಚ ಮಾಡುತ್ತಿದೆ. ಕೇಂದ್ರದ ಹೆಚ್ಚುವರಿ ಖರ್ಚುಗಳನ್ನು ಸ್ವಯಂಸೇವಾ ಸಂಸ್ಥೆಗಳು ಭರಿಸುತ್ತಿವೆ. ನಾಡಿನ ಸಂಕಷ್ಟದಲ್ಲಿರುವ ಮಹಿಳೆಯರ ಸಮಸ್ಯೆಗೆ ಪರಿಹಾರ ಒದಗಿಸಲು ಇಷ್ಟು ಹಣ ವಿನಿಯೋಗಿಸುವುದೂ ಘನ ಸರ್ಕಾರಕ್ಕೆ ಕಷ್ಟವೇ?

ಸಾಂತ್ವನ ಕೇಂದ್ರಗಳನ್ನು ಮುಂದುವರಿಸುವಂತೆ 2024ರಲ್ಲೂ ಮಹಿಳಾ ಸಮುದಾಯದಿಂದ, ಹೋರಾಟಗಾರರಿಂದ ಹಾಗೂ ಕೆಲವು ಜನಪ್ರತಿನಿಧಿಗಳಿಂದ ಒತ್ತಡ ಹೇರಲಾಯ್ತು. ನಂತರ ಇಲಾಖೆಯ ಉನ್ನತಾಧಿಕಾರಿಗಳು, ಆಯಾ ಜಿಲ್ಲಾಧಿಕಾರಿಯ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಸ್ಥಳೀಯವಾಗಿ ಸಾಂತ್ವನ ಕೇಂದ್ರ ಬೇಕೋ ಬೇಡವೋ ನಿರ್ಧರಿಸಿ ತಿಳಿಸಲು ಪತ್ರ ಬರೆದಿದ್ದರು. ಅದರಂತೆ 23 ಜಿಲ್ಲೆಗಳಿಂದ 'ಸಾಂತ್ವನ ಕೇಂದ್ರಗಳು ಬೇಕು' ಎಂಬ ಶಿಫಾರಸು ಹೋದ ನಂತರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಹಾಗೂ ಅಧಿಕಾರಿಗಳು ಕೇಂದ್ರಗಳ ಮುಂದುವರಿಕೆಗೆ ಆದೇಶಿಸಿದ್ದರು. ಆದರೆ, ಆರ್ಥಿಕ ಇಲಾಖೆಯ ಶಿಫಾರಸಿನಂತೆ ಈಗ ಮತ್ತೆ 2026-27ರೊಳಗೆ 23 ಜಿಲ್ಲಾ ಸಾಂತ್ವನ ಕೇಂದ್ರಗಳನ್ನು ಮುಚ್ಚಿ, ಅವಶ್ಯಕತೆ ಇರುವ ತಾಲ್ಲೂಕು ಕೇಂದ್ರಕ್ಕೆ ಅವನ್ನು ಸ್ಥಳಾಂತರ ಮಾಡಲು ಆದೇಶಿಸಿದೆ. ಆದರೆ, ಜಿಲ್ಲಾ ಕೇಂದ್ರದಲ್ಲಿ ದಶಕಗಳಿಂದ ಸ್ಥಾಪನೆಗೊಂಡು ಕೆಲಸ ಮಾಡುತ್ತಿರುವ ಸ್ವಯಂಸೇವಾ ಸಂಸ್ಥೆಗಳಿಗಿದು ಆಗದ ಕೆಲಸ. ಜೊತೆಗೆ ಜಿಲ್ಲೆಯ ಎಲ್ಲ ತಾಲ್ಲೂಕಿನಲ್ಲೂ ಈಗಾಗಲೇ ಸಾಂತ್ವನ ಕೇಂದ್ರಗಳಿದ್ದರೆ ಏನು ಮಾಡಬೇಕೆಂದು ಆದೇಶ ತಿಳಿಸಿಲ್ಲ. ಮುಂದುವರಿಸಲು ಆಗದಿದ್ದರೆ ಒಳ್ಳೆಯದೇ ಆಯ್ತು, ಶಾಶ್ವತವಾಗಿ ಮುಚ್ಚಿಬಿಡಲಿ ಎಂಬುದೇ ಸರ್ಕಾರದ ಧೋರಣೆ ಆಗಿರುವಂತಿದೆ.

ಕೇಂದ್ರ ಸರ್ಕಾರದಿಂದ 2012ರಲ್ಲಿ ಹೊರಡಿಸಲಾದ ಆದೇಶದಂತೆ, ಪ್ರತಿ ಜಿಲ್ಲಾ ಆಸ್ಪತ್ರೆಯಲ್ಲಿ ರೂಪಿಸಲಾಗಿರುವ 'ಸಖಿ ಒನ್ ಸ್ಟಾಪ್ ಸೆಂಟರ್'ನಂತೆಯೇ ಇರುವುದರಿಂದ, 'ಸಾಂತ್ವನ ಕೇಂದ್ರ'ಗಳು ಅನಗತ್ಯ ಎಂದು ಹೇಳಲಾಗುತ್ತಿದೆ. ಆದರೆ, ಸಖಿ ಕೇಂದ್ರಗಳು– ವಿವಿಧ ರೀತಿಯ ಹಿಂಸೆ, ಅತ್ಯಾಚಾರ, ಲೈಂಗಿಕ ಕಿರುಕುಳ, ನಾಪತ್ತೆ-ಅಪಹರಣ-ಕಳ್ಳಸಾಗಣೆ, ಸೈಬರ್ ಅಪರಾಧ, ಲೈಂಗಿಕ ದೌರ್ಜನ್ಯ, ವರದಕ್ಷಿಣೆ ಕಿರುಕುಳ... ಇವುಗಳಿಗೆ ಒಳಗಾಗಿ ಆಸ್ಪತ್ರೆಗೆ ದಾಖಲಾಗುವ ಮಹಿಳೆ ಮತ್ತು ಮಕ್ಕಳ ಸಂಬಂಧಿತವಾಗಿ ಕಾರ್ಯ ನಿರ್ವಹಿಸುತ್ತಿವೆ. ಇವುಗಳೆಲ್ಲ ಕಾನೂನಿನ ಕಕ್ಷೆಗೆ ನೇರವಾಗಿ ಒಳಪಡುವುದರಿಂದ ಸಂತ್ರಸ್ತರಿಗೆ ಒಂದೇ ಸೂರಿನಡಿ ಆಪ್ತಸಮಾಲೋಚನೆ, ಚಿಕಿತ್ಸೆ, ಕಾನೂನು, ಪೊಲೀಸ್ ಮತ್ತು ಪರಿಹಾರದ ತುರ್ತು ಸೇವೆ ಒದಗಿಸುವುದು ಸುಲಭವಾಗುತ್ತದೆ.

ಸಾಂತ್ವನ ಕೇಂದ್ರಕ್ಕೆ ಬರುವ ಹೆಚ್ಚಿನವರು ಪೊಲೀಸ್ ಠಾಣೆ ಅಥವಾ ನ್ಯಾಯಾಲಯದ ಮೆಟ್ಟಿಲೇರದೆಯೇ ಕೌಟುಂಬಿಕ ಸಮಸ್ಯೆಯನ್ನು ಮಧ್ಯಸ್ಥಿಕೆ, ಮಾತುಕತೆ, ಆಪ್ತ ಸಮಾಲೋಚನೆಯ ಮೂಲಕ ಬಗೆಹರಿಸಿಕೊಳ್ಳಲು ಬಯಸುತ್ತಾರೆ. ಹೀಗಾಗಿ, ಸಾಂತ್ವನ ಕೇಂದ್ರಗಳು ಬಹುಮುಖ್ಯವಾಗಿ ಸಶಕ್ತವಾದ ಮಧ್ಯಸ್ಥಿಕೆ ಮತ್ತು ಅನುಪಾಲನಾ ಕೇಂದ್ರಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ತೀವ್ರ ರೀತಿಯ ಸಮಸ್ಯೆ ಇದ್ದು, 'ಸಾಂತ್ವನ'ದಲ್ಲಿ ಬಗೆಹರಿಸಲಾಗದಿದ್ದರೆ, ಆ ಕೇಂದ್ರದವರೇ ತಮ್ಮ ಬಳಿಗೆ ನೆರವು ಕೋರಿ ಬಂದವರನ್ನು ಸಖಿ ಒನ್ ಸ್ಟಾಪ್ ಸೆಂಟರ್, ಪೊಲೀಸ್, ಕಾನೂನು ನೆರವಿಗೆ ಕರೆದೊಯ್ಯುತ್ತಾರೆ. ನಿರ್ಗತಿಕ ಅಥವಾ ಪರಿತ್ಯಕ್ತ ಮಹಿಳೆಯರಾಗಿದ್ದರೆ ಅವರನ್ನು ಸ್ವಾಧಾರ ಮತ್ತು ರಾಜ್ಯ ಮಹಿಳಾನಿಲಯಗಳಿಗೆ ಸೇರ್ಪಡೆಗೊಳಿಸುತ್ತಾರೆ. ಇದಲ್ಲದೇ ಸಾಂತ್ವನದವರು ತಮ್ಮ ತಾಲ್ಲೂಕಿನ ವ್ಯಾಪ್ತಿಯ ಹಳ್ಳಿಗಳ ಮಹಿಳೆಯರು, ಸ್ವಸಹಾಯ-ಸ್ತ್ರೀಶಕ್ತಿ ಸಂಘಗಳಿಗೆ ಇಲಾಖೆಯಿಂದ ಮಹಿಳಾ ಸಂಬಂಧಿತವಾಗಿ ಇರುವ ಯೋಜನೆಗಳು, ಅನುಕೂಲಗಳು, ಕಾನೂನಿನ ನೆರವು, ಮಹಿಳಾ ಸಹಾಯವಾಣಿಗಳ ಕುರಿತು ನಿರಂತರ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಾರೆ.

ಬಹುಮುಖ್ಯವಾಗಿ ಸಾಂತ್ವನ ಕೇಂದ್ರಗಳು ಸಂತ್ರಸ್ತರಿಗೆ ಮೊದಲ ಹಂತದ ಮಾರ್ಗದರ್ಶನ, ಆಪ್ತಸಮಾಲೋಚನೆ, ಮಧ್ಯಸ್ಥಿಕೆಯನ್ನು ನಿರ್ವಹಿಸುವ ಸಮನ್ವಯ ಘಟಕಗಳಾಗಿ, ಕಲ್ಯಾಣ ಕೆಲಸಗಳನ್ನು ಸಮರ್ಥವಾಗಿ ನಿಭಾಯಿಸುತ್ತಿವೆ. ಇನ್ನಷ್ಟು ಸ್ಪಷ್ಟವಾಗಿ ಮತ್ತು ನಿಖರವಾಗಿ ಈ ದಿಕ್ಕಿನೆಡೆಗೆ ಕೆಲಸ ಮಾಡಲೂ ಈ ಸಿಬ್ಬಂದಿಗೆ ಪೂರಕ ತರಬೇತಿ, ಮಾರ್ಗದರ್ಶನ ಮತ್ತು ಜವಾಬ್ದಾರಿಯನ್ನು ಸರ್ಕಾರ ನೀಡಬೇಕಿದೆ.

ಜಿಲ್ಲಾಮಟ್ಟದಲ್ಲಿ ಹೆಚ್ಚುತ್ತಿರುವ ಕೌಟುಂಬಿಕ ಕಲಹ, ಮಹಿಳೆಯರ ಸಂಕೀರ್ಣ ಸಮಸ್ಯೆಗಳನ್ನು ನಿಯಂತ್ರಿಸಲು ಸರ್ಕಾರವು ತಾಯ್ತನದ ಪಾತ್ರ ವಹಿಸಿ, ಸಶಕ್ತವಾಗಿ ಸೇವೆ ಒದಗಿಸುವ ಸಾಂತ್ವನ ಕೇಂದ್ರದಂತಹ ಯೋಜನೆ, ನೆಲೆಗಳನ್ನು ಇನ್ನಷ್ಟು ಸ್ಥಾಪಿಸಬೇಕು. ಹಾಗೂ ಉಳಿಕೆ ಇರುವ ಜಿಲ್ಲೆ, ತಾಲ್ಲೂಕುಗಳಲ್ಲೂ ಸಾಂತ್ವನ ಕೇಂದ್ರಗಳನ್ನು ಕಡ್ಡಾಯವಾಗಿ ಪ್ರಾರಂಭಿಸಬೇಕು. ಪ್ರಸ್ತುತ, ಜಿಲ್ಲಾ ಕೇಂದ್ರಗಳಲ್ಲಿ ಇರುವ 'ಸಾಂತ್ವನ' ವ್ಯವಸ್ಥೆಯನ್ನು ಯಾವ ಕಾರಣಕ್ಕೂ ಸ್ಥಗಿತಗೊಳಿಸಬಾರದು ಎಂಬುದು ರಾಜ್ಯದ ಹೆಣ್ಣುಸಂಕುಲದ ಒಕ್ಕೊರಲ ಆಗ್ರಹವಾಗಿದೆ.



ವಾಚಕರ ವಾಣಿ

ದಾದಿ: ಅಂತಃಕರಣದ ದೀಪಧಾರಿಣಿ

'ನಮ್ಮ ನರ್ಸ್‌ಗಳು–ನಮ್ಮ ಭವಿಷ್ಯ' ಎಂಬ ಮಾತು ಬರೀ ಘೋಷವಾಕ್ಯವಲ್ಲ; ಅದು ಆರೋಗ್ಯಕರ ಸಮಾಜದ ಬಲವಾದ ಸತ್ಯ. ರೋಗಿಯ ಆರೈಕೆಯಲ್ಲಿ ಮತ್ತು ಆರೋಗ್ಯ ಜಾಗೃತಿ ಮೂಡಿಸುವಲ್ಲಿ ನರ್ಸ್‌ಗಳ ಪಾತ್ರ ಹಿರಿದು. ಆಧುನಿಕ ಆರೋಗ್ಯ ವ್ಯವಸ್ಥೆಯಲ್ಲಿ ವೈದ್ಯರಷ್ಟೇ ಮಹತ್ವದ ಪಾತ್ರವನ್ನು ನರ್ಸ್‌ಗಳೂ ನಿರ್ವಹಿಸುತ್ತಿದ್ದಾರೆ. ರೋಗಿಗಳ ಆರೋಗ್ಯ ರಕ್ಷಣೆಯ ಜೊತೆಗೆ ಅವರ ಮನೋಬಲಕ್ಕೆ ಚೈತನ್ಯ ತುಂಬುತ್ತಾರೆ. ಆದರೆ, ಅವರು ಎದುರಿಸುತ್ತಿರುವ ಸವಾಲುಗಳು ಒಂದೆರಡಲ್ಲ. ಕಡಿಮೆ ವೇತನದೊಂದಿಗೆ, ದೈಹಿಕ ಹಾಗೂ ಮಾನಸಿಕ ಒತ್ತಡಕ್ಕೆ ಸಿಲುಕುತ್ತಾರೆ. ಕೆಲವೊಮ್ಮೆ ರೋಗಿಗಳ ಸಂಬಂಧಿಕರಿಂದ ಹಲ್ಲೆಗೂ ತುತ್ತಾಗುತ್ತಿದ್ದಾರೆ. ಅವರ ಪರಿಶ್ರಮ, ತ್ಯಾಗವನ್ನು ಸಮಾಜ ಗೌರವಿಸಿದಾಗಷ್ಟೆ ಆರೋಗ್ಯ ವ್ಯವಸ್ಥೆಯು ಮತ್ತಷ್ಟು ಸದೃಢವಾಗುತ್ತದೆ. ಪ್ರತಿ ವರ್ಷದ ಮೇ 12ರಂದು 'ಫ್ಲಾರೆನ್ಸ್ ನೈಟಿಂಗೇಲ್' ಅವರ ಜನ್ಮದಿನವನ್ನು 'ವಿಶ್ವ ದಾದಿಯರ ದಿನ'ವಾಗಿ ಆಚರಿಸಲಾಗುತ್ತದೆ. ಇದು ದಾದಿಯರನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳಬೇಕಾದ ದಿನ.

ಅಭಿಷೇಕ್ ಚವ್ಹಾಣ, ವಿಜಯಪುರ

ಶಿಸ್ತಿನ ಇಲಾಖೆಯಲ್ಲಿ ಅಶಿಸ್ತಿನ ತಾಂಡವ

ಬಾಗಲಕೋಟೆ ಜಿಲ್ಲೆಯ ಹಳ್ಳಿಯಿಂದ ಧಾರವಾಡಕ್ಕೆ ಕಾಲೇಜು ವಿದ್ಯಾಭ್ಯಾಸಕ್ಕೆ ಬಂದಿದ್ದ ಆದಿತ್ಯ ಮ್ಯಾಗೇರಿ ಎಂಬ ವಿದ್ಯಾರ್ಥಿಯನ್ನು ಮಾದಕವಸ್ತು ವ್ಯಸನಿಗಳ ಗುಂಪಿನಲ್ಲಿದ್ದ ಎಂಬ ಶಂಕೆಯ ಮೇಲೆ ಪೊಲೀಸರು ವಶಕ್ಕೆ ತೆಗೆದುಕೊಂಡರು. ವೈದ್ಯಕೀಯ ಪರೀಕ್ಷೆಯಲ್ಲಿ ಆತ ಮಾದಕವಸ್ತು ಸೇವನೆ ಮಾಡಿಲ್ಲವೆಂದು ಸಾಬೀತಾಯಿತು. ಆತ ಅಮಾಯಕನೆಂದು ತಿಳಿದ ಮೇಲೂ ಹಣಕ್ಕಾಗಿ ಕಿರುಕುಳ ನೀಡಿದ್ದರಿಂದ ಆತ್ಮಹತ್ಯೆ ಮಾಡಿಕೊಂಡ. ಈ ಪ್ರಕರಣ ಸಂಬಂಧ ಪೊಲೀಸರು ಅಮಾನತುಗೊಂಡಿದ್ದಾರೆ. ಕೆಲವು ಅಧಿಕಾರಿಗಳು ಮಾಡುವ ಇಂತಹ ಕೃತ್ಯಗಳು ಪೊಲೀಸ್ ಇಲಾಖೆಯ ಗೌರವಕ್ಕೆ ಮಸಿ ಬಳಿಯುತ್ತವೆ. ಜನಸಾಮಾನ್ಯರು ನಂಬಿಕೆ, ಭರವಸೆ ಕಳೆದುಕೊಳ್ಳುತ್ತಾರೆ. ಶಿಸ್ತಿಗೆ ಹೆಸರಾದ ಇಲಾಖೆಯಲ್ಲಿ ಇತ್ತೀಚೆಗೆ ಅಶಿಸ್ತು ತಾಂಡವವಾಡುತ್ತಿರುವುದು ಗುಟ್ಟೇನಲ್ಲ. ಠಾಣೆಗಳಲ್ಲಿ ನಡೆಯುವ ಕುಕೃತ್ಯಗಳಿಗೆ ಕಡಿವಾಣ ಹಾಕಲು ರಾಜ್ಯ ಪೊಲೀಸ್ ಮಹಾನಿರ್ದೇಶಕರು ಮುಂದಾಗುವರೆ?

ಉದಯ ಮ. ಯಂಡಿಗೇರಿ, ಧಾರವಾಡ

ಶ್ರದ್ಧಾಂಜಲಿ

ಸಜ್ಜನ ರಾಜಕಾರಣಿ
ಧೀಮಂತ
ನಮ್ಮ ಹೆಮ್ಮೆಯ
ಸುಧಾಕರರು
ದಿವಂಗತ,
ಜೈನ ಸಮಾಜದ
ರಾಜಕೀಯಶಕ್ತಿ
ಅಸ್ತಂಗತ.
ಎಲ್ಲ ಸಮಾಜದ
ಗೌರವಗಳಿಸಿದ್ದರು
ಸಾರ್ಥಕ ಬಾಳು
ಬಾಳಿದರು!
ಧನ್ಯರು!!

ಪ್ರೊ. ಹಂಪನಾ, ಬೆಂಗಳೂರು

ಆರ್‌ಟಿಇ: ಹತ್ತನೇ ತರಗತಿವರೆಗೂ ವಿಸ್ತರಿಸಿ

ಆರ್‌ಟಿಇ ಅಡಿ ಆಯ್ಕೆ ಆಗುವ ವಿದ್ಯಾರ್ಥಿಗಳಿಗೆ ಖಾಸಗಿ ಶಾಲೆಗಳಲ್ಲಿ ಎಲ್‌ಕೆಜಿಯಿಂದ ಎಂಟನೇ ತರಗತಿವರೆಗೆ ಉಚಿತ ಶಿಕ್ಷಣ ದೊರೆಯುತ್ತಿದೆ. ಪೋಷಕರು ಯಾವುದೇ ಶುಲ್ಕ ಪಾವತಿಸುವುದಿಲ್ಲ. ಸರ್ಕಾರವೇ ಈ ವೆಚ್ಚ ಭರಿಸುತ್ತದೆ. ಆದರೆ, 9 ಮತ್ತು 10ನೇ ತರಗತಿಗೆ ಶುಲ್ಕ ಪಾವತಿಸಲು ಬಹಳಷ್ಟು ಪೋಷಕರಿಗೆ ಕಷ್ಟವಾಗುತ್ತಿದೆ. 10ನೇ ತರಗತಿವರೆಗೂ ಆರ್‌ಟಿಇ ಅಡಿ ಪ್ರವೇಶಾತಿ ಪಡೆದ ಮಕ್ಕಳು ಅದೇ ಶಾಲೆಯಲ್ಲಿ ಶಿಕ್ಷಣ ಮುಂದುವರಿಸಿದರೆ ಅವರ ವಿದ್ಯಾಭ್ಯಾಸಕ್ಕೆ ಅನುಕೂಲ ಆಗಲಿದೆ. ಈ ಬಗ್ಗೆ ಸರ್ಕಾರ ಉದಾರವಾಗಿ ವರ್ತಿಸಿ, ಅರ್ಹ ವಿದ್ಯಾರ್ಥಿಗಳಿಗೆ ನೆರವು ನೀಡಬೇಕಿದೆ.

ನಳಿನವತಿ, ಹೊಸಕೋಟೆ

ಮಕ್ಕಳಿಗೆ ಪರಿಸರದ ಭಾಷೆಯ ಕಲಿಕೆ ಅಗತ್ಯ

'ದ್ವಿಭಾಷಾನೀತಿ: ದಾರಿ-ಜಾರಿ' ಲೇಖನದಲ್ಲಿ (ಲೇ: ಬರಗೂರು ರಾಮಚಂದ್ರಪ್ಪ, ಪ್ರ.ವಾ., ಮೇ 11) ಶಾಲಾ ಶಿಕ್ಷಣದ ಬಿಕ್ಕಟ್ಟಿಗೆ ಸೂಚಿಸಿರುವ ಪರಿಹಾರೋಪಾಯಗಳು ಸ್ವಾಗತಾರ್ಹ. ಭಾಷಾ ಅಲ್ಪಸಂಖ್ಯಾತರು ತಾವು ಎಲ್ಲಿ ವಾಸವಾಗಿದ್ದಾರೋ ಅಲ್ಲಿನ ರಾಜ್ಯ ಭಾಷೆ ಅಥವಾ ಪರಿಸರ ಭಾಷೆ ಕಲಿಯಬೇಕಿದೆ. ಹಾಗೆ ಕಲಿತಾಗಷ್ಟೆ ಸಹಬಾಳ್ವೆ ಸಾಧ್ಯ. ಸರ್ಕಾರದ ಆಡಳಿತ ಮತ್ತು ಸಾಮಾಜಿಕ ಸಾಮರಸ್ಯಕ್ಕೆ ಆಯಾ ರಾಜ್ಯಗಳ ರಾಜ್ಯ ಭಾಷೆ ಅಥವಾ ಪರಿಸರದ ಭಾಷೆಯ ಕಲಿಕೆಯನ್ನು ಕಡ್ಡಾಯಗೊಳಿಸಬೇಕಿದೆ. ಚಿಕ್ಕ ಮಕ್ಕಳ ಶಿಕ್ಷಣ ಸಾರ್ಥಕವಾಗಲು ರಾಜ್ಯ ಭಾಷೆಯಲ್ಲಿ ಶಿಕ್ಷಣ ನೀಡಬೇಕಿದೆ. ಅರ್ಥವಾಗದ ಇಂಗ್ಲಿಷ್ ಮಾಧ್ಯಮದ ಶಿಕ್ಷಣ ನೀಡಿ ಅವರನ್ನು ಗೋಳು ಹೊಯ್ದುಕೊಳ್ಳುವ ಬದಲು ಅವರಿಗೆ ಅರ್ಥವಾಗುವ ಭಾಷೆಯಲ್ಲಿ ಶಿಕ್ಷಣ ನೀಡುವುದು ಉತ್ತಮ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

ಕೆಂಪು ದೀಪ ಬಳಕೆ: ಆದೇಶ ಉಲ್ಲಂಘನೆ

2013ರ ಸುಪ್ರೀಂ ಕೋರ್ಟ್ ತೀರ್ಪಿನ ಅನ್ವಯ ಸಾಂವಿಧಾನಿಕ ಹುದ್ದೆಯಲ್ಲಿ ಇರುವವರನ್ನು ಹೊರತುಪಡಿಸಿ ರಾಜಕಾರಣಿಗಳು ಮತ್ತು ಅಧಿಕಾರಿಗಳು ತಮ್ಮ ವಾಹನಗಳ ಮೇಲೆ 'ಕೆಂಪು ದೀಪ' ಬಳಸುವುದನ್ನು ನಿಷೇಧಿಸಲಾಗಿದೆ. ವಿವಿಐಪಿ ಸಂಸ್ಕೃತಿ ಕೊನೆಗೊಳಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಆದರೆ, ಇತ್ತೀಚೆಗೆ ರಾಜಕಾರಣಿಗಳು ಮತ್ತು ಅವರ ಬೆಂಬಲಿಗರು ಈ ನಿಷೇಧ ತಪ್ಪಿಸಲು ಹೊಸ ದಾರಿ ಕಂಡುಕೊಂಡಿದ್ದಾರೆ.

ಕಾರಿನ ಮೇಲ್ಭಾಗದಲ್ಲಿ ಗೂಟದ ದೀಪ ಅಳವಡಿಸುವ ಬದಲಾಗಿ ಕಾರಿನ ಮುಂಭಾಗದ ಬ್ಯಾನೆಟ್ ಅಥವಾ ಗ್ರಿಲ್‌ಗಳ ಒಳಗೆ ಅತಿ ಪ್ರಖರದ ಕೆಂಪು ಮತ್ತು ನೀಲಿ ಬಣ್ಣದ ಎಲ್‌ಇಡಿ ದೀಪ ಅಳವಡಿಸುತ್ತಿದ್ದಾರೆ. ಇದು ದೂರದಿಂದ ನೋಡಿದಾಗ ಪೊಲೀಸ್ ವಾಹನದಂತೆ ಭಾಸವಾಗುತ್ತದೆ. ರಸ್ತೆಯಲ್ಲಿ ತಮಗೆ ವಿಶೇಷ ಆದ್ಯತೆ ಸಿಗಲಿ ಎಂಬ ಹಪಹಪಿ ಇದರ ಹಿಂದಿದೆ. ಈ ರೀತಿ ಮಾಡುವುದು ಸುಪ್ರೀಂ ಕೋರ್ಟ್‌ನ ಆದೇಶಕ್ಕೆ ವಿರುದ್ಧವಾದುದು ಹಾಗೂ ಮೋಟಾರು ವಾಹನ ಕಾಯ್ದೆಯ ಸ್ಪಷ್ಟ ಉಲ್ಲಂಘನೆ. ಪೊಲೀಸ್ ಇಲಾಖೆಯು ಇಂತಹ ವಾಹನಗಳನ್ನು ಪತ್ತೆಹಚ್ಚಿ ಕಠಿಣ ಕಾನೂನು ಕ್ರಮ ಜರುಗಿಸಬೇಕಿದೆ.

ಸಚಿನ್ ವಿ., ಚನ್ನಪಟ್ಟಣ

ಚುರುಮುರಿ



ವಿಶಲ್ ಪೋಡು

• ಡಿ.ಎಸ್. ಲಿಂಗರಾಜು

'ಅಲ್ಲ ಕಲಾ' ನಾನೇನೂ ಸೋತಿಲ್ಲ. ನನ್ನ ಸೋಲಿಸ್ಯವರೆ ಅಷ್ಟೀಯೆ. ಅದುಕ್ಕೇ ನಾನು ಬಿಲ್ಕುಲ್ ರಾಜೀನಾಮೆ ಕೊಡಕ್ಕಿಲ್ಲ ಅಂದ್ರೆ ಕೊಡಕ್ಕಿಲ್ಲ' ಅಂತ ಪವರ್ ಮೆಸೇಜ್ ಬುಡ್ತಾ ಕೂತಿತ್ತಲ್ಲ ಬಂಗಾಳಕ್ಕ ಏನಾತ್ರೋ?' ಅಂತಂದ್ರು ತುರೇಮಣೆ.

'ಬಂಗಾಳಕ್ಕನಿಗೆ ಎಲ್ಲಾರೂ ಹೇಳಾತಂತೆ. 'ಕೂತವನದ್ದೇ ಕುರ್ಚಿ ಅಂತ ಡಿಕೇಶಿಯಣ್ಣ ಹೇಳ್ಯದೆ' ಅಂತ ಅಕ್ಕ ರಂಪ ಮಾಡ್ತಾ ಅದಂತೆ ಕಯಾ' ಅಂದ ತಿಪ್ಪಣ್ಣ.

'ಇದೇನು ಕಂಡೆ. ಕೇರಳದ ಗುಮ್ಮ ಯಾರು ಅಂತ ಇನ್ನೂ ತೀರ್ಮಾನಾಗಿಲ್ವಂತೆ. 'ಏನೂ ತೀರ್ಮಾನ ತಗಳದೇ ಇರೋದೇ ನಮ್ಮ ತೀರ್ಮಾನ' ಅಂದದಂತೆ ರಾವುಲಣ್ಣ' ನಾನು ಹೇಳಿದೆ.

'ತಮಿಳಣ್ಣ ಬಹುಮತ ಬೇಕಾಗ್ಯದೆ ಅಂತ ಸುಮಾರು ಶಾಸಕ ಬಾಂಬುಗಳನ್ನ ಮಗ್ಗುಲಗೇ ಮಡಿಕಂದವ್ನಲ್ಲ. ಅವೆಲ್ಲಾ ಯಾವಾಗ ಸಿಡೀತವೋ ಕಾಣೆ. ಡಿಎಂಕೆ, ಎಐಎಡಿಎಂಕೆ ಲ್ಯಾಂಡುಮೈನುಗಳ ಭಯ ಬ್ಯಾರೆ ಅದೆ ಕಯ್ಯಾ ತಮಿಳಣ್ಣನಿಗೆ' ಯಂಟಪ್ಪಣ್ಣ ಯೋಚನೆಗೆ ಬಿತ್ತು.

'ತಮಿಳಣ್ಣನೂ ಎಲ್ಲಾ ಸಮಸ್ಯೇನೂ ತೀರಿಸಕ್ಕೆ ಡ್ಯೂಪ್ ಮಡಿಕತ್ತನೇನೋ' ತಿಪ್ಪಣ್ಣ ಜೋಕು ಮಾಡಿದ.

'ಸುಮ್ಮಗಿರ್ರೋ ಪಾಪ, ಆಯಪ್ಪನಿಗೆ ಈಗ ಅಧಿಕಾರದ ಮುಂಗೋಳಿ ಕೂಗ್ತಾ ಅದೆ. ಮೋದಿ ಮಾರಾಜರ ಥರಾ ಬುದುವಂತರನ್ನ ಕ್ಯಾಬಿನೆಟ್ಟಿಗೆ ತಂಗಂಡವ್ನಂತೆ' ಸುದ್ದಿ ಸ್ಫೋಟಿಸಿದೆ.

'ಮಾಡಿಕ್ಯಲಿ ಬುಡ್ರೋ. ತಮಿಳಣ್ಣನೂ ಸಿದ್ದಣ್ಣನ ಥರ ಗ್ಯಾರಂಟಿ ಕೊಡ್ತೀನಿ ಅಂತ ಹೇಳ್ಯವುನಲ್ಲ, ಅದಕ್ಕೆಲ್ಲಾ ಕಾಸು ಎಲ್ಲಿಂದ ತಂದಾನು?' ತುರೇಮಣೆ ವಿಶ್ಲೇಷಣೆ ಮಾಡಿದರು.

'ಅಲ್ಲೂವೆ ಹತ್ತು ಲಕ್ಷ ಕೋಟಿ ಸಾಲ ಅದುಗಿಕ್ಯಂದು ಕೂತದೆ. ಅದುನ್ನೆಲ್ಲಾ ತೀರಿಸಬೇಕು. ಯಂಗೂ ಕರ್ನಾಟಕಕ್ಕಿಂತಾ ತಮಿಳುನಾಡು ಭ್ರಷ್ಟಾಚಾರದೇಲಿ ಮೇಲದಂತೆ. ಯಾವ್ಯಾವುದಕ್ಕೆ ಎಷ್ಟೆಷ್ಟು ಟ್ಯಾಕ್ಸು ಜಡಿದು ಗ್ಯಾರಂಟಿಗೆ ಕಾಸು ರೆಡಿ ಮಾಡಿಕ್ಯಬಕು ಅಂತ ಸಿದ್ದಣ್ಣ-ತಮಿಳಣ್ಣ ಇಬ್ಬರೂ ಸೇರಿ ಸಿದ್ಧಸೂತ್ರ ತಯಾರು ಮಾಡಿಕ್ಯತ್ತರೆ ಬುಡಿ' ಅಂತ ನಾನು ವಿಶಲ್ ಪೋಡಿದೆ.

ಸಂಗತ


ನಮ್ಮೆಲ್ಲರ ಕೈಗಳಲ್ಲಿ ಸ್ಕಿನ್ನರ್‌ನ ಇಲಿಪೆಟ್ಟಿಗೆ!

ಸಾಮಾಜಿಕ ಮಾಧ್ಯಮಗಳು ನಮ್ಮ ವರ್ತನೆಗಳನ್ನು ರೂಪಿಸಲು, ನಿಯಂತ್ರಿಸಲು ಪ್ರಯತ್ನಿಸುತ್ತಿವೆ. ಅವುಗಳ ವ್ಯಸನದಿಂದ ಪಾರಾಗುವುದು ಹೇಗೆನ್ನುವುದು ಯಕ್ಷಪ್ರಶ್ನೆ.

• ನಡಹಳ್ಳಿ ವಸಂತ್

1938ರಲ್ಲಿ ಬಿ.ಎಫ್. ಸ್ಕಿನ್ನರ್ ಎನ್ನುವ ಮನಃಶಾಸ್ತ್ರಜ್ಞ ಒಂದು ಪ್ರಯೋಗ ಮಾಡಿದ. ಹ್ಯಾಂಡಲ್ ಒಂದನ್ನು ಒತ್ತಿದರೆ ಆಹಾರ ಹೊರಬರುವಂತಹ ಪೆಟ್ಟಿಗೆಯೊಂದನ್ನು ಸಿದ್ಧಪಡಿಸಿ, ಅದರಲ್ಲಿ ಇಲಿಯೊಂದನ್ನು ಕೂಡಿಹಾಕಿದ. ಮೊದಮೊದಲು ಪ್ರತಿಸಾರಿ ಹ್ಯಾಂಡಲ್ ಅನ್ನು ಒತ್ತಿದಾಗ ಇಲಿಗೆ ಆಹಾರ ಸಿಗುತ್ತಿತ್ತು. ಹಾಗಾಗಿ, ಅದು ಆಹಾರದ ಅಗತ್ಯವಿದ್ದಾಗ ಮಾತ್ರ ಹ್ಯಾಂಡಲ್ ಒತ್ತುತ್ತಿತ್ತು. ಸ್ಕಿನ್ನರ್ ಇದನ್ನು ಬದಲಾಯಿಸಿ ಕೆಲವೊಮ್ಮೆ ಎರಡು, ನಾಲ್ಕು, ಎಂಟು, ಹೀಗೆ ಎಷ್ಟು ಸಾರಿ ಒತ್ತಿದರೆ ಆಹಾರ ಸಿಗುತ್ತದೆ ಎನ್ನುವುದು ಗೊತ್ತಾಗದಂತಹ ಅನಿಶ್ಚಿತ ಸಾಧ್ಯತೆಯನ್ನು ರೂಪಿಸಿದ. ಇದರಿಂದ ಇಲಿ ನಿರಂತರವಾಗಿ ಹ್ಯಾಂಡಲ್ ಒತ್ತುತ್ತಲೇ ಇರುತ್ತಿತ್ತು. ಈ ಪ್ರವೃತ್ತಿಯನ್ನು ಸ್ಕಿನ್ನರ್ 'Variable Ratio Reinforcing Schedule' ಎಂದು ಕರೆದ. ಇದೇಕೆ ಹೀಗಾಗುತ್ತದೆ ಎಂದು ಅವನಿಗೆ ಆಗ ಅರ್ಥ ಆಗದಿದ್ದರೂ, ಅವನ ಪ್ರಯೋಗ ಮುಂದೆ 'ವರ್ತನಾ ಮನಃಶಾಸ್ತ್ರ'ದ ಅಧ್ಯಯನಕ್ಕೆ ಬಹಳ ಸಹಾಯ ಮಾಡಿತು.

ಸ್ಕಿನ್ನರ್‌ನ ಮಾದರಿಯನ್ನು ಬಳಸಿ ಇವತ್ತು ಸಾಮಾಜಿಕ ಮಾಧ್ಯಮ ಕಂಪನಿಗಳು ನಮ್ಮ ಮಿದುಳನ್ನು ಪೆಟ್ಟಿಗೆಯಲ್ಲಿ ಬಂಧಿಸಲಾಗಿರುವ ಇಲಿಗಳಂತೆ ಬದಲಾಯಿಸಿವೆ. ನಮ್ಮ ಕೈಯಲ್ಲಿರುವ ಮೊಬೈಲ್‌ಗಳು ತಾಂತ್ರಿಕವಾಗಿ ಮುಂದುವರಿದ, ಚಂದವಾಗಿ ರೂಪುಗೊಂಡ, ಎಲ್ಲೆಂದರಲ್ಲಿ ಬಳಸಲು ಸಾಧ್ಯವಿರುವ ಬಹೂಪಯೋಗಿ ಇಲಿಪೆಟ್ಟಿಗೆಗಳಂತಿವೆ.



ನೀವು ಯಾವುದಾದರೂ ಸಾಮಾಜಿಕ ಮಾಧ್ಯಮದಲ್ಲಿ ಒಂದು ಪೋಸ್ಟ್ ಅಥವಾ ವಿಡಿಯೊ ಹಾಕುತ್ತೀರಿ ಎಂದುಕೊಳ್ಳಿ. ಕೆಲವೊಮ್ಮೆ ಅದಕ್ಕೆ ಲೈಕ್‌ಗಳು ಹೆಚ್ಚಾಗಿ ಬರಬಹುದು. ಮತ್ತೆ ಹಲವಾರು ಬಾರಿ ನಿರೀಕ್ಷೆಯಷ್ಟು ಲೈಕ್‌ಗಳು ಸಿಗದೆ ನಿಮಗೆ ನಿರಾಸೆ ಆಗಿರಬಹುದು. ಆದರೆ, ಸಾಮಾಜಿಕ ಮಾಧ್ಯಮ ಬಳಸುವ ಎಲ್ಲರಿಗೂ ಆಗುವ ಒಂದು ಸಾಮಾನ್ಯ ಅನುಭವವೆಂದರೆ, ಯಾವುದಾದರೂ ಒಂದು ಪೋಸ್ಟ್‌ಗೆ ನಿರೀಕ್ಷೆಗೆ ಮೀರಿ ಸಾವಿರಾರು ಅಥವಾ ಲಕ್ಷಗಟ್ಟಲೆ ಲೈಕ್ಸ್-ಕಾಮೆಂಟ್ಸ್ ಬರುವಂತಹದ್ದು. ವಿಡಿಯೊ ಆಗಿದ್ದರೆ ಅತಿಹೆಚ್ಚು ಜನರು ನೋಡಿರುತ್ತಾರೆ. ಹೀಗೆ ಒಮ್ಮೆ ಆದ ಅನುಭವ ಅದರ ಪುನರಾವರ್ತನೆಯ ನಿರೀಕ್ಷೆಯಲ್ಲಿ ನಿರಂತರವಾಗಿ ಹೊಸ ಹೊಸ ಪೋಸ್ಟ್‌ಗಳನ್ನು ಅಥವಾ ವಿಡಿಯೊಗಳನ್ನು ಹಾಕುತ್ತಲೇ ಇರಲು ಪ್ರಚೋದನೆಯಾಗುತ್ತದೆ. ಕೆಲವು ಪೋಸ್ಟ್‌ಗಳಿಗೆ ಇದ್ದಕ್ಕಿದ್ದಂತೆ ಸಿಗುವ ಅತಿಹೆಚ್ಚಿನ ಲೈಕ್‌ಗಳು ನಿಜವಾದ ಪ್ರತಿಕ್ರಿಯೆಗಳೇ ಅಥವಾ ಸಾಮಾಜಿಕ ಮಾಧ್ಯಮಗಳ ವಿನ್ಯಾಸಕಾರರು ಅದನ್ನು ಬಳಸುತ್ತಲೇ ಇರುವಂತೆ ಎಲ್ಲರನ್ನೂ ಪ್ರಚೋದಿಸಲು ಸೃಷ್ಟಿಸಿರುವ ಅಲ್ಗಾರಿದಮ್‌ಗಳೆ? ಇದು ಹೊರಗಿನವರಿಗೆ ತಿಳಿಯಲಾರದು. ಆದರೆ, ಅಲ್ಗಾರಿದಮ್‌ಗಳ ಮೂಲಕ ಲೈಕ್ಸ್-ಷೇರ್ ಮತ್ತು ಕಾಮೆಂಟ್ಸ್‌ಗಳ ಅಂಕಿಅಂಶಗಳನ್ನು ತಿರುಚಬಹುದು ಎನ್ನುವುದು ಈಗ ಗುಟ್ಟಾಗಿಯೇನೂ ಉಳಿದಿಲ್ಲ.

ಸ್ಕಿನ್ನರ್ ಗುರ್ತಿಸಿದ್ದ ಪ್ರವೃತ್ತಿಯನ್ನು ಸಾಮಾಜಿಕ ಮಾಧ್ಯಮಗಳು ಬಹಳ ನಾಜೂಕಾಗಿ ನಮ್ಮೊಳಗೆ ಅವುಗಳ ವ್ಯಸನವನ್ನು ಹುಟ್ಟುಹಾಕಲು ಬಳಸುತ್ತಿವೆ ಎನ್ನುವುದರ ಕುರಿತು ಸಾಕಷ್ಟು ತಜ್ಞರು ಎಚ್ಚರಿಸುತ್ತಿದ್ದಾರೆ. ನಮ್ಮೆಲ್ಲರ ವ್ಯಸನವೇ ಅವರ ಖಜಾನೆಗಳನ್ನು ಭರ್ತಿ ಮಾಡುತ್ತಿದೆ ಎನ್ನುವುದಕ್ಕೆ ಫೇಸ್‌ಬುಕ್, ಇನ್‌ಸ್ಟಾಗ್ರಾಂ ಮತ್ತು ವಾಟ್ಸ್‌ಆ್ಯಪ್‌ಗಳ ಒಡೆತನ ಹೊಂದಿರುವ ಮೆಟಾ ಕಂಪನಿಯ ನಿರಂತರ ಏರುತ್ತಿರುವ ಲಾಭವೇ ದಾಖಲೆ ಒದಗಿಸುತ್ತದೆ.

ತನ್ನ ಪ್ರಯೋಗದ ಫಲಿತಾಂಶಗಳನ್ನು ಬಳಸಿ ಮಾನವರಲ್ಲಿ ವ್ಯಸನವನ್ನು ಹುಟ್ಟಿಸಬಹುದು ಎನ್ನುವುದು ಸ್ಕಿನ್ನರ್‌ಗೆ ಅರ್ಥವಾಗದಿದ್ದರೂ, ಇವತ್ತಿನ ನರವಿಜ್ಞಾನದ ಸಂಶೋಧನೆಗಳು ಅದಕ್ಕೆ ಉತ್ತರ ಕಂಡುಕೊಂಡಿವೆ. ಡೊಪೊಮೈನ್ ಎನ್ನುವ ನರರಾಸಾಯನಿಕ ನಮಗೆ ಬದುಕನ್ನು ಆಸಕ್ತಿದಾಯಕ ಆಗಿಸಲು ಅತ್ಯಗತ್ಯ. ಯಾವುದಾದರೂ ಅನುಭವದಿಂದ ಮಿದುಳಿನಲ್ಲಿ ಡೊಪೊಮೈನ್ ಉತ್ಪಾದನೆಯಾದಾಗ ನಮಗೆ ಸಂತೋಷ, ಸಾರ್ಥಕತೆಯ ಭಾವ ಮೂಡುತ್ತದೆ ಎಂದು ಈವರೆಗೆ ನಂಬಲಾಗಿತ್ತು. ಆದರೆ, ಇದು ಅರ್ಧಸತ್ಯ ಮಾತ್ರ ಎಂದು ನಂತರದ ಸಂಶೋಧನೆಗಳಿಂದ ತಿಳಿದುಬಂದಿದೆ. ಕ್ರಿಯೆಗೆ ತಕ್ಕ ಪ್ರತಿಫಲ ದೊರೆತಾಗ ಡೊಪೊಮೈನ್ ಉತ್ಪಾದನೆ ಆಗುವುದಲ್ಲದೆ, ಪ್ರತಿಫಲದ ನಿರೀಕ್ಷೆ ಕೂಡ ಈ ನರ ರಾಸಾಯನಿಕಗಳ ಮಟ್ಟವನ್ನು ಮಿದುಳಿನಲ್ಲಿ ಹೆಚ್ಚಿಸುತ್ತದೆ ಎನ್ನುವುದು ಈಗ ಸ್ಪಷ್ಟವಾಗಿದೆ. ಜೂಜಾಡುವವರಲ್ಲಿ ಈ ಪ್ರವೃತ್ತಿ ನಿಚ್ಚಳವಾಗಿ ಕಂಡುಬರುತ್ತದೆ. ಎಷ್ಟುಬಾರಿ ಸೋತರೂ ಮುಂದಿನ ಸಾರಿ ಗೆಲ್ಲುವ ನಿರೀಕ್ಷೆ ಅವರನ್ನು ಜೂಜಿನೆಡೆ ಮತ್ತೆ ಮತ್ತೆ ಸೆಳೆಯುತ್ತದೆ. ಅಂದರೆ, ಸುಖದ ನಿರೀಕ್ಷೆಯು ಕೂಡ ಮಿದುಳಿನಲ್ಲಿ ಡೊಪೊಮೈನ್ ಉತ್ಪಾದನೆಯನ್ನು ಹೆಚ್ಚು ಮಾಡುತ್ತದೆ. ಹೀಗೆ ಜೂಜನ್ನು ಆಡುತ್ತಿರುವವರೆಗೆ ಡೊಪೊಮೈನ್‌ನ ಕೊರತೆ ಕಾಡುವುದಿಲ್ಲ. ಡೊಪೊಮೈನ್ ಸೃಜಿಸಬಲ್ಲ ಕ್ರಿಯೆಗಳ ಕಡೆಗಿನ ನಿರಂತರವಾದ ಸೆಳೆತವೇ ವ್ಯಸನದ ಮೂಲವಾಗಿರುತ್ತದೆ.

ಸಾಮಾಜಿಕ ಮಾಧ್ಯಮಗಳ ಬಳಕೆಯೂ ಖಚಿತವಾಗಿ ಹೀಗೆಯೇ ಕೆಲಸ ಮಾಡುತ್ತದೆ. ಈ ಪೋಸ್ಟ್‌ಗೆ ಅಲ್ಲದಿದ್ದರೆ ಮುಂದಿನದಕ್ಕೆ ಅಥವಾ ಅದಕ್ಕೂ ಮುಂದಿನದಕ್ಕೆ ಲೈಕ್‌ಗಳು, ಕಾಮೆಂಟ್‌ಗಳು ಹೆಚ್ಚಬಹುದು, ಅಥವಾ ಅದನ್ನು ಹೆಚ್ಚು ಹೆಚ್ಚು ಜನರು ಹಂಚಿಕೊಳ್ಳಬಹುದು ಎನ್ನುವ ನಿರೀಕ್ಷೆಯಿಂದಾಗಿ ಮತ್ತೆ ಮತ್ತೆ ಅದರಲ್ಲಿ ತೊಡಗಿಕೊಳ್ಳುತ್ತೇವೆ. ಜೊತೆಗೆ, ಅಲ್ಗಾರಿದಮ್‌ಗಳ ಮೂಲಕ ಆಗಾಗ ಸೂಕ್ತ ಸಂದೇಶಗಳನ್ನು ಕಳಿಸಿ ನಮ್ಮನ್ನು ಅದರತ್ತ ಸೆಳೆಯಲಾಗುತ್ತದೆ. ಹೀಗೆ ನಮ್ಮ ಸಮಯ, ಕ್ರಿಯಾಶೀಲತೆಯನ್ನು ಕಳೆದುಕೊಳ್ಳುತ್ತಲೇ ಕಾರ್ಪೊರೇಟ್ ಖಜಾನೆಗಳನ್ನು ತುಂಬಿಸುತ್ತಿರುತ್ತೇವೆ.

ಸ್ಕಿನ್ನರ್‌ನ ಇಲಿಪೆಟ್ಟಿಗೆಯಿಂದ ನಾವೆಲ್ಲರೂ ಬಿಡಿಸಿಕೊಂಡು ಹೊರಬರುವುದು ಹೇಗೆ ಎನ್ನುವುದು ಮಾತ್ರ ಯಕ್ಷಪ್ರಶ್ನೆಯಾಗಿಯೇ ಉಳಿದಿದೆ. ಹೊರಬರಬೇಕು ಎನ್ನುವ ಯೋಚನೆಯಿಂದಲೂ ಅನೇಕರು ದೂರ ಉಳಿದಿದ್ದಾರೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಜಲಾಶಯ: ಕುಸಿದ ನೀರಿನ ಮಟ್ಟ

ಕರ್ನಾಟಕವೂ ಸೇರಿದಂತೆ ಭಾರತದ ಬಹುತೇಕ ರಾಜ್ಯಗಳಲ್ಲಿ ತಾಪಮಾನ ಏರಿಕೆಯು ಜನರನ್ನು ಹೈರಾಣಾಗಿಸಿದೆ. ಇದಕ್ಕೆ ತಕ್ಕಂತೆ ದೇಶದ ಪ್ರಮುಖ ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿಯುತ್ತಾ ಸಾಗುತ್ತಿದೆ. ಕೇಂದ್ರ ಜಲ ಆಯೋಗದ ಮಾಹಿತಿಯ ಪ್ರಕಾರ, ಕರ್ನಾಟಕದಲ್ಲಿ ಜಲಾಶಯಗಳ ನೀರಿನ ಮಟ್ಟವು ಸಾಮಾನ್ಯ ಮಟ್ಟಕ್ಕಿಂತ ಹೆಚ್ಚಾಗಿದ್ದರೂ, ಕಳೆದ ವರ್ಷಕ್ಕಿಂತ ಕಡಿಮೆ ಇದೆ. ತಮಿಳುನಾಡಿನ ಪ್ರಮುಖ ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿತ ಕಂಡಿದ್ದು, ಇದು ಕಾವೇರಿ ಕೊಳ್ಳದ ಮೇಲೆ ಹೆಚ್ಚು ಒತ್ತಡ ಹೇರಲಿದೆ

ಪ್ರಜಾವಾಣಿ ವಾರ್ತೆ

ದೇಶದ ಪ್ರಮುಖ ಜಲಾಶಯಗಳಲ್ಲಿ ನೀರಿನ ಪ್ರಮಾಣವು ದಿನೇ ದಿನೇ ಕುಸಿಯುತ್ತಿದೆ. ಗೋವಾ, ಕರ್ನಾಟಕ, ಕೇರಳ, ಮಧ್ಯಪ್ರದೇಶ, ತಮಿಳುನಾಡು, ತ್ರಿಪುರಾ ಮತ್ತು ಪಶ್ಚಿಮ ಬಂಗಾಳದ ಜಲಾಶಯಗಳಲ್ಲಿನ ನೀರಿನ ಮಟ್ಟವು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಕಡಿಮೆ ಇದೆ. ಕರ್ನಾಟಕದ ಪ್ರಮುಖ ಜಲಾಶಯಗಳಲ್ಲಿ ನೀರಿನ ಮಟ್ಟ ಕಳೆದ ವರ್ಷಕ್ಕಿಂತ ಕಡಿಮೆ ಇದೆ. ಕೇರಳ ಮತ್ತು ತಮಿಳುನಾಡುಗಳ ಜಲಾಶಯಗಳಲ್ಲಿ ನೀರಿನ ಸಂಗ್ರಹವು ಸಾಮಾನ್ಯ ಸಂಗ್ರಹ ಮಟ್ಟಕ್ಕಿಂತಲೂ (ನಾರ್ಮಲ್ ಸ್ಟೋರೇಜ್ ಲೆವೆಲ್) ಕಡಿಮೆ ಇದೆ.

ಕೇಂದ್ರ ಜಲ ಆಯೋಗವು (ಸಿಡಬ್ಲ್ಯುಸಿ) ದೇಶದ ವಿವಿಧ ಭಾಗಗಳಲ್ಲಿರುವ 166 ಪ್ರಮುಖ ಜಲಾಶಯಗಳ ಬಳಕೆಗೆ ಅವಕಾಶವಿರುವ ನೀರಿನ ಮಟ್ಟವನ್ನು ಮೇಲ್ವಿಚಾರಣೆ ಮಾಡುತ್ತದೆ ಮತ್ತು ನಿಗದಿತವಾಗಿ ಅದರ ಬಗ್ಗೆ ವರದಿ (ಬುಲೆಟಿನ್) ಬಿಡುಗಡೆ ಮಾಡುತ್ತದೆ. ಈ 166 ಜಲಾಶಯಗಳ ಬಳಕೆಗೆ ಅವಕಾಶ ಇರುವ ನೀರಿನ ಸಂಗ್ರಹ ಸಾಮರ್ಥ್ಯವು (ಲೈವ್ ಸ್ಟೋರೇಜ್) 183.565 ಶತಕೋಟಿ ಘನ ಮೀಟರ್ (ಬಿಲಿಯನ್ ಕ್ಯೂಬಿಕ್ ಮೀಟರ್– ಬಿಸಿಎಂ) ಆಗಿದೆ. ಇದು ದೇಶದಲ್ಲಿರುವ ಜಲಾಶಯಗಳ ಒಟ್ಟು ಸಾಮರ್ಥ್ಯದ (257.812 ಬಿಸಿಎಂ) ಪೈಕಿ ಶೇ 71.20 ಆಗಿದೆ. ಒಂದು ಬಿಸಿಎಂ ಎಂದರೆ, 35.31 ಟಿಎಂಸಿ ಅಡಿಗೆ ಸಮ.

ಸಿಡಬ್ಲ್ಯುಸಿ ಮೇಲ್ವಿಚಾರಣೆ ಮಾಡುವ 166ರ ಪೈಕಿ 20 ಜಲಾಶಯಗಳು ಜಲವಿದ್ಯುತ್ ಯೋಜನೆಗೆ ಸಂಬಂಧಿಸಿವೆ. ಅವುಗಳ ಒಟ್ಟು ನೀರಿನ ಪ್ರಮಾಣವು 35.299 ಬಿಸಿಎಂ. ಮೇ 7ರಂದು ಬಿಡುಗಡೆ ಆಗಿರುವ ವರದಿಯ ಪ್ರಕಾರ, ಈ ಜಲಾಶಯಗಳ ಒಟ್ಟಾರೆ ನೀರು ಸಂಗ್ರಹ ಪ್ರಮಾಣವು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ, ಉತ್ತಮವಾಗಿಯೇ ಇದೆ. 166 ಜಲಾಶಯಗಳಲ್ಲಿನ ಬಳಕೆಗೆ ಅವಕಾಶವಿರುವ ನೀರಿನ ಸಾಮರ್ಥ್ಯವು 66.83 ಬಿಸಿಎಂ ಆಗಿದ್ದು, ಅದು ಅವುಗಳ ಒಟ್ಟು ಸಾಮರ್ಥ್ಯದಲ್ಲಿ ಶೇ 36.41 ಆಗಿದೆ. ಏಪ್ರಿಲ್ 30ರಂದು ಈ ಮಟ್ಟವು ಶೇ 38.72ರಷ್ಟಿತ್ತು. ಏಪ್ರಿಲ್ 9ರ ವರದಿಯ ಪ್ರಕಾರ, ಈ ಮಟ್ಟವು ಶೇ 44.71ರಷ್ಟಿತ್ತು.

ಕಳೆದ ವರ್ಷದ ನೀರಿನ ಸಂಗ್ರಹಕ್ಕೆ ಹೋಲಿಸಿದರೆ, ಒಟ್ಟಾರೆ ನೀರಿನ ಸಂಗ್ರಹದಲ್ಲಿ ಈ ವರ್ಷ ಪರಿಸ್ಥಿತಿ ಉತ್ತಮವಾಗಿದೆ.

ಸಿಡಬ್ಲ್ಯುಸಿ ಪ್ರಕಾರ ಸಾಮಾನ್ಯ ಸಂಗ್ರಹ ಮಟ್ಟ ಎಂದರೆ, ನಿರ್ದಿಷ್ಟ ಅವಧಿಯಲ್ಲಿ ಜಲಾಶಯಗಳಲ್ಲಿ ಸಂಗ್ರಹವಾಗಿದ್ದ ನೀರಿನ 10 ವರ್ಷಗಳ ಸರಾಸರಿ ಮಟ್ಟ



ಹಾರಂಗಿ ಜಲಾಶಯದಲ್ಲಿ ನೀರಿನ ಸಂಗ್ರಹ ಕಡಿಮೆಯಾಗಿರುವುದು


ಆದರೆ, ದೇಶದ ಪೂರ್ವ, ಈಶಾನ್ಯ ಮತ್ತು ದಕ್ಷಿಣದ ರಾಜ್ಯಗಳಲ್ಲಿ ನೀರಿನ ಮಟ್ಟವು ಕಳವಳಕಾರಿಯಾಗಿದೆ. ಅಸ್ಸಾಂನಲ್ಲಿ ಅತ್ಯಂತ ಕೆಟ್ಟ ಪರಿಸ್ಥಿತಿ ಇದ್ದು, ಜಲಾಶಯಗಳ ಸಾಮಾನ್ಯ ಮಟ್ಟದ ಶೇ 47ಕ್ಕೆ ಕುಸಿದಿದೆ. ಪಶ್ಚಿಮ ಬಂಗಾಳದಲ್ಲಿ ಶೇ 57ರಷ್ಟು ನೀರಿನ ಸಂಗ್ರಹ ಕುಸಿದಿದೆ. ಈ ಎರಡು ರಾಜ್ಯಗಳ ಬಹುತೇಕ ಜಲಾಶಯಗಳಲ್ಲಿ ಶೇ 40ಕ್ಕಿಂತ ಕಡಿಮೆ ನೀರಿನ ಸಂಗ್ರಹ ಇದೆ. ಮಿಜೋರಾಂನಲ್ಲಿ ಶೇ 40ರಷ್ಟು ಕುಸಿತ ಉಂಟಾಗಿದೆ.

ದಕ್ಷಿಣ ರಾಜ್ಯಗಳಲ್ಲಿ ಒಟ್ಟಾರೆ ಸಹಜ ಮಟ್ಟಕ್ಕಿಂತ ಹೆಚ್ಚಿನ ಮಟ್ಟದಲ್ಲೇ ನೀರಿನ ಸಂಗ್ರಹ ಇದೆ. ಆದರೆ, ಕರ್ನಾಟಕ, ಕೇರಳ ಮತ್ತು ತಮಿಳುನಾಡುಗಳ ಜಲಾಶಯಗಳಲ್ಲಿ ಕಡಿಮೆ ನೀರಿನ ಸಂಗ್ರಹ ಇದೆ. ಕೇರಳದಲ್ಲಿನ ಸಿಡಬ್ಲ್ಯುಸಿ ಉಸ್ತುವಾರಿಯಲ್ಲಿರುವ ಆರು ಜಲಾಶಯಗಳ ನೀರಿನ ಮಟ್ಟವು ಸಾಮಾನ್ಯ ಮಟ್ಟಕ್ಕಿಂತ ಶೇ 14.06ರಷ್ಟು ಕಡಿಮೆ ಇದ್ದರೆ, ತಮಿಳುನಾಡಿನ 9 ಜಲಾಶಯಗಳ ನೀರಿನ ಮಟ್ಟವು ಸಾಮಾನ್ಯ ಮಟ್ಟಕ್ಕಿಂತ ಶೇ 4.44ರಷ್ಟು ಕಡಿಮೆ ಇದೆ. ಇದು ಕಾವೇರಿ ಕೊಳ್ಳದ ಮೇಲೆ ಹೆಚ್ಚು ಒತ್ತಡ ಸೃಷ್ಟಿಸುತ್ತದೆ. ಆಂಧ್ರ ಪ್ರದೇಶದ 6 ಜಲಾಶಯಗಳ ನೀರಿನ ಮಟ್ಟವು ಸಾಮಾನ್ಯ ಸಂಗ್ರಹ ಮಟ್ಟಕ್ಕಿಂತ ಶೇ 65.36ರಷ್ಟು ಹೆಚ್ಚಾಗಿದ್ದರೂ, ಹಿಂದಿನ ವರ್ಷದ ಸಂಗ್ರಹಕ್ಕಿಂತ ಕಡಿಮೆ ಇದೆ. ತೆಲಂಗಾಣದ 8 ಜಲಾಶಯಗಳ ನೀರಿನ ಮಟ್ಟವು ಸಾಮಾನ್ಯ ಮಟ್ಟಕ್ಕಿಂತ ಶೇ 20ರಷ್ಟು ಹೆಚ್ಚಾಗಿದ್ದರೂ, ಕಳೆದ ವರ್ಷಕ್ಕಿಂತ ಕಡಿಮೆ ಇದೆ.

ಜಲಾನಯನ ಪ್ರದೇಶಗಳಲ್ಲಿಯೂ ಬಿಕ್ಕಟ್ಟು: ದೇಶದ ಮೂರು ನದಿ ಜಲಾನಯನ ಪ್ರದೇಶಗಳಲ್ಲಿ ನೀರಿನ ಬಿಕ್ಕಟ್ಟು ಕಾಣಿಸಿಕೊಳ್ಳುವ ಸೂಚನೆಗಳಿವೆ. ಏಪ್ರಿಲ್ ಆರಂಭದಲ್ಲಿ ಗಂಗಾ (ಶೇ 53.8), ಗೋದಾವರಿ (ಶೇ 47.58) ನರ್ಮದಾ (ಶೇ 46.09) ಮತ್ತು ತಪತಿ (60.71) ಉತ್ತಮ ಸ್ಥಿತಿಯಲ್ಲಿದ್ದಂತೆ ಕಂಡವು. ಆದರೆ, ಮೇ ಮೊದಲ ವಾರದ ಪ್ರಕಾರ, ಗಂಗಾ ನದಿಯಲ್ಲಿ ಶೇ 45.43ರಷ್ಟು ನೀರು ಇದ್ದರೆ, ಗೋದಾವರಿಯಲ್ಲಿ ಶೇ 39.13, ನರ್ಮದಾದಲ್ಲಿ ಶೇ 37.13ರಷ್ಟಿದ್ದು, ನೀರಿನ ಪ್ರಮಾಣವು ಕುಸಿತವಾಗಿರುವುದನ್ನು ಸೂಚಿಸುತ್ತದೆ. ಕೃಷ್ಣಾ ಕೊಳ್ಳದಲ್ಲಿ ಹಿಂದೆ ಶೇ 31.31 ಇದ್ದದ್ದು, ಪ್ರಸ್ತುತ ಶೇ 20.73ಕ್ಕೆ ಕುಸಿದಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಏಪ್ರಿಲ್ ಕೊನೆಯ ವಾರದಲ್ಲಿ ಶೇ 35.74ರಷ್ಟು ನೀರು ಇದ್ದರೆ, ಮೇ 7ರಂದು ಅದು ಶೇ 34.35ಕ್ಕೆ ಇಳಿದಿದೆ. ಮಹಾನದಿಯಲ್ಲಿ ಶೇ 43.51ರಷ್ಟಿದ್ದ ನೀರಿನ ಪ್ರಮಾಣ ಶೇ 40.35ಕ್ಕೆ ಕಡಿಮೆಯಾಗಿದೆ.

ಆಧಾರ: ಸಿಡಬ್ಲ್ಯುಸಿ ವೆಬ್‌ಸೈಟ್, ಡೌನ್ ಟು ಅರ್ಥ್

ಇತರ ಕೆಲವು ಜಲಾಶಯಗಳ ನೀರಿನ ಮಟ್ಟ (ಮೇ 11)



ರಾಜ್ಯದ ಅಣೆಕಟ್ಟೆಗಳಲ್ಲೂ ತಗ್ಗಿದ ನೀರು

ರಾಜ್ಯದ ಬಹುತೇಕ ಎಲ್ಲ ಪ್ರಮುಖ ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿಯುತ್ತಿದೆ. ಕಳೆದ ವರ್ಷದ ಮೇ 11ರಂದು ಅಣೆಕಟ್ಟೆಗಳಲ್ಲಿ ಸಂಗ್ರಹವಿದ್ದ ನೀರಿನ ಪ್ರಮಾಣಕ್ಕೆ ಹೋಲಿಸಿದರೆ, ಈ ಬಾರಿ ವಿಜಯನಗರ ಜಿಲ್ಲೆ ಹೊಸಪೇಟೆಯಲ್ಲಿರುವ ತುಂಗಭದ್ರಾ ಜಲಾಶಯವನ್ನು ಬಿಟ್ಟು ಉಳಿದೆಲ್ಲ ಜಲಾಶಯಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದೆ. ಆದಾಗ್ಯೂ, ನೀರಿನ ಸಂಗ್ರಹ ಅಪಾಯಕಾರಿ ಮಟ್ಟಕ್ಕೆ ಕುಸಿದಿಲ್ಲ; ರಾಜ್ಯದ ಪ್ರಮುಖ ನಗರ, ಪಟ್ಟಣಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗದು ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ.

ತುಂಗಭದ್ರಾ ಜಲಾಶಯದಲ್ಲಿ ಸದ್ಯ 10.01 ಟಿಎಂಸಿ ಅಡಿ ನೀರಿನ ಸಂಗ್ರಹ ಇದ್ದು, ಕಳೆದ ವರ್ಷದ ಇದೇ ಸಮಯಕ್ಕೆ ಹೋಲಿಸಿದರೆ (7.92 ಟಿಎಂಸಿ ಅಡಿ) ಎರಡು ಟಿಎಂಸಿ ಅಡಿಯಷ್ಟು ಹೆಚ್ಚೇ ನೀರಿದೆ. ಉಳಿದ ಜಲಾಶಯಗಳಲ್ಲಿ ಕಳೆದ ವರ್ಷಕ್ಕಿಂತ ಕಡಿಮೆ ನೀರಿನ ಸಂಗ್ರಹ ಇರುವುದನ್ನು ಅಂಕಿ ಅಂಶಗಳು ಹೇಳುತ್ತಿವೆ.

ಇದೇ ರೀತಿಯ ಬಿಸಿಲಿನ ವಾತಾವರಣ ಮುಂದುವರಿದು, ಮುಂದಿನ 10–15 ದಿನಗಳಲ್ಲಿ ಮುಂಗಾರುಪೂರ್ವ ಮಳೆಯಾಗದಿದ್ದರೆ ಜಲಾಶಯಗಳಲ್ಲಿ ನೀರಿನ ಸಂಗ್ರಹ ಇನ್ನಷ್ಟು ಕುಸಿಯಲಿದ್ದು, ಜನ ಜಾನುವಾರುಗಳಿಗೆ ನೀರಿನ ಅಭಾವ ಉಂಟಾಗುವ ಆತಂಕ ವ್ಯಕ್ತವಾಗಿದೆ.


ಸಾಮಾನ್ಯ ಸಂಗ್ರಹ ಮಟ್ಟಕ್ಕಿಂತ ಹೆಚ್ಚು: ಕೇಂದ್ರ ಜಲ ಆಯೋಗವು ರಾಜ್ಯದ ಪ್ರಮುಖ 18 ಜಲಾಶಯಗಳ ನೀರಿನ ಮಟ್ಟದ ಮೇಲ್ವಿಚಾರಣೆಯನ್ನು ನಡೆಸುತ್ತದೆ. ಈ ಜಲಾಶಯಗಳಲ್ಲಿ ಲಭ್ಯವಿರುವ ನೀರಿನ ಸಂಗ್ರಹದ ಕುರಿತಂತೆ ಪ್ರತಿ ಗುರುವಾರ ವರದಿಯನ್ನು ಪ್ರಕಟಿಸುತ್ತದೆ. ಕಳೆದ ಗುರುವಾರ ಅಂದರೆ, ಮೇ 7ರಂದು ಪ್ರಕಟಿಸಿರುವ ವರದಿಯ ಪ್ರಕಾರ, ಕರ್ನಾಟಕದ 18 ಜಲಾಶಯಗಳಲ್ಲಿ ಕಳೆದ ವರ್ಷಕ್ಕಿಂತ ಕಡಿಮೆ ನೀರಿನ ಸಂಗ್ರಹ ಇದ್ದರೂ, ಒಟ್ಟಾರೆ ಸಂಗ್ರಹ ಸಾಮಾನ್ಯ ಸಂಗ್ರಹ ಸಾಮರ್ಥ್ಯಕ್ಕಿಂತ ಶೇ 9.01ರಷ್ಟು ಹೆಚ್ಚೇ ಇದೆ.

18 ಜಲಾಶಯಗಳ ಗರಿಷ್ಠ ನೀರಿನ ಸಂಗ್ರಹ ಸಾಮರ್ಥ್ಯ 24.974 ಶತಕೋಟಿ ಘನ ಮೀಟರ್‌ಗಳು (ಬಿಸಿಎಂ). ಸಾಮಾನ್ಯ ಸಂಗ್ರಹ ಸಾಮರ್ಥ್ಯ 20.57 ಬಿಸಿಎಂ. ಈ ಪೈಕಿ ಬಳಕೆಗೆ ಯೋಗ್ಯವಾದ ಸಾಮಾನ್ಯ ನೀರಿನ ಸಂಗ್ರಹ 5.138 ಬಿಸಿಎಂ. ಪ್ರಸ್ತುತ ರಾಜ್ಯದ ಅಣೆಕಟ್ಟೆಗಳಲ್ಲಿ ನೀರಿನ ಸಂಗ್ರಹವು ಈ ಪ್ರಮಾಣಕ್ಕಿಂತ ಹೆಚ್ಚೇ ಇದೆ. ಆಯೋಗದ ವರದಿ ಪ್ರಕಾರ, ಮೇ 7ಕ್ಕೆ ಅನ್ವಯವಾಗುವಂತೆ ಬಳಕೆಯೋಗ್ಯ ನೀರಿನ ಸಂಗ್ರಹ 5.601 ಬಿಸಿಎಂನಷ್ಟಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಇದು 6.159 ಬಿಸಿಎಂನಷ್ಟಿತ್ತು.

ರಾಜ್ಯದ ಪ್ರಮುಖ ಜಲಾಶಯಗಳಲ್ಲಿನ ನೀರಿನ ಸಂಗ್ರಹದ ಸ್ಥಿತಿಗತಿ (ಟಿಎಂಸಿ ಅಡಿಗಳಲ್ಲಿ) (11.05.2026)

ಜಲಾಶಯ	ಗರಿಷ್ಠ ಮಟ್ಟ	ಈಗಿನ ಮಟ್ಟ	ಪ್ರಸ್ತುತ ಸಂಗ್ರಹ	ಕಳೆದವರ್ಷದ ಸಂಗ್ರಹ
ಕೆಆರ್‌ಎಸ್	124.80 ಅಡಿ	90.76 ಅಡಿ	16.39	17.8
ಹಾರಂಗಿ	2,859 ಅಡಿ	2,825.79 ಅಡಿ	2.37	2.67
ಕಬಿನಿ	2,284 ಅಡಿ	2,255.64 ಅಡಿ	5.79	8.60
ಹೇಮಾವತಿ	2,922 ಅಡಿ	2,895.13 ಅಡಿ	16.94	19.15
ಲಿಂಗನಮಕ್ಕಿ	1,819 ಅಡಿ	1762.95 ಅಡಿ	30.94	36.46
ಆಲಮಟ್ಟಿ*	519.6 ಮೀ.	509.41 ಮೀ.	27.15	24.36
ನಾರಾಯಣಪುರ	492.25 ಮೀ.	489.79 ಮೀ.	20.44	17.33
ಭದ್ರಾ	186 ಅಡಿ	141.5 ಅಡಿ	27.08	26.06
ತುಂಗಾ	588.24 ಮೀ.	586.69 ಮೀ.	1.56	2.05
ತುಂಗಭದ್ರಾ	1,633 ಅಡಿ	1,588 ಅಡಿ	10.01	7.92
ನವಿಲುತೀರ್ಥ	2,079.50 ಅಡಿ	2,049.95 ಅಡಿ	6.44	8.83
ಹಿಡಕಲ್	2,175 ಅಡಿ	2,110.68 ಅಡಿ	11.41	13.90
ವಾಣಿವಿಲಾಸ ಸಾಗರ	130 ಅಡಿ	124.35 ಅಡಿ	25.68	27.65

* ಆಲಮಟ್ಟಿ ಜಲಾಶಯದಲ್ಲಿ **27.15** ಟಿಎಂಸಿ ಅಡಿಗಳಷ್ಟು ನೀರು ಸಂಗ್ರಹ ಇದ್ದರೂ, ಬಳಕೆಯೋಗ್ಯ ನೀರು **9.53** ಟಿಎಂಸಿ ಅಡಿಯಷ್ಟೇ. ಕಳೆದ ವರ್ಷ **24.36** ಟಿಎಂಸಿ ಅಡಿ ನೀರು ಇತ್ತು. ಅದರಲ್ಲಿ ಬಳಕೆಗೆ ಲಭ್ಯ ಇದ್ದುದು **6.74** ಟಿಎಂಸಿ ಅಡಿ



ಆಲಮಟ್ಟಿ ಜಲಾಶಯ ಸೋಮವಾರ ಕಂಡಿದ್ದು ಹೀಗೆ...
ಪ್ರಜಾವಾಣಿ ಚಿತ್ರ: ಚಂದ್ರಶೇಖರ ಕೋಳೇಕರ

ರಾಷ್ಟ್ರೀಯ

ಬಂಗಾಳ ಚುನಾವಣೆ: ಹೊಸ ಅರ್ಜಿಗೆ 'ಸುಪ್ರೀಂ' ಅವಕಾಶ



ನವದೆಹಲಿ (ಪಿಟಿಐ): ಈಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ 31 ಕ್ಷೇತ್ರಗಳಲ್ಲಿನ ಗೆಲುವಿನ ಅಂತರದ ಕುರಿತ ಹೇಳಿಕೆಗೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಇತರರು ಹೊಸದಾಗಿ ಅರ್ಜಿ ಸಲ್ಲಿಸಬಹುದು ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

'31 ಕ್ಷೇತ್ರಗಳಲ್ಲಿನ ಗೆಲುವಿನ ಅಂತರವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ವೇಳೆ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಅಳಿಸಲಾದ ಹೆಸರುಗಳ ಸಂಖ್ಯೆಗಿಂತ ಕಡಿಮೆಯಿದೆ' ಎಂದು ಟಿಎಂಸಿಯ ಕೆಲವು ಪರಾಜಿತ ಅಭ್ಯರ್ಥಿಗಳು ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ಪೀಠವು ಎಸ್‌ಐಆರ್‌ಗೆ ಸಂಬಂಧಿಸಿದಂತೆ ಮಮತಾ ಬ್ಯಾನರ್ಜಿ ಸಲ್ಲಿಸಿದ ಅರ್ಜಿ ಸೇರಿದಂತೆ ಹಲವಾರು ಅರ್ಜಿಗಳ ವಿಚಾರಣೆ ನಡೆಸುತ್ತಿದೆ. ಹಿರಿಯ ವಕೀಲ ಮತ್ತು ಟಿಎಂಸಿ ಸಂಸದ ಕಲ್ಯಾಣ್ ಬ್ಯಾನರ್ಜಿ ಅವರು, ಗೆಲುವಿನ ಅಂತರವು ಎಸ್‌ಐಆರ್ ಸಮಯದಲ್ಲಿ ಅಳಿಸಲಾದ ಹೆಸರುಗಳ ಸಂಖ್ಯೆಗಿಂತ ಕಡಿಮೆಯಿದ್ದರೆ ನ್ಯಾಯಾಲಯವು ಕುಂದುಕೊರತೆಗಳನ್ನು ಪರಿಶೀಲಿಸಬಹುದು ಎಂದು ಸುಪ್ರೀಂ ಕೋರ್ಟ್ ಈ ಹಿಂದೆ ಹೇಳಿದ್ದನ್ನು ಉಲ್ಲೇಖಿಸಿದರು.

ಅಂತಹ 31 ಕ್ಷೇತ್ರಗಳು ಇವೆ ಎಂದು ಸಿಜೆಐ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠಕ್ಕೆ ತಿಳಿಸಿದರು.

ನ್ಯಾಯಮೂರ್ತಿ ಬಾಗ್ಚಿ ಅವರ ಈ ಹಿಂದಿನ ಅಭಿಪ್ರಾಯವನ್ನು ಉಲ್ಲೇಖಿಸಿದ ಕಲ್ಯಾಣ್, 'ನಮ್ಮ ಪಕ್ಷದ ಒಬ್ಬ ಅಭ್ಯರ್ಥಿ 862 ಮತಗಳಿಂದ ಸೋತಿದ್ದಾರೆ. ಕುತೂಹಲಕಾರಿ ಸಂಗತಿಯೆಂದರೆ, ಎಸ್‌ಐಆರ್ ಸಮಯದಲ್ಲಿ ಆ ಕ್ಷೇತ್ರದ ಮತದಾರರ ಪಟ್ಟಿಯಿಂದ 5,550 ಹೆಸರುಗಳನ್ನು ಅಳಿಸಲಾಗಿದೆ' ಎಂದರು.

ಚುನಾವಣಾ ಆಯೋಗವನ್ನು ಪ್ರತಿನಿಧಿಸಿದ ಹಿರಿಯ ವಕೀಲ ಡಿ.ಎಸ್. ನಾಯ್ಡು ಅವರು ಕಲ್ಯಾಣ್ ಅವರ ವಾದವನ್ನು ವಿರೋಧಿಸಿ, ಚುನಾವಣಾ ತಕರಾರು ಅರ್ಜಿಯೇ ಪರಿಹಾರ ಎಂದರು.

'ಅಗ್ನಿವೀರರಿಗೆ ಪಿಂಚಣಿ ಕೊಡಲಾಗದು'

ಮುಂಬೈ (ಪಿಟಿಐ): 'ಅಗ್ನಿವೀರರು ಸಾಮಾನ್ಯ ಯೋಧರ ಸಮಾನ ಸ್ಥಾನಮಾನ ಹೊಂದಿಲ್ಲ. ಆದ್ದರಿಂದ, ಅಗ್ನಿವೀರರು ಕರ್ತವ್ಯದ ವೇಳೆ ಮೃತಪಟ್ಟರೆ, ಅವರ ಕುಟುಂಬಸ್ಥರು ಸಾಮಾನ್ಯ ಯೋಧರಿಗೆ ಸಿಗುವ ರೀತಿಯಲ್ಲೇ ಪಿಂಚಣಿ ಸೌಲಭ್ಯ ನೀಡುವಂತೆ ಹಕ್ಕು ಮಂಡಿಸಲು ಸಾಧ್ಯವಿಲ್ಲ' ಎಂದು ಕೇಂದ್ರ ಸರ್ಕಾರವು ಹೈಕೋರ್ಟ್‌ಗೆ ತಿಳಿಸಿದೆ.

ಮೃತ ಅಗ್ನಿವೀರ ಮುರಳಿ ನಾಯಕ್ ಅವರ ತಾಯಿ ಸಲ್ಲಿಸಿದ್ದ ಅರ್ಜಿ ವಿರುದ್ಧ ಕೇಂದ್ರ ಸರ್ಕಾರವು ಕಳೆದ ವಾರ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ, 'ಅಗ್ನಿಪಥ್ ಯೋಜನೆಯು ಇಂದಿನ ರಾಷ್ಟ್ರೀಯ ಭದ್ರತಾ ಅಗತ್ಯಗಳಿಗಾಗಿ ರೂಪಿಸಲಾದ ಅಲ್ಪಾವಧಿಯ ಸೇವೆ ಆಗಿದೆ. ಹೀಗಾಗಿ, ಯೋಧರು ಮತ್ತು ಅಗ್ನಿವೀರರ ನಡುವಿನ ವ್ಯತ್ಯಾಸವು ಸಾಂವಿಧಾನಿಕವಾಗಿ ಮಾನ್ಯವಾಗಿದೆ' ಎಂದು ಹೇಳಿದೆ.

ಕಳೆದ ವರ್ಷ ಮೇ ತಿಂಗಳಿನಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಆಪರೇಷನ್ ಸಿಂಧೂರ ಕಾರ್ಯಾಚರಣೆ ಸಮಯದಲ್ಲಿ ಗಡಿಯಾಚೆಯಿಂದ ನಡೆದ ಶೆಲ್ ದಾಳಿಯಲ್ಲಿ ಮುರಳಿ ನಾಯಕ್ ಮೃತಪಟ್ಟಿದ್ದರು. ಅವರ ತಾಯಿ ಜ್ಯೋತಿಬಾಯಿ ನಾಯಕ್, 'ಅಗ್ನಿವೀರರು ಸಾಮಾನ್ಯ ಯೋಧರಂತೆಯೇ ಕರ್ತವ್ಯ ನಿರ್ವಹಿಸುತ್ತಾರೆ, ಅಪಾಯವನ್ನೂ ಎದುರಿಸುತ್ತಾರೆ. ಹೀಗಾಗಿ, ಯೋಧರಿಗೆ ನೀಡುವಂತೆ ಸೌಲಭ್ಯ ಕಲ್ಪಿಸಬೇಕು' ಎಂದು ಕೋರಿ ಸಲ್ಲಿಸಿದ್ದ ಅರ್ಜಿಗೆ ಪ್ರತಿಕ್ರಿಯೆಯಾಗಿ ಕೇಂದ್ರ ಸರ್ಕಾರ ಪ್ರಮಾಣಪತ್ರ ಸಲ್ಲಿಸಿದೆ.

ಒಂದು ಪ್ರಕರಣ– ಒಂದು ದತ್ತಾಂಶ ಯೋಜನೆ ಘೋಷಿಸಿದ ಸಿಜೆಐ



ನವದೆಹಲಿ (ಪಿಟಿಐ): ಒಂದು ಪ್ರಕರಣ– ಒಂದು ದತ್ತಾಂಶ ಯೋಜನೆಯನ್ನು ಭಾರತದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು ಸೋಮವಾರ ಘೋಷಿಸಿದರು.

ಎಐ ಚಾಟ್ ಬಾಟ್ 'ಸು ಸಹಾಯ್' ಅನ್ನು ಬಳಕೆಗೆ ಸಮರ್ಪಿಸಿ ಮಾತನಾಡಿದ ಅವರು, 'ದೇಶದಾದ್ಯಂತ ನ್ಯಾಯಾಂಗ ಸೇವೆಗಳು ಸಾರ್ವಜನಿಕರಿಗೆ ಸರಳವಾಗಿ ದೊರೆಯುವಂತೆ ಸುಧಾರಣೆ ತರುವ ಗುರಿ ಹೊಂದಿರುವ ಡಿಜಿಟಲ್ ಕ್ರಮಗಳನ್ನು ಜಾರಿಗೊಳಿಸಲಾಗುವುದು' ಎಂದರು.

'ಹೈಕೋರ್ಟ್‌ಗಳು, ಕೆಳ ಹಂತಗಳ ಕೋರ್ಟ್‌ಗಳಿಂದ ಬಹು ಹಂತದ ಮಾಹಿತಿಯನ್ನು ಏಕೀಕೃತ ವ್ಯವಸ್ಥೆಯಲ್ಲಿ ಸಂಯೋಜಿಸಲಾಗುವುದು' ಎಂದರು.

'ದತ್ತಾಂಶ ಏಕೀಕರಣವನ್ನು ಬಲಪಡಿಸಲಾಗುವುದು. ಪರಿಣಾಮಕಾರಿಯಾಗಿ ಪ್ರಕರಣಗಳ ನಿರ್ವಹಣಾ ವ್ಯವಸ್ಥೆ ಅಭಿವೃದ್ಧಿಪಡಿಸಲು ನಾವು ಎದುರು ನೋಡುತ್ತಿದ್ದೇವೆ' ಎಂದು ಸಿಜೆಐ ಹೇಳಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

❌ **ಪಶ್ಚಿಮ ಬಂಗಾಳದಲ್ಲಿ** ಬಾಂಗ್ಲಾದೇಶದ ಪರವಾಗಿ ಘೋಷಣೆ ಕೂಗುತ್ತಿದ್ದವರ ಮೇಲೆ ಪೊಲೀಸರು ಲಾಠಿ ಚಾರ್ಜ್ ಮಾಡಿದ್ದಾರೆ ಎಂದು ಪ್ರತಿಪಾದಿಸುತ್ತಾ ಪ್ರಾರ್ಥನಾ ಸಿಂಗ್ ಎಂಬ ಎಕ್ಸ್ ಬಳಕೆದಾರರೊಬ್ಬರು ಇತ್ತೀಚೆಗೆ ವಿಡಿಯೊ ತುಣುಕನ್ನು ಪೋಸ್ಟ್ ಮಾಡಿದ್ದಾರೆ. 'ಬಂಗಾಳವು ಇನ್ನು ಭಯೋತ್ಪಾದಕರಿಗೆ ಕರುಣೆ ತೋರದು. ಅವರನ್ನು ಪತ್ತೆಹಚ್ಚಿ ಲಾಠಿ ಬೀಸಲಾಗುತ್ತಿದೆ' ಎಂಬ ಒಕ್ಕಣೆಯನ್ನೂ ಪೋಸ್ಟ್‌ನಲ್ಲಿ ಬರೆದಿದ್ದಾರೆ. ಆದರೆ. ಇದು ಸುಳ್ಳು ಮಾಹಿತಿ.

✅ **ವಿಡಿಯೊ ತುಣುಕಿನ** ಕೀಫ್ರೇಮ್ ಒಂದನ್ನು ಗೂಗಲ್ ಲೆನ್ಸ್ ಬಳಸಿ ಹುಡುಕಾಟ ನಡೆಸಿದಾಗ 'ಅಮಿತ್_ಚೌಹಾಣ್7684' ಎಂಬ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಇದೇ ವಿಡಿಯೊ ಹಂಚಿಕೊಂಡಿರುವುದು ಸಿಕ್ಕಿತು. ಆ ವಿಡಿಯೊವು 2025ರ ಸೆಪ್ಟೆಂಬರ್‌ನಲ್ಲಿ ಉತ್ತರ ಪ್ರದೇಶದ ಬರೇಲಿಯಲ್ಲಿ ನಡೆದ ಲಾಠಿ ಚಾರ್ಜ್‌ನದ್ದು ಎಂಬ ವಿವರ ಆ ಪೋಸ್ಟ್‌ನಲ್ಲಿತ್ತು. ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಡಿದಾಗ, ವಿವಿಧ ಮಾಧ್ಯಮಗಳ ಅಧಿಕೃತ ಯೂಟ್ಯೂಬ್ ಚಾನೆಲ್‌ಗಳಲ್ಲಿ ಬರೇಲಿಯಲ್ಲಿ ನಡೆದಿರುವ ಲಾಠಿ ಚಾರ್ಜ್‌ನ ವಿಡಿಯೊ ಸಹಿತ ವರದಿಗಳಿದ್ದವು. 'ಐ ಲವ್ ಮೊಹಮ್ಮದ್' ವಿವಾದದಿಂದಾಗಿ ಕಲ್ಲುತೂರಾಟ ನಡೆದಿರುವುದು ವರದಿಯಾಗಿತ್ತು. ಆ ಬಳಿಕ ಪರಿಸ್ಥಿತಿ ನಿಯಂತ್ರಣಕ್ಕೆ ತರಲು ಪೊಲೀಸರು ಲಾಠಿ ಪ್ರಹಾರ ನಡೆಸಿದ್ದರು. ಹಳೆಯ ವಿಡಿಯೊವನ್ನು ಈಗ ಪಶ್ಚಿಮ ಬಂಗಾಳದಲ್ಲಿ ನಡೆದಿರುವುದು ಎಂದು ಸುಳ್ಳು ಪ್ರತಿಪಾದಿಸುತ್ತಾ ವಿಡಿಯೊ ಹಂಚಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು



ದೀಪಾ ಹಿರೇಗುತ್ತಿ

ಉಪಯೋಗಿಸದ ಪುಟ

ಒಂದು ದಪ್ಪ ನೋಟ್‌ಪುಸ್ತಕದಲ್ಲಿ ಬಹಳ ಹಾಳೆಗಳಿದ್ದವು. ಕೆಲವು ಹಾಳೆಗಳು ಪೂರ್ತಿ ಬರೆಯಲ್ಪಟ್ಟಿದ್ದವು. ಇನ್ನು ಕೆಲವು ಪುಟಗಳಲ್ಲಿ ಚಿತ್ರಗಳು, ಮತ್ತೆ ಕೆಲವು ಪುಟಗಳಲ್ಲಿ ಲೆಕ್ಕಗಳು, ಮತ್ತೆ ಕೆಲವಲ್ಲಿ ನಾಳೆ ಮಾಡಬೇಕಾದ ಸಂಗತಿಗಳು ಹೀಗೆ. ಆದರೆ, ಒಂದು ಪುಟದಲ್ಲಿ ಮಾತ್ರ ಒಂದೇ ಒಂದು ಅಕ್ಷರವನ್ನೂ ಬರೆದಿರಲಿಲ್ಲ.

ಬರೆಯಲ್ಪಟ್ಟ ಪುಟಗಳು ಜೋರಾಗಿ ಮಾತಾಡಿಕೊಳ್ಳುತ್ತಿದ್ದವು. 'ನಾವೆಷ್ಟು ಮುಖ್ಯ ಅಲ್ವಾ' ಅಂದಿತು ಒಂದು ಪುಟ. ನಮ್ಮಲ್ಲಿ ಕಥೆಗಳಿವೆ, ಜ್ಞಾನವಿದೆ, ಲೆಕ್ಕವಿದೆ, ಕನಸುಗಳಿವೆ. ನಾವು ಇರುವುದಕ್ಕೇ ಈ ನೋಟ್ ಪುಸ್ತಕ ಅರ್ಥಪೂರ್ಣ' ಎಂದಿತು ಮತ್ತೊಂದು ಪುಟ. 'ನಾವಿಲ್ಲದೇ ಇದ್ದರೆ ಈ ನೋಟ್ ಪುಸ್ತಕ ಖಾಲಿಯಾಗಿ ಅಪ್ರಯೋಜಕವಾಗಿರುತ್ತಿತ್ತು' ಎಂದು ಜೋರಾಗಿ ಹೇಳಿತು ಇನ್ನೊಂದು ಪುಟ.

ಖಾಲಿಯಾಗಿದ್ದ ಪುಟ ಮಾತಾಡದೇ ಸುಮ್ಮನಿತ್ತು.

ದಿನಗಳು ಉರುಳಿದವು. ನೋಟ್‌ಪುಸ್ತಕವನ್ನು ಮತ್ತೆ ಮತ್ತೆ ಉಪಯೋಗಿಸಲಾಗುತ್ತಿತ್ತು. ಕೆಲವು ಪುಟಗಳು ಹೊಗಳಲ್ಪಟ್ಟವು. ಮತ್ತೆ ಕೆಲವು ಪುಟಗಳ ಮೇಲೆ ಗೀಚಲಾಯಿತು. ಇನ್ನು ಕೆಲವು ಪುಟಗಳನ್ನು ಸಿಟ್ಟಿನಿಂದ ಹರಿದು ಹಾಕಲಾಯಿತು ಕೂಡ.

ಒಂದು ದಿನ ಒಬ್ಬಳು ಹುಡುಗಿ ನೋಟ್ ಪುಸ್ತಕವನ್ನೆತ್ತಿಕೊಂಡು ಹಾಳೆಗಳನ್ನು ತಿರುವಿ ಹಾಕಿದಳು. ಓದುತ್ತ ನೋಡುತ್ತ ನಡುವೆ ಅಚಾನಕ್ಕಾಗಿ ಸಿಕ್ಕ ಖಾಲಿ ಪುಟವನ್ನು ತೆರೆದಳು. ಅವಳಿಗೆ ಖಾಲಿ ಪುಟವನ್ನು ನೋಡಿ ಖುಷಿಯಾಯಿತು.

ಅಲ್ಲಿಯೇ ಕುಳಿತು ಅವಳು ಬರೆಯಲಾರಂಭಿಸಿದಳು. ತನ್ನ ತೀರಾ ಖಾಸಗಿ ಭಾವನೆಗಳನ್ನು, ತನ್ನ ಕನಸುಗಳನ್ನು, ಅವುಗಳನ್ನು ನನಸಾಗಿಸುವ ತನ್ನ ಭವಿಷ್ಯದ ಯೋಜನೆಗಳು ಎಲ್ಲವನ್ನೂ ಬರೆದಳು.

ಖಾಲಿ ಪುಟವೆಂದು ಅವಗಣನೆಗೆ ಒಳಗಾಗಿದ್ದ ಪುಟವೀಗ ಆ ಹುಡುಗಿಯ ಪಾಲಿಗೆ ಅತ್ಯಂತ ಅಮೂಲ್ಯವಾದ ಪುಟವಾಗಿತ್ತು. ಇಡೀ ನೋಟ್ ಪುಸ್ತಕದಲ್ಲಿ ಅದರಷ್ಟು ಮುಖ್ಯವಾದ ಪುಟ ಬೇರೊಂದಿರಲಿಲ್ಲ.

ಬೇರೆ ಪುಟಗಳು ಈಗ ಸುಮ್ಮನೆ ನೋಡುತ್ತಿದ್ದವು.

ತಡೆಯಲಾಗದೆ ಒಂದು ಪುಟ ಕೇಳಿತು, 'ಅಲ್ಲ, ಇಷ್ಟು ದಿನ ಖಾಲಿಯಿದ್ದೆ. ಈಗ ಅದು ಹೇಗೆ ನೀನು ಅಷ್ಟು ಮುಖ್ಯವಾದ ಪುಟವಾಗಿಬಿಟ್ಟೆ?'

ಈ ಮೊದಲು ಖಾಲಿಯಿದ್ದ ಪುಟ ಹೇಳಿತು, 'ನಾನು ಕಾದೆ. ತುಂಬಲ್ಪಡಬೇಕೆಂದು ನಾನು ಒದ್ದಾಡಲಿಲ್ಲ, ಆತುರ ಪಡಲಿಲ್ಲ. ಖಾಲಿಯಾಗಿಯೇ ಇದ್ದೆ. ಇವತ್ತು ಆ ಹುಡುಗಿಗೆ ತೀವ್ರವಾಗಿ ಬರೆಯಬೇಕೆನಿಸಿದಾಗ ನಾನು ಲಭ್ಯವಿದ್ದೆ ಅಷ್ಟೇ. ಹಾಂ, ಅಕಸ್ಮಾತ್ ನಾನು ಖಾಲಿಯಾಗೇ ಇದ್ದರೂ ನನ್ನ ಬದುಕು ಅರ್ಥರಹಿತವೇನೂ ಆಗುತ್ತಿರಲಿಲ್ಲ'.

ತುಂಬಿರುವುದು ಮತ್ತು ಅರ್ಥಪೂರ್ಣವಾಗಿರುವುದು ಎರಡೂ ಒಂದೇ ಅಲ್ಲ ಎಂಬುದು ಜಂಬ ಪಡುತ್ತಿದ್ದ ಪುಟಗಳಿಗೆ ಅರ್ಥವಾಗಿತ್ತು. ಖಾಲಿಯಿರುವುದು ಅವಮಾನವೂ ಅಲ್ಲ ಎಂಬುದೂ ಅರಿವಾಗಿತ್ತು.

ನಮ್ಮ ಬದುಕನ್ನು ವಿಭಿನ್ನ ಸಂಗತಿಗಳಿಂದ, ಬಣ್ಣಗಳಿಂದ, ಅನುಭವಗಳಿಂದ ತುಂಬಿಸಬೇಕೆಂದು ನಾವು ಸದಾ ಧಾವಂತದಲ್ಲಿರುತ್ತೇವೆ. ಅದೇ ಅರ್ಥಪೂರ್ಣ ಬದುಕು ಅಂದುಕೊಂಡಿರುತ್ತೇವೆ. ಸದಾ ಕಾರ್ಯನಿರತರಾಗಿರುವುದೇ ಪರಿಹಾರವೆಂದುಕೊಂಡಿರುತ್ತೇವೆ. ಅದು ಸಾಧ್ಯವಾಗದಿದ್ದಾಗ ನೋಯುತ್ತೇವೆ. ಬೇರೆಯವರ ಬದುಕಿನ ಬಣ್ಣದ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ನೋಡುತ್ತ ನಮ್ಮ ಬದುಕು ನಿಂತಲ್ಲಿಯೇ ಇದೆಯೆಂದು ಮತ್ತಷ್ಟು ಕೊರಗುತ್ತೇವೆ.

ಯಾರೋ ಓಡುವುದನ್ನು ನೋಡಿ ದಾರಿಯನ್ನು ಸ್ಪಷ್ಟಗೊಳಿಸಿಕೊಳ್ಳದೇ ನಾವೂ ಓಡುತ್ತೇವೆ. ಆದರೆ, ಸದಾ ಓಡುತ್ತಿರುವುದನ್ನೇ ಯಶಸ್ವೀ ಬದುಕು ಎನ್ನಲಾಗುವುದಿಲ್ಲ. ಸಾವಧಾನ ಕೂಡ ಬದುಕಿಗೆ ಅಗತ್ಯ. ಅದು ಖಾಲಿತನವಲ್ಲ. ಪ್ರತಿಯೊಬ್ಬರೂ ವಿಶಿಷ್ಟ. ಪ್ರತಿಯೊಬ್ಬರ ಬದುಕೂ ಅನನ್ಯ ಎಂಬುದನ್ನು ಅರ್ಥ ಮಾಡಿಕೊಂಡರೆ ಜಗತ್ತಿನಲ್ಲಿ ಹೆಚ್ಚಿನ ಸಮಸ್ಯೆಗಳೇ ಮಾಯವಾಗಿ ಹೋಗುತ್ತವೆ.

ಗುಂಡಣ್ಣ




ಪದಬಂಧ 6400

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ದಾರ ಹಿಡಿದಿರುವ ಬಾಧ್ಯಸ್ಥ (4)
3. ಜೊತೆಯಲ್ಲಿ ವಾಸಿಸುವಿಕೆ (4)
5. ಜಾತಿಯಲ್ಲಿರುವ ರೇಖಾಗಣಿತ ಗೊತ್ತಾಯಿತೇ? (3)
6. ಕುರಿಗಳನ್ನು ಕಾಯುವವನು (3)
8. ಸನ್ಯಾಸ ಪಡೆದವನದ್ದು ಈ ರಚನೆ! (3)
9. ಹತ್ತು ವರ್ಷಗಳ ಅವಧಿ (3)
11. ಕೊನೆಗೆ ಲಯವಿದ್ದರೆ ಇದು ವರ್ತುಲ (3)
12. ಚಡಪಡಿಸುತ್ತಾ ಹಾಕಿದ ಹಾಸುಗಲ್ಲು (3)
13. ಮುಸಲ್ಮಾನರ ಪ್ರಾರ್ಥನಾ ಮಂದಿರ (3)
15. ಶಕೆ ಕಾಲದಲ್ಲಿ ಮುತ್ತುವ ಸೊಳ್ಳೆ (3)
17. ಕನ್ನಡಿಗನಿಗೆ ದೊರೆತ ಟ್ರೈನಿಂಗ್! (4)
18. ಈತ ನಗಿಸಲೆಂದು ಬಂದವನು (4)

ಮೇಲಿಂದ ಕೆಳಕ್ಕೆ
1. ಲಾಯಕ್ಕು ಎನ್ನಿಸಿದ್ದೆಲ್ಲಾ ಬರೀ ನಷ್ಟ! (3)
2. ಜಾಗರಣೆ ಮಾಡಲೆಂದೇ ಈ ಬಿಡುವು! (2)
3. ಸಮಿತಿಯಲ್ಲಿರುವ ಹೆಂಡತಿ (2)
4. ತಿಂಗಳ ಕೊನೆಯಲ್ಲಿ ಒಂದಾಗಿ ಸೇರಿಸಿದುದು! (3)
7. ಬಯಲು ಜಾಗದಲ್ಲಿ ನೀಡಿದ ಪ್ರತ್ಯುತ್ತರ (5)
8. ಬ್ರಹ್ಮನ ಕಟ್ಟಳೆಯಿದು (5)
10. ಕಕ್ಕಾಬಿಕ್ಕಿಯಾಗಿ ನಿಂತಿರುವ ಪೆದ್ದ! (3)
12. ಅಗಿದು ನುರಿಸಿದುದು (3)
14. ಅಂಕಣದಲ್ಲಿ ಕಾಣಿಸಿದ ತೇದಿ (3)
15. ಕುಶಾಗ್ರಮತಿಯ ಬುದ್ಧಿ (2)
16. ಕವನವನ್ನು ಬರೆದವನು (2)



6399ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸ್ಥಿರ 3.ಚರಾಚರ 5.ಸಮರ 7.ರಸಭಂಗ 10.ಸಲಿಗೆ 11.ವಿಧಾತ 12.ರಣರಂಗ 14.ಒರಟ 16.ಸರದಾರ 17.ರುಜು

ಮೇಲಿಂದ ಕೆಳಕ್ಕೆ:
2.ರಭಸ 3.ಚಮ್ಮಾರ 4.ಚತುರ 6.ಮಜ್ಜಿಗೆ 8.ಗತ್ಯಂತರ 9.ಕಸವರ 11.ವಿಧುರ 13.ಗಹ್ವರ 14.ಒಯ್ಯಾರ 15.ಟಗರು

ಸುಡೊಕು 6783

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

				5		2		8
5		4	1		8		3	
	8			7			5	4
	6			3		1		2
2		5		1	7			
	3			8		5		6
		8			6		2	3
3		2	7	4				
	5			2		4		1

6782 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

12 ಮೇ 2026 ಮಂಗಳವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ದಶಮಿ ಗಂ. 14-53 ನಕ್ಷತ್ರ: ಪೂರ್ವಾಭಾದ್ರ ಗಂ. 25-18 ಯೋಗ: ವೈಧೃತಿ ಗಂ. 23-20 ಕರಣ: ವಿಷ್ಟಿ ಗಂ. 14-53, ಮೇಷ ಮಾಸದ 29 ನೇ ದಿನ. ಮಳೆ ನಕ್ಷತ್ರ : ಕೃತ್ತಿಕ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30, ಸೂರ್ಯೋದಯ : 06-09 ಸೂರ್ಯಾಸ್ತ : 06-45, ಮುಸ್ಲಿಂ ದಿನಾಂಕ : 24 ಜುಲ್ಕಾದಾ, ಅದೃಷ್ಟ ಸಂಖ್ಯೆ : 8, 11

ಮೇಷ: ಪಾಲುದಾರಿಕೆಯ ವ್ಯವಹಾರದಲ್ಲಿ ತೀರ್ಮಾನ ತೆಗೆದುಕೊಳ್ಳುವುದು ಸರಿಯಲ್ಲ. ಜೀವನಶೈಲಿಗೆ ವಿರುದ್ಧವಾದ ಘಟನೆ ನಡೆಯಬಹುದು. ಚಿನ್ನಾಭರಣಗಳ ಖರೀದಿಯ ಯೋಗವಿದೆ.

ವೃಷಭ: ಅಭಿವೃದ್ಧಿಯ ಬಗ್ಗೆ ಪ್ರಮುಖ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸಮಯ. ಲೆಕ್ಕ ಪರಿಶೋಧಕರಿಗೆ ಮತ್ತು ನ್ಯಾಯವಾದಿಗಳಿಗೆ ತೃಪ್ತಿಕರ ದಿನಗಳು. ಎಲ್ಲಾ ಕೆಲಸಗಳೂ ತ್ವರಿತಗತಿಯಲ್ಲಿ ಸಾಗಲಿವೆ.

ಮಿಥುನ: ಪ್ರೀತಿಪಾತ್ರರಿಗೆ ನೋವಾದ ಕಾರಣದಿಂದ ಮನಸ್ಸು ಎಲ್ಲಾ ಕೆಲಸಗಳಿಂದ ವಿಮುಖವಾಗುವ ಸಾಧ್ಯತೆ ಇರುವುದು. ಗುರು–ಹಿರಿಯರ ದರ್ಶನ ಯೋಗ ಇದೆ. ಮಗಳ ಶಿಕ್ಷಣವನ್ನು ಮುಂದುವರಿಸಿ.

ಕರ್ಕಾಟಕ: ಅಭಿವೃದ್ಧಿ ದಾರಿಗೆ ಕಗ್ಗಂಟುಗಳನ್ನು ಉಂಟುಮಾಡುವ ಸಂಬಂಧಿಕರಲ್ಲಿ ವಿಚಾರ ವಿನಿಮಯ ಮಾಡದಿರುವುದು ಉತ್ತಮ. ಉದ್ಯೋಗಾಕಾಂಕ್ಷಿಗಳಿಗೆ ಗಣಪತಿಯ ಅನುಗ್ರಹದಿಂದ ಬಯಸಿದ ಕ್ಷೇತ್ರದಲ್ಲಿ ಅವಕಾಶ ಸಿಗಲಿದೆ.

ಸಿಂಹ: ಯಾವುದೇ ಅನುಮಾನಗಳಿಲ್ಲದೇ ಏಕಮುಖ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗಲಿದೆ. ಮನೆ ಕಟ್ಟಡದ ಕೆಲಸಗಳು ಮುಕ್ತಾಯದ ಹಂತಕ್ಕೆ ತಲುಪಲಿವೆ. ದೂರ ಪ್ರಯಾಣ ಸಂಭವವಿರುತ್ತದೆ.

ಕನ್ಯಾ: ದುಷ್ಟರ ಸಹವಾಸದಿಂದ ದೂರವಿರುವ ಪ್ರಯತ್ನ ಮಾಡಿ. ವಿದೇಶದಲ್ಲಿ ಉದ್ಯೋಗದ ಸಂಪಾದನೆಗಾಗಿ ಪ್ರಯತ್ನ ಮಾಡಬಹುದು. ನೂತನ ವಾಹನ ಖರೀದಿಯ ಬಗ್ಗೆ ಚಿಂತನೆ ಬರಲಿದೆ.

ತುಲಾ: ರಾಜಕೀಯ ಜೀವನದಲ್ಲಿ ಪರಿಸ್ಥಿತಿ ಸುಧಾರಿಸಿಕೊಳ್ಳಲು ಅನುಕೂಲವಾಗುವ ಅವಕಾಶಗಳು ದೊರೆಯಲಿವೆ. ಆಪ್ತ ಸ್ನೇಹಿತರೊಂದಿಗೆ ಬಾಂಧವ್ಯ ಉತ್ತಮಗೊಳ್ಳುವುದು. ಬಿಳಿ ಬಣ್ಣ ಶುಭವನ್ನು ಉಂಟುಮಾಡುತ್ತದೆ.

ವೃಶ್ಚಿಕ: ವೃತ್ತಿ ಸಂಬಂಧ ಪೈಪೋಟಿಯನ್ನು ಸಮರ್ಥವಾಗಿ ಎದುರಿಸುವಿರಿ. ಯಾವ ಕಾರಣಕ್ಕೂ ನಿಮ್ಮ ಸ್ವಾರ್ಥಕ್ಕಾಗಿ ಇನ್ನೊಬ್ಬರ ಜೀವನದಲ್ಲಿ ಆಟವಾಡಬೇಡಿ. ಪರೋಪಕಾರಿಯಾಗಿ ಬದುಕುವ ಬಗ್ಗೆ ತೀರ್ಮಾನಿಸಿರಿ.

ಧನು: ಸ್ವಂತವಾಗಿ ಆರಂಭ ಮಾಡಿದ ವ್ಯವಹಾರದಲ್ಲಿ ಲಾಭಗಳಿಸುವ ವಿಚಾರದಲ್ಲಿ ಸ್ವಲ್ಪ ದಿನಗಳ ಮಟ್ಟಿಗೆ ಕಾಯಬೇಕಾಗುತ್ತದೆ. ಸವಾಲೊಡ್ಡುವ ಸನ್ನಿವೇಶಗಳು ಸಹೋದರಿ ಅಥವಾ ಭಾವನಿಂದ ಎದುರಾಗಬಹುದು.

ಮಕರ: ಸಮಾಜದಲ್ಲಿ ಸ್ಥಾನಮಾನ ಹೊಂದಿರುವ ನಿಮಗೆ ಮಸಿ ಬಳಿಯುವ ಪ್ರಯತ್ನ ಸಂಬಂಧಿಕರಿಂದ ನಡೆಯುವುದು. ಮಕ್ಕಳ ಬೆಳವಣಿಗೆ ವಿಚಾರದಲ್ಲಿ ಕಾಳಜಿ ತೋರುವ ಅನಿವಾರ್ಯತೆ ಹೆಚ್ಚಲಿದೆ. ಹಸಿರು ಬಣ್ಣ ಅದೃಷ್ಟ ತರುವುದು.

ಕುಂಭ: ಸಾಂಸ್ಕೃತಿಕವಾಗಿ ಮುಖ್ಯವಾಗಿ ನಟನಾ ವೃತ್ತಿಯವರಿಗೆ ಖ್ಯಾತಿ ಮತ್ತು ಸಂಪತ್ತು ಹರಿದು ಬರಲಿದೆ. ಪ್ರತಿಷ್ಠಿತ ಮತ್ತು ಪ್ರಭಾವಿ ವ್ಯಕ್ತಿಗಳ ಪರಿಚಯವಾಗಲಿದೆ. ಆರೋಗ್ಯದಲ್ಲಿ ಗಮನಾರ್ಹ ಸುಧಾರಣೆ ಕಾಣುವಿರಿ.

ಮೀನ: ಜಮೀನಿನ ಕೆಲಸ ಕಾರ್ಯಗಳು ಮನಸ್ಸಿನಲ್ಲಿ ತೀರ್ಮಾನಿಸಿದಂತೆ ನಡೆಯಲಿವೆ. ನಿಮ್ಮ ಕಲ್ಪನಾಶಕ್ತಿ ಇಂದು ಚುರುಕಾಗಿ ಕೆಲಸ ಮಾಡಲಿದೆ. ಕೆಲಸದಲ್ಲಿ ಸಣ್ಣ-ಪುಟ್ಟ ಸಮಸ್ಯೆ ಎದುರಾಗಬಹುದು.

ಷೇರುಪೇಟೆ ವಹಿವಾಟು

77,328 ಹಿಂದಿನ ಅಂತ್ಯ | 1312 ↓ | 76,015 ಇಂದಿನ ಅಂತ್ಯ

(77,500 / 77,000 / 76,500 / 76,000; 10:00 12:00 14:00 16:00)

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,176
ಇಂದಿನ ಅಂತ್ಯ:	23,815
ದಿನದ ಕನಿಷ್ಠ:	23,799
↓	360

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹590
12 ಕ್ಕೆ	₹84
ಮೈಸೂರು: 100 ಕ್ಕೆ	₹595

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹254
ಆರ್‌ಎಸ್‌ಎಸ್-5	₹247.50
ಗುಡ್ ಲಾಟ್	₹216

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹333-648
ದ್ವಿತಳಿ (ಬಿ.ವಿ)	₹250-802

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1610 (1610)
ಸೋಯಾ (ರಿಫೈನ್ಡ್)	₹1500 (1505)
ಸೂರ್ಯಕಾಂತಿ (ರಿಫೈನ್ಡ್)	₹1640(1645)
ಪಾಮೋಲಿನ್	₹1480 (1485)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23100
ಎಸಿ	₹14000
ಆರ್‌ಪಿ	₹18150
ಆರ್‌ಸಿ	₹9775

ಮುಂಬೈ ಧಾರಣೆ (ಶೇಂಗಾ)

11-05-2026	
ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1620 (1620)
ಒಂದು ವಾರದ ಡೆಲಿವರಿ	1615 (1615)
ಪಾಮ್ ವಾರದ ಡೆಲಿವರಿ	1478 (1483)
ಸೂರ್ಯಕಾಂತಿ ಎಣ್ಣೆ ಕಚ್ಚಾ	1530 (1535)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,51,500 (1,50,000)
ಬೆಳ್ಳಿ ಕೆ.ಜಿಗೆ	2,64,000 (2,55,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1000-1400
ಮಧ್ಯಮ	₹600-1000
ಸಣ್ಣ	₹200-600

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹32000-32000
ತಿಪಟೂರು	₹31500-33800
ತುರುವೇಕೆರೆ	₹32000-32000

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ವಿದೇಶಿ ವಿನಿಮಯ ಸಂಗ್ರಹ ಉಳಿಸಲು ಜನರು ಮನೆಯಿಂದಲೇ ಕೆಲಸ ಮಾಡಬೇಕು ಎಂಬ ಪ್ರಧಾನಿ ಮೋದಿ ಅವರ ಸಲಹೆ ಸರಿಯೇ?

● ಹೌದು ● ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

‘ಪ್ರಧಾನಿ ಸಲಹೆ; ವೈಫಲ್ಯದ ಪುರಾವೆ’

ದೇಶ ಮುನ್ನಡೆಸಲು ಮೋದಿ ಅಸಮರ್ಥ– ಕಾಂಗ್ರೆಸ್ ಟೀಕೆ; ಬಿಜೆಪಿ ತಿರುಗೇಟು

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾ ಸಂಘರ್ಷದಿಂದ ಉಂಟಾಗಿರುವ ಕೆಟ್ಟ ಪರಿಣಾಮಗಳನ್ನು ಎದುರಿಸಲು ಕೆಲವೊಂದು ಕ್ರಮಗಳನ್ನು ತೆಗೆದುಕೊಳ್ಳುವಂತೆ ಜನರಿಗೆ ಕರೆ ನೀಡಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ಸೋಮವಾರ ತೀವ್ರ ವಾಗ್ದಾಳಿ ನಡೆಸಿದೆ. ‘ರಾಜಿ ಮಾಡಿಕೊಂಡಿರುವ ಪ್ರಧಾನಿ ಇನ್ನು ಮುಂದೆ ದೇಶವನ್ನು ನಡೆಸಲು ಸಮರ್ಥರಲ್ಲ’ ಎಂದು ಹೇಳಿದೆ.



ರಾಹುಲ್ ಗಾಂಧಿ

‘ಕಳೆದ ದಿನ ಮೋದಿಜಿ ಅವರು ಸಾರ್ವಜನಿಕರಿಗೆ ತ್ಯಾಗಗಳನ್ನು ಮಾಡುವಂತೆ ಕರೆ ನೀಡಿದ್ದಾರೆ. ಚಿನ್ನ ಖರೀದಿಸಬೇಡಿ, ವಿದೇಶ ಪ್ರವಾಸ ಮಾಡಬೇಡಿ, ಕಡಿಮೆ ಪೆಟ್ರೋಲ್ ಬಳಸಿ, ರಸಗೊಬ್ಬರ ಮತ್ತು ಅಡುಗೆ ಎಣ್ಣೆ ಬಳಕೆ ಕಡಿಮೆ ಮಾಡಿ, ಮೆಟ್ರೊದಲ್ಲಿ ಪ್ರಯಾಣಿಸಿ ಮತ್ತು ಮನೆಯಿಂದಲೇ ಕೆಲಸ ಮಾಡುವಂತೆ ಕೋರಿದ್ದಾರೆ’ ಎಂದು ರಾಹುಲ್ ಅವರು ‘ಎಕ್ಸ್’ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

‘ಪ್ರಧಾನಿ ಆಡಿರುವುದು ಸಲಹೆಯ ಮಾತುಗಳಲ್ಲ. ಅವುಗಳು ಬಿಜೆಪಿ ಸರ್ಕಾರದ ವೈಫಲ್ಯದ ಪುರಾವೆ. 12 ವರ್ಷಗಳಲ್ಲಿ ದೇಶವನ್ನು ಯಾವ ಸ್ಥಿತಿಗೆ ತಂದು ನಿಲ್ಲಿಸಿದ್ದಾರೆ ಎಂದರೆ, ಈಗ ಸಾರ್ವಜನಿಕರಿಗೆ ಏನು ಖರೀದಿಸಬೇಕು ಮತ್ತು ಏನು ಖರೀದಿಸಬಾರದು, ಎಲ್ಲಿಗೆ ಹೋಗಬೇಕು ಮತ್ತು ಎಲ್ಲಿಗೆ ಹೋಗಬಾರದು ಎಂಬುದನ್ನು ಸರ್ಕಾರವೇ ಹೇಳುತ್ತಿದೆ’ ಎಂದು ಟೀಕಿಸಿದ್ದಾರೆ.

‘ಮೋದಿ ಅವರು ತಮ್ಮ ಸ್ವಂತ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾರ್ವಜನಿಕರ ಮೇಲೆ ಮತ್ತೆ ಮತ್ತೆ ಜವಾಬ್ದಾರಿಯನ್ನು ವರ್ಗಾಯಿಸುತ್ತಾರೆ’ ಎಂದಿದ್ದಾರೆ.

ಕಾಂಗ್ರೆಸ್ ಆರಂಭದಲ್ಲೇ ಎಚ್ಚರಿಸಿತ್ತು: ‘ಫೆಬ್ರುವರಿ 28ರಂದು ಪಶ್ಚಿಮ ಏಷ್ಯಾ ಸಂಘರ್ಷ ಆರಂಭವಾದಾಗಲೇ ಕಾಂಗ್ರೆಸ್ ಪಕ್ಷವು ದೇಶಕ್ಕೆ ಎದುರಾಗಲಿರುವ ಸಂಕಷ್ಟದ ಬಗ್ಗೆ ಎಚ್ಚರಿಕೆ ನೀಡಿತ್ತು. ರೂಪಾಯಿ ಮೌಲ್ಯ ಕುಸಿತ, ಇಂಧನ ಬೆಲೆ ಏರಿಕೆ, ರಸಗೊಬ್ಬರ ಕೊರತೆ, ಆಹಾರ ಭದ್ರತೆಗೆ ಎದುರಾಗಿರುವ ಬೆದರಿಕೆಗಳ ಬಗ್ಗೆ ಹೇಳಿತ್ತು. ಆದರೆ, ಅದನ್ನು ಕೇಳಿಸಿಕೊಳ್ಳಲು ಸಿದ್ಧವಿಲ್ಲದ ಪ್ರಧಾನಿ ಅವರು ಚುನಾವಣಾ ಪ್ರಚಾರ ಮತ್ತು ರೋಡ್ ಶೋಗಳಲ್ಲಿ ಮುಳುಗಿದ್ದರು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

‘ಪರಿಸ್ಥಿತಿ ನಿಯಂತ್ರಣದಲ್ಲಿದೆ’ ಮತ್ತು ‘ಎಲ್ಲವೂ ಸರಿಯಾಗಿದೆ’ ಎಂದು ಪ್ರಧಾನಿ ಇಷ್ಟು ದಿನ ಏಕೆ ಹೇಳುತ್ತಿದ್ದರು? ಈಗ ಚುನಾವಣೆ ಮುಗಿದ ನಂತರ, ದೇಶವು ಅವರ ಉಪನ್ಯಾಸ ಕೇಳಬೇಕಾಗಿದೆ. ಇದನ್ನು ಮಾಡಬೇಡಿ, ಅದನ್ನು ಖರೀದಿಸಬೇಡಿ, ಇದನ್ನು ಬಿಟ್ಟುಬಿಡಿ, ಮನೆಯಿಂದಲೇ ಕೆಲಸ ಮಾಡಿ.. ಹೀಗೆ ಸಲಹೆ ನೀಡಲು ಶುರು ಮಾಡಿದ್ದಾರೆ. ಮೋದಿ ಅವರೇ 12 ವರ್ಷಗಳ ವೈಫಲ್ಯದ ಹೊಣೆಯನ್ನು ಜನರ ಮೇಲೆ ಹೊರಿಸಬೇಡಿ’ ಎಂದು ವಾಗ್ದಾಳಿ ನಡೆಸಿದ್ದಾರೆ.

> ಜನರು ಸಂಕಷ್ಟದ ಭಾರದಿಂದ ಬಳಲುತ್ತಿರುವ ಈ ಸಮಯದಲ್ಲಿ, ಪ್ರಧಾನಿ ಮೋದಿ ಅವರು ದೇಶಕ್ಕೆ ಉಳಿತಾಯದ ಕುರಿತು ಉಪನ್ಯಾಸ ನೀಡುವುದರಲ್ಲಿ ನಿರತರಾಗಿದ್ದಾರೆ
>
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

> ಅಂಕಿ–ಅಂಶಗಳು ಸೂಚಿಸುತ್ತಿರುವುದಕ್ಕಿಂತ ಮತ್ತು ಪ್ರಧಾನಿ, ಅವರ ಸಂಪುಟ ಸಹೋದ್ಯೋಗಿಗಳು ಹೇಳಿಕೊಳ್ಳುತ್ತಿರುವುದಕ್ಕಿಂತ ದೇಶದ ಆರ್ಥಿಕ ಪರಿಸ್ಥಿತಿಯು ತುಂಬಾ ಗಂಭೀರವಾಗಿದೆ
>
> **ಜೈರಾಮ್ ರಮೇಶ್,** ಎಐಸಿಸಿ ಪ್ರಧಾನ ಕಾರ್ಯದರ್ಶಿ

> ಚುನಾವಣೆ ಮುಗಿದ ತಕ್ಷಣ, ಸರ್ಕಾರಕ್ಕೆ ಇದ್ದಕ್ಕಿದ್ದಂತೆ ‘ಬಿಕ್ಕಟ್ಟು’ ನೆನಪಾಗಿದೆ. ವಾಸ್ತವದಲ್ಲಿ, ದೇಶವು ಒಂದೇ ಒಂದು ಬಿಕ್ಕಟ್ಟು ಎದುರಿಸುತ್ತಿದ್ದು, ಅದರ ಹೆಸರು ‘ಬಿಜೆಪಿ’
>
> **ಅಖಿಲೇಶ್ ಯಾದವ್,** ಸಮಾಜವಾದಿ ಪಕ್ಷದ ಮುಖ್ಯಸ್ಥ

ಕಾಂಗ್ರೆಸ್‌ಗೆ ರಾಷ್ಟ್ರ ನಿರ್ಮಾಣ ಬೇಕಿಲ್ಲ: ಬಿಜೆಪಿ

ಪಶ್ಚಿಮ ಏಷ್ಯಾ ಸಂಘರ್ಷದಿಂದ ಉಂಟಾಗಿರುವ ಬಿಕ್ಕಟ್ಟು ಎದುರಿಸಲು ಜನರಿಗೆ ಸಲಹೆ ನೀಡಿದ್ದಕ್ಕಾಗಿ ಪ್ರಧಾನಿ ಅವರನ್ನು ಟೀಕಿಸಿರುವ ಕಾಂಗ್ರೆಸ್‌ಗೆ, ಬಿಜೆಪಿ ಸೋಮವಾರ ತಿರುಗೇಟು ನೀಡಿದೆ.

ಈ ಬಗ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಬಿಜೆಪಿ ಐ.ಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ, ‘ಮೋದಿ ಅವರು ಜನರಿಗೆ ತ್ಯಾಗಗಳನ್ನು ಮಾಡುವಂತೆ ಕೇಳಿಕೊಂಡಿಲ್ಲ. ರಾಷ್ಟ್ರದ ಹಿತಾಸಕ್ತಿಯನ್ನು ಮುಂದಿಟ್ಟುಕೊಂಡು ಪ್ರಜ್ಞಾಪೂರ್ವಕ ಆಯ್ಕೆಗಳನ್ನು ಮಾಡುವಂತೆ ಒತ್ತಾಯಿಸಿದ್ದಾರೆ’ ಎಂದು ಹೇಳಿದ್ದಾರೆ.

‘ಆದರೆ, ರಾಷ್ಟ್ರೀಯ ಹಿತಾಸಕ್ತಿಯಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆ ಕುರಿತು ನೀಡುವ ಯಾವುದೇ ಕರೆ ಕೂಡಾ ಕಾಂಗ್ರೆಸ್‌ನವರಿಗೆ ‘ಉಪದೇಶ’ದಂತೆ ತೋರುತ್ತದೆ. ಏಕೆಂದರೆ, ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಮಾತ್ರ ಸೀಮಿತವಾಗಿದ್ದು, ಅವರಿಗೆ ರಾಷ್ಟ್ರ ನಿರ್ಮಾಣದ ಬಗ್ಗೆ ಕಾಳಜಿ ಇಲ್ಲ’ ಎಂದು ಟೀಕಿಸಿದ್ದಾರೆ.

‘ಪ್ರತಿಯೊಂದು ಜಾಗತಿಕ ಬಿಕ್ಕಟ್ಟು ಕೂಡ ಎಲ್ಲ ದೇಶಗಳ ಮೇಲೆ ಪರಿಣಾಮ ಬೀರುತ್ತದೆ. ಇತರ ದೇಶಗಳಲ್ಲಿ ಯುದ್ಧ ನಡೆದಾಗ ಅದು ಹಣದುಬ್ಬರದ ರೂಪದಲ್ಲಿ ಭಾರತದ ಆರ್ಥಿಕತೆಗೆ ಪೆಟ್ಟು ನೀಡುತ್ತದೆ ಎಂದು ಮಾಜಿ ಪ್ರಧಾನಿ ನೆಹರೂ ಅವರೇ ಹೇಳಿದ್ದರು. ಹಾಗಾದಲ್ಲಿ, ನಿಮ್ಮ ಪ್ರೀತಿಯ ನೆಹರೂ ‘ರಾಜಿ ಮಾಡಿಕೊಂಡಿದ್ದ’ ಪ್ರಧಾನಿ ಆಗಿದ್ದರೇ’ ಎಂದು ಪ್ರಶ್ನಿಸಿದ್ದಾರೆ.

ನೆಹರೂ ಅವರದ್ದು ಎಂದು ಹೇಳಲಾದ ವಿಡಿಯೊವನ್ನು ಮಾಳವೀಯ ಹಂಚಿಕೊಂಡಿದ್ದಾರೆ. ಕೊರಿಯಾ ಅಥವಾ ಅಮೆರಿಕದಂತಹ ದೇಶಗಳಲ್ಲಿ ಯುದ್ಧ ನಡೆದಾಗ ಅದು ಭಾರತದ ಮೇಲೂ ಪರಿಣಾಮ ಬೀರುತ್ತದೆ ಎಂದು ನೆಹರೂ ಹೇಳಿರುವುದು ವಿಡಿಯೊದಲ್ಲಿದೆ.

WAN-IFRA | COLOR QUALITY CLUB 2026-2028 | V2

ಸುದ್ದಿ 2 ನಿಮಿಷ

ಕೆನರಾ ಬ್ಯಾಂಕ್ ಲಾಭ ಶೇ 10 ಇಳಿಕೆ

ಬೆಂಗಳೂರು: 2025–26ರ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಕೆನರಾ ಬ್ಯಾಂಕ್‌ನ ನಿವ್ವಳ ಲಾಭದಲ್ಲಿ ಶೇ 10ರಷ್ಟು ಇಳಿಕೆಯಾಗಿದೆ.

2024–25ರಲ್ಲಿ ಬ್ಯಾಂಕ್ ₹5,002 ಕೋಟಿ ಲಾಭ ಗಳಿಸಿತ್ತು. ಅದು ಈ ಬಾರಿ ₹4,506 ಕೋಟಿಗೆ ಇಳಿದಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಸೋಮವಾರ ತಿಳಿಸಿದೆ.

ಬ್ಯಾಂಕ್‌ನ ಒಟ್ಟು ವರಮಾನ ಶೇ 1.85ರಷ್ಟು ಕಡಿಮೆಯಾಗಿದ್ದು, ₹36,662 ಕೋಟಿಯಷ್ಟಾಗಿದೆ. ನಿವ್ವಳ ಬಡ್ಡಿ ವರಮಾನವು ₹9,808 ಕೋಟಿ ಆಗಿದೆ. ಬ್ಯಾಂಕ್‌ನ ವಸೂಲಾಗದ ಸಾಲದ ಸರಾಸರಿ ಪ್ರಮಾಣದಲ್ಲಿ ಸುಧಾರಣೆ ಕಂಡಿದ್ದು, ಶೇ 2.94ರಿಂದ ಶೇ 1.84ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 0.7ರಿಂದ ಶೇ 0.43ಕ್ಕೆ ಇಳಿದಿದೆ.

ಪ್ರತಿ ಈಕ್ವಿಟಿ ಷೇರಿಗೆ ₹4.20 ಲಾಭಾಂಶ ನೀಡಲು ಶಿಫಾರಸು ಮಾಡಲಾಗಿದೆ.

ಕಳೆದ ಪೂರ್ಣ ಆರ್ಥಿಕ ವರ್ಷದಲ್ಲಿ ಬ್ಯಾಂಕ್‌ನ ಲಾಭದಲ್ಲಿ ಶೇ 12.7ರಷ್ಟು ಏರಿಕೆಯಾಗಿದ್ದು, ₹19,187 ಕೋಟಿಯಷ್ಟಾಗಿದೆ. ವರಮಾನವು ₹1.53 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ಬ್ಯಾಂಕ್‌ನ ಒಟ್ಟಾರೆ ಜಾಗತಿಕ ವ್ಯವಹಾರ ಶೇ 12.11ರಷ್ಟು ಹೆಚ್ಚಳವಾಗಿದ್ದು, ₹28.06 ಲಕ್ಷ ಕೋಟಿಯಷ್ಟಾಗಿದೆ. ಠೇವಣಿ ಪ್ರಮಾಣದಲ್ಲಿ ಶೇ 9.71ರಷ್ಟು ಏರಿಕೆ, ಸಾಲ ನೀಡಿಕೆಯಲ್ಲಿ ಶೇ 15.30ರಷ್ಟು ಹೆಚ್ಚಳ ಆಗಿದೆ.

ರಿಟೇಲ್, ಕೃಷಿ ಮತ್ತು ಎಂಎಸ್‌ಎಂಇ ವಲಯಕ್ಕೆ ನೀಡಿರುವ ಸಾಲದಲ್ಲಿ ಶೇ 19.73ರಷ್ಟು ಬೆಳವಣಿಗೆ ಕಂಡಿದ್ದು, ₹7.30 ಲಕ್ಷ ಕೋಟಿಗೆ ತಲುಪಿದೆ. ಗೃಹ ಸಾಲದಲ್ಲಿ ಶೇ 17.55ರಷ್ಟು ಏರಿಕೆಯಾಗಿದ್ದು, ₹1.24 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

Canara Bank

‘ಅಮೆರಿಕ ತಂಡ ಭಾರತಕ್ಕೆ’

ನವದೆಹಲಿ (ಪಿಟಿಐ): ವ್ಯಾಪಾರ ಒಪ್ಪಂದ ಕುರಿತಾಗಿ ಮುಂದಿನ ಸುತ್ತಿನ ಮಾತುಕತೆ ನಡೆಸಲು ಅಮೆರಿಕದ ತಂಡವು ಭಾರತಕ್ಕೆ ಭೇಟಿ ನೀಡುವ ನಿರೀಕ್ಷೆ ಇದೆ. ಆದರೆ, ಭೇಟಿಯ ದಿನಾಂಕ ಅಂತಿಮಗೊಂಡಿಲ್ಲ ಎಂದು ಕೇಂದ್ರ ಸರ್ಕಾರದ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಮಧ್ಯಂತರ ವ್ಯಾಪಾರ ಒಪ್ಪಂದದ ವಿವರಗಳನ್ನು ಅಂತಿಮಗೊಳಿಸಲು ಮತ್ತು ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮಾತುಕತೆಗಳನ್ನು ಮುಂದುವರಿಸಲು ಭಾರತದ ತಂಡವು ಏಪ್ರಿಲ್‌ನಲ್ಲಿ ವಾಷಿಂಗ್ಟನ್‌ಗೆ ಭೇಟಿ ನೀಡಿ, ಅಮೆರಿಕದ ಪ್ರತಿನಿಧಿಗಳ ಜೊತೆ ಮಾತುಕತೆ ನಡೆಸಿತ್ತು.

ಏಪ್ರಿಲ್‌ನಲ್ಲಿ ನಡೆದ ಸಭೆಯ ಬಳಿಕ, ಎರಡೂ ಕಡೆಯವರು ಮಾತುಕತೆ ಮುಂದುವರಿಸಲು ಒಪ್ಪಿದ್ದರು. ಫೆಬ್ರುವರಿ 7ರಂದು ಭಾರತ ಮತ್ತು ಅಮೆರಿಕ ಮಧ್ಯಂತರ ವ್ಯಾಪಾರ ಒಪ್ಪಂದದ ಚೌಕಟ್ಟನ್ನು ಅಂತಿಮಗೊಳಿಸಿವೆ.

ಅಡಿಕೆ ಧಾರಣೆ

ಕುಮಟಾ	
ಚಿಪ್ಪು	32609-35999
ಕೋಕ	17569-35019
ಫ್ಯಾಕ್ಟರಿ	13029-29000
ಹಳೆಚಾಲಿ	46999-49419
ಹೊಸಚಾಲಿ	43569-48099
ಪುತ್ತೂರು	
ಕೋಕ	20000-34500
ಹೊಸತು	30000-47500
ಸಾಗರ	
ಬಿಳಿಗೋಟು	20105-35499
ಚಾಲಿ	36099-43099
ಕೋಕ	10099-37299
ಕೆಂಪುಗೋಟು	16189-39009
ರಾಶಿ	31229-56669
ಸಿಪ್ಪೆಗೋಟು	8099-22499
ಶಿವಮೊಗ್ಗ	
ಸರಕು	43366-68919
ಬೆಟ್ಟೆ	50160-61300
ರಾಶಿ	43899-55799
ಗೊರಬಲು	19010-41211
ಸಿದ್ದಾಪುರ	
ಬಿಳಿಗೋಟು	26109-34999
ಚಾಲಿ	39889-47839
ಕೋಕ	23909-33299
ಕೆಂಪುಗೋಟು	30369-36289
ರಾಶಿ	49809-53789
ತಟ್ಟಿಬೆಟ್ಟೆ	38699-53009
ಶಿರಸಿ	
ಬೆಟ್ಟೆ	43299-51699
ಬಿಳಿಗೋಟು	28219-37300
ಚಾಲಿ	44799-48750
ಕೆಂಪುಗೋಟು	33299-36699
ರಾಶಿ	52799-53930
ಯಲ್ಲಾಪುರ	
ಬಿಳಿಗೋಟು	18212-37799
ಚಾಲಿ	38698-49019
ಕೋಕ	21510-34699
ಕೆಂಪುಗೋಟು	34215-36899
ರಾಶಿ	50699-56399
ತಟ್ಟಿಬೆಟ್ಟೆ	35701-50009

ಯುದ್ಧದಿಂದ ಇಡೀ ಜಗತ್ತಿಗೆ ತೊಂದರೆ: ಕೇಂದ್ರ ಸಚಿವ ಅಶ್ವಿನಿ ವೈಷ್ಣವ್

‘ವಿದೇಶಿ ಮೀಸಲು ಸಂಗ್ರಹ ಉಳಿಸಿ’

ನವದೆಹಲಿ (ಪಿಟಿಐ): ‘ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಸಂಘರ್ಷವು ತಕ್ಷಣದಲ್ಲಿ ನಿಲ್ಲುವಂತೆ ಕಾಣುತ್ತಿಲ್ಲ. ಹೀಗಾಗಿ, ದೇಶದ ನಾಗರಿಕರು ವಿದೇಶಿ ವಿನಿಮಯ ಮೀಸಲನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಲು ಪ್ರಯತ್ನಿಸಬೇಕು’ ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.



ಅಶ್ವಿನಿ ವೈಷ್ಣವ್

‘ನಾವು ಇಂದು ಕಷ್ಟದ ಸಂದರ್ಭದಲ್ಲಿ ಇದ್ದೇವೆ. ನಮ್ಮಿಂದ ಯಾವುದೇ ತಪ್ಪಾಗಿಲ್ಲ. ಆದರೆ, ನಮ್ಮ ನೆರೆಯ ಎರಡು ದೇಶಗಳ ನಡುವಿನ ಯುದ್ಧದಿಂದ ಇಡೀ ಜಗತ್ತು ತೊಂದರೆಗೆ ಒಳಗಾಗಿದೆ. ಯುದ್ಧವು ಈಗಲೂ ನಿರಂತರವಾಗಿ ನಡೆಯುತ್ತಿದ್ದು, ಶಾಂತಿ ಇನ್ನೂ ಬಹುದೂರದಲ್ಲಿದೆ. ಇದು ಬಹಳ ಕಷ್ಟಕರವಾದ ಸಮಯ’ ಎಂದು ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ವ್ಯಾಪಾರ ಶೃಂಗಸಭೆಯಲ್ಲಿ ಸೋಮವಾರ ಹೇಳಿದ್ದಾರೆ.

ಬಿಕ್ಕಟ್ಟಿನ ವೇಳೆ ನಾಗರಿಕರು ಮಹತ್ವದ ಪಾತ್ರ ವಹಿಸಬೇಕಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ವಿದೇಶಿ ವಿನಿಮಯ ಮೀಸಲಿಗೆ ಸಂಬಂಧಿಸಿ ವೆಚ್ಚ ಕಡಿಮೆ ಮಾಡುವಂತೆ ಮನವಿ ಮಾಡಿದ್ದಾರೆ. ನಮ್ಮ ಜೀವನದಲ್ಲಿ, ಕೆಲಸದಲ್ಲಿ ಸಾಧ್ಯವಾದಷ್ಟು ವಿದೇಶಿ ವಿನಿಮಯವನ್ನು ಉಳಿಸಲು ಶ್ರಮಿಸಬೇಕಿದೆ. ಜೊತೆಗೆ, ವಿದೇಶಿ ವಿನಿಮಯ ಮೀಸಲು ಸಂಗ್ರಹವನ್ನು ಹೆಚ್ಚಿಸಿಕೊಳ್ಳಬೇಕಾದ ಅಗತ್ಯವಿದೆ ಎಂದು ವೈಷ್ಣವ್ ಹೇಳಿದ್ದಾರೆ.

ಪೆಟ್ರೋಲ್ ಮತ್ತು ಡೀಸೆಲ್ ಕಡಿಮೆ ಬಳಸಿ. ಮೆಟ್ರೊ, ಕಾರ್ ಪೂಲಿಂಗ್, ಗರಿಷ್ಠ ಪ್ರಮಾಣದಲ್ಲಿ ವಿದ್ಯುತ್ ಚಾಲಿತ ವಾಹನಗಳನ್ನು ಬಳಸುವುದು, ಪಾರ್ಸೆಲ್‌ಗಳನ್ನು ಸಾಗಿಸಲು ರೈಲು ಸೇವೆಯನ್ನು ಬಳಸುವುದು ಮತ್ತು ಮನೆಯಿಂದಲೇ ಕೆಲಸ ಮಾಡುವ ಮೂಲಕ ವಿದೇಶಿ ವಿನಿಮಯ ಮೀಸಲು ಸಂಗ್ರಹವನ್ನು ಉಳಿಸುವಂತೆ ದೇಶದ ಜನರಿಗೆ ಪ್ರಧಾನಿ ಮೋದಿ ಅವರು ಭಾನುವಾರ ಕರೆ ನೀಡಿದ್ದರು.

ಸಂಘರ್ಷ: ₹3.59 ಲಕ್ಷ ಕೋಟಿ ವಿದೇಶಿ ವಿನಿಮಯ ಸಂಗ್ರಹ ಇಳಿಕೆ

ಮುಂಬೈ (ಪಿಟಿಐ): ಪಶ್ಚಿಮ ಏಷ್ಯಾ ಸಂಘರ್ಷ ಆರಂಭವಾದ ಬಳಿಕ (ಫೆ.28) ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಅಂದಾಜು ₹3.59 ಲಕ್ಷ ಕೋಟಿಯಷ್ಟು ಇಳಿಕೆ ಆಗಿದೆ.



ಸಂಘರ್ಷ ಆರಂಭವಾಗುವ ಮುನ್ನಾ ದಿನವಾದ ಫೆಬ್ರುವರಿ 27ರಂದು ವಿದೇಶಿ ವಿನಿಮಯ ಮೀಸಲು ಸಂಗ್ರಹವು ₹69.35 ಲಕ್ಷ ಕೋಟಿ (728 ಬಿಲಿಯನ್ ಡಾಲರ್) ಇತ್ತು. ಆದರೆ, ಮೇ 1ರ ವೇಳೆಗೆ ಈ ಸಂಗ್ರಹವು ₹65.76 ಲಕ್ಷ ಕೋಟಿಗೆ (690 ಬಿಲಿಯನ್ ಡಾಲರ್) ಕುಸಿದಿದೆ ಎಂದು ಆರ್‌ಬಿಐನ ಅಂಕಿ–ಅಂಶಗಳು ತಿಳಿಸಿವೆ.

ಸಂಘರ್ಷದಿಂದ ರೂಪಾಯಿ ಮೇಲೆ ಒತ್ತಡ ಸೃಷ್ಟಿಯಾಯಿತು. ರೂಪಾಯಿ ಮೌಲ್ಯದ ಕುಸಿತವನ್ನು ತಡೆಗಟ್ಟಲು ಆರ್‌ಬಿಐ ಡಾಲರ್ ಮಾರಾಟಕ್ಕೆ ಮುಂದಾಯಿತು. ಇದರಿಂದ ಸಂಗ್ರಹ ಇಳಿಕೆ ಆಗಿದೆ ಎಂದು ತಿಳಿಸಿದೆ.

‘ಪ್ರಧಾನಿ ಅವರ ಉದ್ಯಮಿ ಸ್ನೇಹಿತನಿಗೆ ಮಾತ್ರ ಅನುಕೂಲ’

ನವದೆಹಲಿ (ಪಿಟಿಐ): ‘ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನಾಲ್ಕು ಕಾರ್ಮಿಕ ಕಾನೂನುಗಳು ಪ್ರಧಾನಿ ನರೇಂದ್ರ ಮೋದಿ ಅವರ ಕೈಗಾರಿಕೋದ್ಯಮಿ ಸ್ನೇಹಿತನಿಗೆ ಮಾತ್ರವೇ ಅನುಕೂಲ ಮಾಡಿಕೊಡಲಿವೆ. ಸ್ವಾತಂತ್ರ್ಯ ನಂತರದಲ್ಲಿ ಯಾವತ್ತೂ ಕಾರ್ಮಿಕರ ಹಕ್ಕುಗಳಿಗೆ ಇಷ್ಟೊಂದು ಧಕ್ಕೆಯಾಗಿರಲಿಲ್ಲ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.



ಮಲ್ಲಿಕಾರ್ಜುನ ಖರ್ಗೆ

ಈ ಬಗ್ಗೆ ಸೋಮವಾರ ಹೇಳಿಕೆ ಬಿಡುಗಡೆ ಮಾಡಿರುವ ಖರ್ಗೆ, ‘ಕಾರ್ಮಿಕ ವಿರೋಧಿಯಾದ ಈ ಕಾನೂನುಗಳನ್ನು ಜಾರಿ ಮಾಡಲು ಅಧಿಸೂಚನೆ ಹೊರಡಿಸುವುದಕ್ಕಾಗಿ ಮೋದಿ ಸರ್ಕಾರವು ವಿಧಾನಸಭೆಗಳಿಗೆ ನಡೆದ ಚುನಾವಣೆ ಫಲಿತಾಂಶ ಹೊರಬರುವುದನ್ನೇ ಕಾಯುತ್ತಿತ್ತು’ ಎಂದು ದೂರಿದರು.

ಮೇ 8 ಮತ್ತು 9ರಂದು ಕೇಂದ್ರ ಸರ್ಕಾರವು ವಿವಿಧ ಗೆಜೆಟ್ ಅಧಿಸೂಚನೆ ಪ್ರಕಟಿಸಿ, ನಾಲ್ಕು ಕಾರ್ಮಿಕ ಕಾನೂನುಗಳನ್ನು ಜಾರಿಗೆ ತಂದಿದೆ. ‘ಯಾರೊಂದಿಗೂ ಚರ್ಚಿಸದೆಯೇ ಕಾನೂನು ಜಾರಿ ಮಾಡಲಾಗಿದೆ. 2015ರಿಂದ ಈಚೆಗೆ ಒಮ್ಮೆಯೂ ಭಾರತೀಯ ಕಾರ್ಮಿಕ ಸಮಾವೇಶವನ್ನು ಆಯೋಜಿಸಲಿಲ್ಲ’ ಎಂದು ಖರ್ಗೆ ಹೇಳಿದರು.

‘ಕಚ್ಚಾತೈಲ ದುಬಾರಿಯಾದರೂ ಜನರಿಗೆ ಹೊರೆ ಆಗದಂತೆ ಕ್ರಮ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಇಂಧನ ವಿಷಯದಲ್ಲಿ ಇಡೀ ಜಗತ್ತಿನಲ್ಲಿ ಸಮಸ್ಯೆ ಎದುರಾಗಿದೆ. ಆದರೆ, ದೇಶದಲ್ಲಿ ಯಾವುದೇ ಸಮಸ್ಯೆ ಆಗದಂತೆ ಕೇಂದ್ರ ಸರ್ಕಾರ ಎಚ್ಚರಿಕೆ ವಹಿಸಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಮತ್ತು ಎಲ್‌ಪಿಜಿ ದರ ಏರಿಕೆಯಾದರೂ ಕೇಂದ್ರ ಸರ್ಕಾರವು ಅದನ್ನು ಭರಿಸಿ, ಜನರಿಗೆ ಅನುಕೂಲ ಮಾಡಿದೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.



ಪ್ರಲ್ಹಾದ ಜೋಶಿ

‘ಶಕ್ತಿಯ ಮೂಲಗಳ ನಿರ್ವಹಣೆ ವಿಷಯದಲ್ಲಿ ದೇಶದಲ್ಲಿ ಸಾಕಷ್ಟು ಪರ್ಯಾಯ ಕ್ರಮ ಕೈಗೊಳ್ಳಲಾಗಿದೆ. ವಿದೇಶಿ ವಿನಿಮಯದ ವಿಷಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ ಕರೆಯನ್ನು ದೇಶದ ಜನರು ಪಾಲಿಸುವರು ಎಂಬ ವಿಶ್ವಾಸವಿದೆ’ ಇದೆ’ ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

‘ನಾನು ಇಂಧನ ಸಮಿತಿಯ ಸದಸ್ಯನಾಗಿದ್ದು, ಕಚ್ಚಾತೈಲ ಮತ್ತು ಎಲ್‌ಪಿಜಿಗೆ ಸಂಬಂಧಿಸಿದ ವಾಸ್ತವ ಸಮಸ್ಯೆ ಗೊತ್ತಿದೆ. ಮುಂದಿನ ದಿನಗಳಲ್ಲಿ ಯಾವುದೇ ಸಮಸ್ಯೆ ತಲೆದೋರಿದರೂ ಅದನ್ನು ದೇಶವು ಸಮರ್ಥವಾಗಿ ಎದುರಿಸುತ್ತದೆ’ ಎಂದರು.

ಕಳವಳ ಮೂಡಿಸಿದ ಪ್ರಧಾನಿ ಸಲಹೆ

ಒಂದನೇ ಪುಟದಿಂದ...

ದೇಶದ ಹಣಕಾಸಿನ ಪರಿಸ್ಥಿತಿಯು ಬಿಗುವಿನ ಸ್ಥಿತಿ ತಲುಪಿದೆ ಎಂಬುದನ್ನು ಮೋದಿ ಅವರ ಕರೆಯು ಸೂಚಿಸುತ್ತಿದೆ ಎಂದು ಜಪಾನ್‌ನ ಹಣಕಾಸು ಸೇವಾ ಸಂಸ್ಥೆ ನೊಮುರ ಹೇಳಿದೆ.

ಭಾರತದ ಚಾಲ್ತಿ ಖಾತೆ ಕೊರತೆಯು (ಸಿಎಡಿ) ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಶೇ 2.4ಕ್ಕೆ ಹೆಚ್ಚಬಹುದು ಎಂದು ನೊಮುರ ಅಂದಾಜಿಸಿದೆ. ಅಲ್ಲದೆ, ದೇಶದ ವಿತ್ತೀಯ ಕೊರತೆಯು ಒಟ್ಟು ಜಿಡಿಪಿಯ ಶೇ 4.6ಕ್ಕೆ ತಲುಪಬಹುದು ಎಂದೂ ಎಚ್ಚರಿಸಿದೆ. ವಿತ್ತೀಯ ಕೊರತೆ ಜಿಡಿಪಿಯ ಶೇ 4.3ರಷ್ಟು ಇರಬಹುದು ಎಂದು ಬಜೆಟ್ ಅಂದಾಜಿನಲ್ಲಿ ಹೇಳಲಾಗಿದೆ.

ಕಚ್ಚಾ ತೈಲ ಖರೀದಿ, ಚಿನ್ನದ ಆಮದಿಗಾಗಿ ಹೆಚ್ಚು ವೆಚ್ಚ ಮಾಡುತ್ತಿರುವುದು, ರೂಪಾಯಿ ಮೌಲ್ಯ ದುರ್ಬಲಗೊಳ್ಳುತ್ತಿರುವುದು ಸಿಎಡಿ ಹೆಚ್ಚುತ್ತಿರುವುದಕ್ಕೆ ಮುಖ್ಯ ಕಾರಣಗಳಾಗಿವೆ. ಸಿಎಡಿ ಹೆಚ್ಚುತ್ತಿರುವುದು ಅಂದರೆ ದೇಶವು ವಿದೇಶಿ ವಿನಿಮಯ ಗಳಿಸುವುದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಖರ್ಚು ಮಾಡುವುದಾಗಿದೆ.

‘ಈಗ ದೇಶದ ಹಣಕಾಸಿನ ಸ್ಥಿತಿ ಚೆನ್ನಾಗಿಯೇ ಇದೆ. ವಿದೇಶಿ ವಿನಿಮಯ ಮೀಸಲು ಸಂಗ್ರಹವು ಆರೋಗ್ಯಕರವಾಗಿದೆ. ಇದು ಸರ್ಕಾರಕ್ಕೆ ಕಚ್ಚಾ ತೈಲ ದುಬಾರಿ ಆಗಿರುವುದರ ಪರಿಣಾಮವನ್ನು ನಿಭಾಯಿಸಲು ಸಹಾಯ ಮಾಡುತ್ತಿದೆ. ಆದರೆ ಸಂಘರ್ಷವು ದೀರ್ಘಾವಧಿಗೆ ಮುಂದುವರಿದರೆ ಅರ್ಥ ವ್ಯವಸ್ಥೆ ಮೇಲಿನ ಒತ್ತಡ ಹೆಚ್ಚಾಗುತ್ತದೆ’ ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬೆಲೆ ಏರಿಕೆ ಸಾಧ್ಯತೆ

- ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಕಂಪನಿಗಳು ದಿನವೊಂದಕ್ಕೆ ₹1,700 ಕೋಟಿ ನಷ್ಟ ಅನುಭವಿಸುತ್ತಿವೆ
- ಪೆಟ್ರೋಲ್, ಡೀಸೆಲ್ ಬೆಲೆಯು ಶೀಘ್ರದಲ್ಲಿಯೇ ಹೆಚ್ಚಬಹುದು ಎಂದು ಮೂಲವೊಂದು ತಿಳಿಸಿದೆ
- ಇಂಧನ ಬೆಲೆಯು ಶೇ 10ರಷ್ಟು ಜಾಸ್ತಿ ಆದರೆ ಹಣದುಬ್ಬರ ಪ್ರಮಾಣ ಶೇ 0.5ರಷ್ಟು ಜಾಸ್ತಿ ಆಗುತ್ತದೆ

ಚಾಲ್ತಿ ಖಾತೆ ಕೊರತೆ ಪರಿಣಾಮ

- ತೈಲ, ಚಿನ್ನದ ಆಮದಿಗೆ ವಿದೇಶಿ ವಿನಿಮಯವನ್ನು ಸರ್ಕಾರ ಹೆಚ್ಚು ಬಳಸಿದಂತೆಲ್ಲ, ಸಂಗ್ರಹವು ಕಡಿಮೆ ಆಗುತ್ತದೆ. ಇದು ಹೂಡಿಕೆದಾರರನ್ನು ಭೀತಿಗೆ ಸಿಲುಕಿಸುತ್ತದೆ.
- ಆಮದು ವೆಚ್ಚಕ್ಕಾಗಿ ದೇಶದಿಂದ ಹಣದ ಹೊರಹರಿವು ಹೆಚ್ಚಾದಷ್ಟೂ ರೂಪಾಯಿ ದುರ್ಬಲವಾಗುತ್ತದೆ. ಇದರಿಂದಾಗಿ ಆಮದು ಇನ್ನಷ್ಟು ದುಬಾರಿ ಆಗುತ್ತದೆ

ವಿಹಾರನೌಕೆಯಿಂದ 22 ಮಂದಿ ಹೊರಕ್ಕೆ

ಗ್ರನಾಡಿಲ್ಲಾ ಡಿ ಅಬೋನಾ (ಸ್ಪೇನ್)/ ಪ್ಯಾರಿಸ್, (ಫ್ರಾನ್ಸ್), (ಎಎಫ್‌ಪಿ): ಹಂಟಾವೈರಸ್ ಪೀಡಿತರಿದ್ದ ಐಷಾರಾಮಿ ವಿಹಾರ ನೌಕೆಯಿಂದ ಅಂತಿಮವಾಗಿ 22 ಜನರು ಸೋಮವಾರ ಕೆಳಗಿಳಿದಿದ್ದಾರೆ.

ಎರಡು ಪ್ರತ್ಯೇಕ ವಿಶೇಷ ವಿಮಾನಗಳಲ್ಲಿ ಸ್ಥಳಾಂತಗೊಳ್ಳಬೇಕಿದ್ದ ಇವರೆಲ್ಲರೂ ನೆದರ್ಲೆಂಡ್‌ಗೆ ಒಂದೇ ವಿಮಾನದಲ್ಲಿ ತೆರಳಲಿದ್ದಾರೆ ಎಂದು ಸ್ಪೇನ್‌ನ ಆರೋಗ್ಯ ಸಚಿವರಾದ ಮೋನಿಕಾ ಗಾರ್ಸಿಯಾ ಅವರು ತಿಳಿಸಿದ್ದಾರೆ.

ಆಸ್ಟ್ರೇಲಿಯಾದ ಪ್ರಜೆಗಳನ್ನು ಸಹ ನೆದರ್ಲೆಂಡ್‌ಗೆ ಇದೇ ವಿಮಾನದಲ್ಲಿ ಕಳುಹಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಎಂಟು ಪ್ರಕರಣ ದೃಢ: ಐಷಾರಾಮಿ ವಿಹಾರ ನೌಕೆ ‘ಎಂವಿ ಹೊಂಡಿಯಸ್’ನಲ್ಲಿನ ಹಂಟಾವೈರಸ್ ಪೀಡಿತರು ಯಾವ ದೇಶಗಳಿಗೆ ಸೇರಿದವರು ಎಂಬುದನ್ನು ದೃಢಪಡಿಸಲಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ.

ಎಂಟು ಪ್ರಕರಣಗಳನ್ನು ದೃಢಪಡಿಸಲಾಗಿದ್ದು, ಎರಡು ಪ್ರಕರಣಗಳನ್ನು ‘ಶಂಕಿಸಲಾಗಿದೆ’ ಎಂದು ಪಟ್ಟಿ ಮಾಡಿದೆ.

ಆರು ದೇಶಗಳ ನಾಗರಿಕರು ವೈರಸ್ ಸೋಂಕಿನ ಪರಿಣಾಮ ಎದುರಿಸಿದ್ದಾರೆ. ಡಚ್‌ನ ದಂಪತಿ ಹಾಗೂ ಜರ್ಮನಿಯ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ ಎಂದಿದೆ.

ಬ್ರಿಟನ್‌ನ ಮೂವರು, ಡಚ್ ಹಾಗೂ ಸ್ವಿಟ್ಜರ್ಲೆಂಡ್‌ನ ತಲಾ ಒಬ್ಬರು, ಫ್ರಾನ್ಸ್‌ನ ಮಹಿಳೆ ಸೋಂಕು ಪೀಡಿತರಾಗಿದ್ದಾರೆ. ಅಮೆರಿಕದ 17 ಪ್ರಯಾಣಿಕರಲ್ಲಿ ಒಬ್ಬರಲ್ಲಿ ಹಂಟಾವೈರಸ್ ದೃಢಪಟ್ಟಿದ್ದರೆ, ಮತ್ತೊಬ್ಬರಲ್ಲಿ ಸೌಮ್ಯ ಲಕ್ಷಣಗಳು ಕಂಡುಬಂದಿವೆ ಎಂದು ತಿಳಿಸಿದೆ.

ಸ್ಕಾಟ್‌ಲೆಂಡ್ ಸಂಸತ್ತು: ಭಾರತೀಯ ವಿದ್ಯಾರ್ಥಿ ಆಯ್ಕೆ

ಲಂಡನ್ (ಪಿಟಿಐ): ವಿದ್ಯಾರ್ಥಿ ವೀಸಾದಲ್ಲಿ ನಾಲ್ಕು ವರ್ಷಗಳಿಗಾಗಿ ಸ್ಕಾಟ್‌ಲೆಂಡ್‌ಗೆ ತೆರಳಿದ್ದ ಪಿಎಚ್.ಡಿ ವಿದ್ಯಾರ್ಥಿಯಾದ ತಮಿಳುನಾಡಿನ ಕ್ಯೂ. ಮಣಿವಣ್ಣನ್ ಈಗ ಸ್ಕಾಟ್‌ಲೆಂಡ್‌ನ ಸಂಸದರಾಗಿ ಆಯ್ಕೆಯಾಗಿದ್ದಾರೆ.

‘ನನ್ನ ಹೆಸರು ಡಾ. ಕ್ಯೂ. ಮಣಿವಣ್ಣನ್. ನಾನು ತಮಿಳುನಾಡಿನಿಂದ ವಲಸೆ ಬಂದಿರುವ ಲಿಂಗತ್ವ ಅಲ್ಪಸಂಖ್ಯಾತ. ನನ್ನನ್ನು ಅವರು ಎಂದು ಕರೆಯಲಾಗುತ್ತದೆ’ ಎಂದು ಜನರ ಮುಂದೆ ತನ್ನನ್ನು ಪರಿಚಯಿಸಿಕೊಳ್ಳುತ್ತಾ ವಲಸೆ, ಅಸ್ಮಿತೆ ಕುರಿತಾಗಿ ಮಾತನಾಡಿದ್ದ ಮಣಿವಣ್ಣನ್, ಜನರ ಮೆಚ್ಚುಗೆ ಪಡೆದರು.

ಷರತ್ತು ತಿರಸ್ಕರಿಸಿದ ಅಮೆರಿಕ: ಮುಂದುವರಿದ ಬಿಕ್ಕಟ್ಟು

ಟೆಹರಾನ್ (ಎಎಫ್‌ಪಿ): ಪಶ್ಚಿಮ ಏಷ್ಯಾ ಯುದ್ಧ ಕೊನೆಗೊಳಿಸುವ ಕುರಿತ ಇರಾನ್‌ನ ಷರತ್ತುಗಳನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ತಿರಸ್ಕರಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಟ್ರಂಪ್

ಯುದ್ಧವನ್ನು ಕೊನೆಗೊಳಿಸುವ ಕುರಿತು ಅಮೆರಿಕದ ಪ್ರಸ್ತಾವಕ್ಕೆ ಇರಾನ್ ನೀಡಿದ್ದ ಪ್ರತಿಕ್ರಿಯೆ, ಷರತ್ತುಗಳನ್ನು ತಿರಸ್ಕರಿಸಿರುವುದಾಗಿ ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

‘ಇರಾನ್ ಪ್ರತಿನಿಧಿಗಳ ಪ್ರತಿಕ್ರಿಯೆಯನ್ನು ಈಗಷ್ಟೇ ಗಮನಿಸಿದ್ದೇನೆ. ಅದು ನನಗೆ ಇಷ್ಟವಾಗಲಿಲ್ಲ. ಅದು ಸಂಪೂರ್ಣವಾಗಿ ಸ್ವೀಕಾರಾರ್ಹವಲ್ಲ!’ ಎಂದು ಪೋಸ್ಟ್‌ನಲ್ಲಿ ಹೇಳಿದ್ದಾರೆ.

ಇದರ ನಡುವೆಯೇ ಕಚ್ಚಾ ತೈಲ ಬೆಲೆ ಸೋಮವಾರ ಬ್ಯಾರಲ್‌ಗೆ ಶೇ 4.65ರಷ್ಟು ಏರಿಕೆಯಾಗಿದ್ದು, ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ಆತಂಕ ಸೃಷ್ಟಿಸಿದೆ.

ಆಸ್ತಿ, ದಿಗ್ಬಂಧನ ತೆರವಿಗೆ ಇರಾನ್ ಆಗ್ರಹ: ವಿದೇಶಗಳಲ್ಲಿ ಸಿಲುಕಿರುವ ಇರಾನ್ ಜನರ ಆಸ್ತಿಯನ್ನು ಬಿಡುಗಡೆಗೊಳಿಸಬೇಕು, ತನ್ನ ಬಂದರುಗಳ ಮೇಲೆ ಅಮೆರಿಕ ಹೇರಿರುವ ದಿಗ್ಬಂಧನವನ್ನು ಕೊನೆಗೊಳಿಸಬೇಕು ಮತ್ತು ಯುದ್ಧವನ್ನು ಪೂರ್ಣ ಪ್ರಮಾಣದಲ್ಲಿ ನಿಲ್ಲಿಸಬೇಕು ಎಂದು ಇರಾನ್ ಸೋಮವಾರ ಆಗ್ರಹಿಸಿದೆ. ತನ್ನ ಷರತ್ತುಗಳನ್ನು ಅಮೆರಿಕ ಅಧ್ಯಕ್ಷ ಟ್ರಂಪ್ ತಿರಸ್ಕರಿಸಿದ ಬೆನ್ನಲ್ಲೇ ಈ ಕುರಿತು ಇರಾನ್ ಒತ್ತಾಯಿಸಿದೆ.

ಈ ಸಂಬಂಧ ಪ್ರತಿಕ್ರಿಯಿಸಿದ ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಕಾಯಿ, ನಾವು ಯಾವುದೇ ರಿಯಾಯಿತಿ ಕೇಳುತ್ತಿಲ್ಲ, ನಮ್ಮ ಕಾನೂನುಬದ್ಧ ಹಕ್ಕುಗಳನ್ನು ಕೇಳುತ್ತಿದ್ದೇವೆ’ ಎಂದಿದ್ದಾರೆ.

ಇನ್ನೂ ಮುಗಿದಿಲ್ಲ– ನೆತನ್ಯಾಹು: ಇರಾನ್‌ನ ಪರಮಾಣು ಸೌಲಭ್ಯಗಳು ಪೂರ್ಣ ನಾಶವಾಗುವವರೆಗೆ ಸಂಘರ್ಷ ಕೊನೆಗೊಳ್ಳುವುದಿಲ್ಲ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

‘ಇದು ಇನ್ನೂ ಮುಗಿದಿಲ್ಲ. ಏಕೆಂದರೆ ಇರಾನ್‌ನಲ್ಲಿರುವ ಸಮೃದ್ಧೀಕರಿಸಿದ ಯುರೇನಿಯಂ ಅನ್ನು ಹೊರತೆಗೆಯಬೇಕಿದೆ’ ಎಂದು ಅವರು ಅಮೆರಿಕದ ಮಾಧ್ಯಮಕ್ಕೆ ಪ್ರತಿಕ್ರಿಯಿಸಿದ್ದಾರೆ.

ಮೇ 13ರಿಂದ 15ರವರೆಗೆ ಟ್ರಂಪ್ ಚೀನಾ ಪ್ರವಾಸ

ಬೀಜಿಂಗ್ (ಪಿಟಿಐ): ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಆಹ್ವಾನದ ಮೇರೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇದೇ ಮೇ 13ರಿಂದ 15ರವರೆಗೆ ಚೀನಾ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರರು ತಿಳಿಸಿದ್ದಾರೆ.

ಕಳೆದ ಒಂಬತ್ತು ವರ್ಷಗಳಲ್ಲಿಯೇ ಅಮೆರಿಕ ಅಧ್ಯಕ್ಷರೊಬ್ಬರು ಚೀನಾಕ್ಕೆ ಭೇಟಿ ನೀಡುತ್ತಿರುವುದು ಇದೇ ಮೊದಲು. ಟ್ರಂಪ್ ಅವರು ಮೊದಲ ಅವಧಿ ಅಧ್ಯಕ್ಷರಾಗಿದ್ದ ವೇಳೆಯೂ ಚೀನಾಕ್ಕೆ ಭೇಟಿ ನೀಡಿದ್ದರು.

ಟ್ರಂಪ್ ಹತ್ಯೆ ಯತ್ನ: ‘ನಿರಪರಾಧಿ’ ಎಂದ ಆರೋಪಿ

ವಾಷಿಂಗ್ಟನ್ (ರಾಯಿಟರ್ಸ್): ಶ್ವೇತಭವನದಲ್ಲಿ ಕಳೆದ ತಿಂಗಳು ನಡೆದಿದ್ದ ವರದಿಗಾರರ ಔತಣಕೂಟದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹತ್ಯೆಗೆ ಯತ್ನಿಸಿದ್ದ ಆರೋಪಿಯು ತಾನು ನಿರಪರಾಧಿ ಎಂದು ನ್ಯಾಯಾಲಯದ ಎದುರು ವಕೀಲರ ಮೂಲಕ ಸೋಮವಾರ ವಾದ ಮಂಡಿಸಿದ್ದಾರೆ.

ಆರೋಪಿ ಕೋಲ್ ಅಲೆನ್(31) ನ್ಯಾಯಾಲಯದಲ್ಲಿ ಏನೂ ಮಾತನಾಡಲಿಲ್ಲ, ಅವರ ಪರವಾಗಿ ಅವರ ವಕೀಲರು ಅರ್ಜಿ ಸಲ್ಲಿಸಿದರು. ಟ್ರಂಪ್ ಹತ್ಯೆ ಯತ್ನದ ವೇಳೆ ಅಲೆನ್ ಅವರು ಅಮೆರಿಕ ಗುಪ್ತಚರ ಸೇವೆಯ ಏಜೆಂಟ್ ಮೇಲೆ ಗುಂಡು ಹಾರಿಸಿದ್ದಾರೆ ಮತ್ತು ಭದ್ರತಾ ತಪಾಸಣಾ ಕೇಂದ್ರಕ್ಕೆ ನುಗ್ಗಿದ್ದಾರೆ ಎಂದು ಪ್ರಾಸಿಕ್ಯೂಟರ್ ಆರೋಪಿಸಿದ್ದಾರೆ.

ಭಿನ್ನ ಜಾನರ್‌ಗಳತ್ತ ವಿಜಯ್ ಚಿತ್ತ

• ಅಭಿಲಾಷ್ ಪಿ.ಎಸ್.


ದುನಿಯಾ ವಿಜಯ್

ದುನಿಯಾ ವಿಜಯ್ ಸದ್ಯ ತಮ್ಮ ನಿರ್ದೇಶನದ 'ಸಿಟಿ ಲೈಟ್ಸ್' ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ನಿರ್ದೇಶಿಸಿದ ಎರಡು ಸಿನಿಮಾಗಳಲ್ಲಿ ಭೂಗತ ಲೋಕ, ಮಾದಕವಸ್ತು ವಿಷಯಗಳನ್ನೆತ್ತಿಕೊಂಡಿದ್ದ ಅವರು ಹೊಸ ವಿಷಯಗಳನ್ನಿಟ್ಟುಕೊಂಡು ಸಿನಿಮಾ ಮಾಡುವತ್ತಲೂ ಚಿತ್ತ ಹರಿಸಿದ್ದಾರೆ. ಇತ್ತೀಚೆಗೆ 'ಸಿಟಿ ಲೈಟ್ಸ್' ಸಿನಿಮಾದ 'ಬಾವ ಬಾವ' ಹಾಡು ಬಿಡುಗಡೆ ಸಂದರ್ಭದಲ್ಲಿ ಮಾತಿಗೆ ಸಿಕ್ಕ ಅವರು ತಮ್ಮ ನಿರ್ದೇಶನದ ಬಗ್ಗೆ, ಇಂದಿನ ಝೆನ್-ಜಿ ಪೀಳಿಗೆಯನ್ನು ಗುರಿಯಾಗಿಸಿಕೊಂಡು ಮಾಡುತ್ತಿರುವ ಸಿನಿ ಪ್ರಯೋಗದ ಬಗ್ಗೆ ಮಾತಿಗಿಳಿದಾಗ...

'ಸಿನಿಮಾದ ಶೀರ್ಷಿಕೆಯ 'ಶಬ್ದ' ಕೇಳುಗರಿಗೆ ಇಷ್ಟವಾಗಬೇಕು. ಇವತ್ತಿನ ಪೀಳಿಗೆಗೆ (ಝೆನ್-ಜಿ) ಇಂತಹ ಶೀರ್ಷಿಕೆಗಳು ಸೆಳೆಯುತ್ತವೆ. ಇವತ್ತಿನ ಮಕ್ಕಳ ವೇಗ ತೀವ್ರತರವಾದದ್ದು. ಎಲ್ಲವನ್ನೂ ಗೂಗಲ್‌ನಲ್ಲೇ ಕೇಳಿಕೊಂಡು ಹೆಜ್ಜೆ ಇಡುವವರು. ಈ ಝೆನ್-ಜಿ ಪೀಳಿಗೆಗೆ ಏನು ಹೇಳಬಹುದು ಎನ್ನುವುದು ಸದಾ ನನ್ನೊಳಗೆ ಕೊರೆಯುತ್ತಿರುತ್ತದೆ. ನನ್ನ ಸಿನಿಮಾಗಳ 'ರ್‍ಯಾಪ್' ಹಾಡುಗಳು ಇವರನ್ನೇ ಗುರಿಯಾಗಿಸಿಕೊಂಡು ಮಾಡಿರುವಂಥದ್ದು. ಈ ಝೆನ್-ಜಿ ಪೀಳಿಗೆಯನ್ನು ನೋಡಿಕೊಂಡು ಸಿನಿಮಾ ಮಾಡಬೇಕಿದೆ. ಪ್ರೇಕ್ಷಕರೇ ನಮಗೆ ದೇವರ ರೀತಿ. ಅವರು ಒಳಗೆ ಬರಬೇಕು ಎಂದರೆ ಏನಾದರೂ ಭಿನ್ನ ಕಥೆಯನ್ನು ಹೇಳಬೇಕು. ಈ ಪೀಳಿಗೆಯನ್ನು ಚಿತ್ರಮಂದಿರಗಳ ಒಳಗೆ ಹೆಜ್ಜೆ ಇಡುವಂತೆ ಮಾಡುವುದೇ ಒಂದು ಸವಾಲು. ಅವರನ್ನು ಒಳಕರೆದು 'ಒಂದು ಕೌಟುಂಬಿಕ ಕಥೆ ಹೇಳುತ್ತೇನೆ' ಎಂದರೆ ತಿರಸ್ಕರಿಸುತ್ತಾರೆಯೇ ಎಂಬುವುದು ಒಂದು ರೀತಿಯ ಭಯ' ಎನ್ನುತ್ತಾರೆ ವಿಜಯ್.

ಅಭಿರುಚಿ ತದ್ವಿರುದ್ಧ

'ಹಾಡುಗಳ ವಿಷಯದಲ್ಲಿ ನನ್ನ ಅಭಿರುಚಿ ತದ್ವಿರುದ್ಧ. ನನ್ನ ಸಿನಿಮಾದೊಳಗೆ ರ್‍ಯಾಪ್ ಹಾಡುಗಳಿದ್ದರೂ, ನನಗೆ ಗಣೇಶ್ ಅವರ 'ಮುಂಗಾರು ಮಳೆಯೇ..' ರೀತಿಯ ಮೆಲೊಡಿ ಹಾಡುಗಳು ಬಹಳ ಇಷ್ಟ. 'ಸಲಗ'ದಲ್ಲಿ ಎರಡೂ ಮಾದರಿ ಹಾಡುಗಳಿದ್ದವು. 'ಭೀಮ'ದಲ್ಲಿ ಕಥೆಯ ವಿಷಯ ಮೆಲೊಡಿ ಹಾಡುಗಳಿಗೆ ಅವಕಾಶ ನೀಡಲಿಲ್ಲ. 'ಸಿಟಿ ಲೈಟ್ಸ್'ನಲ್ಲಿ ಮೆಲೊಡಿ ಹಾಡುಗಳೂ ಇವೆ. 'ಸಲಗ'ದಿಂದ ಹಿಡಿದು 'ಸಿಟಿ ಲೈಟ್ಸ್'ವರೆಗೆ ನೈಜ ಘಟನೆ ಆಧಾರಿತ ಕಥೆಗಳನ್ನು ಮಾಡಿದ್ದೇನೆ. ಆದರೆ ಆ ಘಟನೆಗಳನ್ನು, ವ್ಯಕ್ತಿಗಳನ್ನು ನಾನು ಬಹಿರಂಗಪಡಿಸಲು ಹೋಗುವುದಿಲ್ಲ. ಬೆಂಗಳೂರನ್ನು ಕೆಲ ದಶಕಗಳಿಂದ ನೋಡಿದ್ದೇನೆ. ಈಗಾಗಲೇ ಮಾಡಿದ ಕಥೆಗಳು ಇಲ್ಲಿಯದ್ದೇ. ಇಲ್ಲಿ ಮೋಸಗಾರರು ಜಾಸ್ತಿ ಮೋಸ ಮಾಡುವುದನ್ನು ಕಲಿತಿದ್ದಾರೆ. ಅವರಿಗೇ ಈ ಕಾಲ. ಮೋಸ ಹೋಗುವವರು ಮೋಸ ಹೋಗುತ್ತಲೇ ಇದ್ದಾರೆ' ಎಂದರು ವಿಜಯ್.

ಬೇರೆ ಜಾನರ್‌ಗಳನ್ನು ಮಾಡುವಾಸೆ

'ನಿರ್ದೇಶನ ಎನ್ನುವುದು ಬಹಳ ಸಮಯ ತೆಗೆದುಕೊಳ್ಳುವುದು ಸಹಜ. ತಕ್ಷಣದಲ್ಲೇ ಅಡುಗೆ ಮಾಡಲು ಸಾಧ್ಯವಿಲ್ಲ. ನಾನು ಯಾವತ್ತೂ ಒತ್ತಡ ಹೇರಿಕೊಂಡು, ಕೆಲಸಗಳನ್ನು ಮೈಮೇಲೆ ಎಳೆದುಕೊಂಡು, ದುಡ್ಡಿಗೆ ದುರಾಸೆಪಟ್ಟು ಕೆಲಸ ಮಾಡಿದವನಲ್ಲ. ನೆಮ್ಮದಿ ಬೇಕು ಎಂದರೆ ಬಹಳ ಅಚ್ಚುಕಟ್ಟಾಗಿ ಕೆಲಸ ಮಾಡಬೇಕು' ಎನ್ನುತ್ತಾರೆ ವಿಜಯ್.

'ನನಗೆ ಬೇರೆ ಮಾದರಿಯ ಕಥೆಗಳನ್ನು ಬರೆದು ನಿರ್ದೇಶಿಸಬೇಕು ಎನ್ನುವ ಹಸಿವಿದೆ. ನಾನು ಮೊದಲು ಅಂದುಕೊಂಡಿದ್ದ ಕಥೆಗಳನ್ನು ಮುಗಿಸುತ್ತಿದ್ದೇನೆ. 'ಸಲಗ'ದಲ್ಲಿ ಭೂಗತಲೋಕದ ಕಥೆ, 'ಭೀಮ'ದಲ್ಲಿ ಒಂದು ಸಾಮಾಜಿಕ ಸಂದೇಶ ನೀಡಿದ್ದೆ. 'ಸಿಟಿ ಲೈಟ್ಸ್'ನಲ್ಲಿ ಒಂದು ಭಿನ್ನ ಕಥೆ ಆರಿಸಿಕೊಂಡಿದ್ದೇನೆ. ಬೆಂಗಳೂರಿನ ಕಥೆಗಳನ್ನು ಮೊದಲು ಮುಗಿಸೋಣ ಎಂದುಕೊಂಡಿದ್ದೇನೆ. ಬೇರೆ ಬೇರೆ ಜಾನರ್‌ನ ಸಿನಿಮಾಗಳನ್ನು ಮಾಡುವ ಆಸೆ ಇದೆ. ನಾನು ಬಹಳಷ್ಟು ಓಡಾಡುತ್ತೇನೆ. ಕ್ಯಾಪ್, ಮಾಸ್ಕ್ ಧರಿಸಿ ಜನರಿಗೆ ತಿಳಿಯದಂತೆ ಸುತ್ತುತ್ತಿರುತ್ತೇನೆ. ಒಂದು ಕಥೆಯ ಸುಳಿವು ಸಿಕ್ಕಿದಾಕ್ಷಣ ಅದರೊಳಗೆ ಇಳಿದುಬಿಡುತ್ತೇನೆ. ಅಲ್ಲಿ ಏನು ನಡೆಯುತ್ತಿದೆ, ಯಾಕಾಯಿತು ಎನ್ನುವ ಪ್ರಶ್ನೆಗಳೇ ನನ್ನನ್ನು ಅತ್ತ ಕರೆದೊಯ್ಯುತ್ತವೆ' ಎನ್ನುತ್ತಾ ತಮ್ಮ ತಯಾರಿ ಬಗ್ಗೆ ವಿವರಿಸಿದರು.

'ಮುಂದಿನ ಸಿನಿಮಾ ಯಾವುದು?' ಎಂಬ ಪ್ರಶ್ನೆಗೆ, 'ನನ್ನ ಜೊತೆಯೇ 'ಭೀಮ' ಸಿನಿಮಾದಲ್ಲಿ ಸಹ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದ ವೀರ ಎಂಬುವವರು ಒಂದು ಕಥೆ ಮಾಡುತ್ತಿದ್ದಾರೆ. ಇದರ ಪೂರ್ವತಯಾರಿ ಆರಂಭವಾಗಿದೆ. 'ಸಿಟಿ ಲೈಟ್ಸ್' ಬಿಡುಗಡೆಯಾದ ಬೆನ್ನಲ್ಲೇ ಇದನ್ನು ಕೈಗೆತ್ತಿಕೊಳ್ಳಲಿದ್ದೇನೆ' ಎನ್ನುತ್ತಾ ಮಾತಿಗೆ ವಿರಾಮ ಹಾಕಿದರು.

ಶೀಘ್ರದಲ್ಲೇ 'ಪ್ರಜಾವಾಣಿ ಸಿನಿ ಸಮ್ಮಾನ'

4ನೇ ಆವೃತ್ತಿ



ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿಯ ಸಮಾರಂಭ ಶೀಘ್ರದಲ್ಲಿ ಜರುಗಲಿದೆ.

ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗಿದೆ. 150ಕ್ಕಿಂತಲೂ ಅಧಿಕ ಸಿನಿಮಾಗಳು ಪ್ರಶಸ್ತಿಗಾಗಿ ಸ್ಪರ್ಧಿಸಿವೆ. ಈಗಾಗಲೇ ಈ ಸಿನಿಮಾಗಳು 'ಸಿನಿ ಸಮ್ಮಾನ'ದ 21 ತಾಂತ್ರಿಕ ತೀರ್ಪುಗಾರರ ಕೈಸೇರಿದ್ದು, ಶೀಘ್ರದಲ್ಲೇ ನಾಮನಿರ್ದೇಶನಗಳು ಹೊರಬೀಳಲಿವೆ. ಒಟ್ಟು 26 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ.

'ಪಿಚ್ಚರ್' ಹಾಡಿಗೆ ಶಿಲ್ಪಾ ಗಣೇಶ್ ದನಿ

'ಗೋಲ್ಡನ್ ಮೂವೀಸ್' ಲಾಂಛನದಲ್ಲಿ ನಟ ಗಣೇಶ್ ಅವರ ಪತ್ನಿ ಶಿಲ್ಪಾ ಗಣೇಶ್ ಅವರು 'ಪಿಚ್ಚರ್' ಎಂಬ ತುಳು ಸಿನಿಮಾ ನಿರ್ಮಾಣ ಮಾಡಿದ್ದು, ಇದೀಗ ಆ ಸಿನಿಮಾದ ಹಾಡೊಂದಕ್ಕೆ ಅವರೇ ದನಿಯಾಗಿದ್ದಾರೆ.

ಕನ್ನಡದಲ್ಲೂ ಡಬ್ ಆಗಿ ಸಿನಿಮಾ ತೆರೆಕಾಣಲಿದ್ದು, ಸಂದೀಪ್ ಬೆದ್ರ ಸಿನಿಮಾ ನಿರ್ದೇಶಿಸಿದ್ದಾರೆ. ಸಿನಿಮಾದ 'ಗೋಕುಲದ ರಾಧೆ' ಎಂಬ ಹಾಡನ್ನು ಕನ್ನಡ ಹಾಗೂ ತುಳು ಭಾಷೆಗಳಲ್ಲಿ ಶಿಲ್ಪಾ ಅವರು ಹಾಡಿದ್ದಾರೆ. ನಿರ್ಮಾಪಕಿಯಾಗಿದ್ದ ಅವರು ಗಾಯಕಿಯಾಗಿಯೂ ಚಿತ್ರರಂಗದಲ್ಲಿ ಗುರುತಿಸಿಕೊಳ್ಳಲು ಯತ್ನಿಸಿದ್ದಾರೆ. ಶಿಲ್ಪಾ ಗಣೇಶ್ ಹಾಗೂ 'ದ್ವಾಪರ ದಾಟುತ...' ಖ್ಯಾತಿಯ ಜಸ್ಕರಣ್ ಸಿಂಗ್ ಈ ಹಾಡನ್ನು ಹಾಡಿದ್ದಾರೆ. ಕನ್ನಡದಲ್ಲಿ ಅರಸು ಅಂತಾರೆ ಹಾಗೂ ತುಳುವಿನಲ್ಲಿ ಕೀರ್ತನ್ ಭಂಡಾರಿ ಈ ಹಾಡನ್ನು ರಚಿಸಿದ್ದಾರೆ. ಸ್ಯಾಮ್ಯುಯೆಲ್ ಅಭಿ ಸಂಗೀತ ನೀಡಿದ್ದಾರೆ. ಕಾಶ್ಮೀರದಲ್ಲಿ ಈ ಹಾಡಿನ ಚಿತ್ರೀಕರಣವಾಗಿದೆ. ಆನಂದ್ ಆಡಿಯೊ ಯೂಟ್ಯೂಬ್ ಚಾನಲ್‌ನಲ್ಲಿ ಹಾಡು ಬಿಡುಗಡೆಯಾಗಿದೆ.


ಶಿಲ್ಪಾ ಗಣೇಶ್

ಕೌಟುಂಬಿಕ, ಕಾಮಿಡಿ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ನಿತ್ಯಪ್ರಕಾಶ್ ಬಂಟ್ವಾಳ್ ನಾಯಕರಾಗಿದ್ದು, ನಾಯಕಿಯಾಗಿ ಅಮೃತ ಸುದು ಅಭಿನಯಿಸಿದ್ದಾರೆ. ದೇವದಾಸ್ ಕಾಪಿಕಾಡ್, ನವೀನ್ ಡಿ.ಪಡೀಲ್, ಅರವಿಂದ್ ಬೋಳಾರ್, ಭೋಜರಾಜ್ ವಾಮಂಜೂರ್, ಸಾಯಿಕೃಷ್ಣ, ವಜ್ರಧೀರ್ ಜೈನ್, ಸದಾಶಿವ ಅಮಿನ್, ಪ್ರಸನ್ನ ಶೆಟ್ಟಿ ಬೈಲೂರ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಸಂತೋಷ್ ರೈ ಪಾತಾಜೆ ಹಾಗೂ ಚಂದ್ರಶೇಖರ್ ಕೆ.ಎಸ್ ಛಾಯಾಚಿತ್ರಗ್ರಹಣ, ರಾಜು ಆರ್ಯನ್ ಸಂಕಲನ, ಧನಂಜಯ್ ಬಿ.- ಶ್ರೀರಾಜು ನೃತ್ಯ ನಿರ್ದೇಶನ, ಥ್ರಿಲ್ಲರ್ ಮಂಜು ಸಾಹಸ ನಿರ್ದೇಶನ ಚಿತ್ರಕ್ಕಿದೆ.

ಎಐಎಡಿಎಂಕೆ: ಹೆಚ್ಚಿದ ಆಂತರಿಕ ಬಿರುಕು

ವಿಜಯ್ ಪರ ಶಾಸಕರ ಒಲವು
ಪಳನಿಸ್ವಾಮಿ ರಾಜೀನಾಮೆಗೆ ಆಗ್ರಹ

ಚೆನ್ನೈ (ಪಿಟಿಐ): ತಮಿಳುನಾಡು ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟಗೊಂಡ ಬೆನ್ನಲ್ಲೇ, ಎಐಎಡಿಎಂಕೆ ಪಕ್ಷದೊಳಗಿನ ಬಿರುಕು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಎಐಎಡಿಎಂಕೆಯ ಹಲವು ಶಾಸಕರು ಮುಖ್ಯಮಂತ್ರಿ ವಿಜಯ್ ಅವರನ್ನು ಬೆಂಬಲಿಸಲು ನಿರ್ಧರಿಸಿದ್ದು, ಪಕ್ಷದೊಳಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಬಣಗಳು ಸೃಷ್ಟಿಯಾಗಿವೆ ಎನ್ನಲಾಗಿದೆ.

ಸೋಮವಾರ ನಡೆದ ಪ್ರಮಾಣ ವಚನ ಸ್ವೀಕಾರಕ್ಕೆ ಎಐಎಡಿಎಂಕೆ ಶಾಸಕರು ಎರಡು ಪ್ರತ್ಯೇಕ ಗುಂಪುಗಳಾಗಿ ವಿಧಾನಸಭೆ ಅಧಿವೇಶನಕ್ಕೆ ಬಂದಿರುವುದು ಭಿನ್ನಮತ ಉಲ್ಬಣವಾಗುತ್ತಿದೆ ಎಂಬ ಮಾತಿಗೆ ಪುಷ್ಟಿ ನೀಡಿದೆ.

167 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಎಐಎಡಿಎಂಕೆ 47 ಶಾಸಕರ ಬಲ ಹೊಂದಿದೆ. ಪಕ್ಷದ ವರಿಷ್ಠ ಎಡಪ್ಪಾಡಿ ಕೆ. ಪಳನಿಸ್ವಾಮಿ ವಿರುದ್ಧ ಶಾಸಕರು ಬಂಡಾಯ ಏಳುವ ಲಕ್ಷಣಗಳು ಕಂಡುಬರುತ್ತಿವೆ.

ಸರಳ ಬಹುಮತಕ್ಕೆ 10 ಶಾಸಕರ ಕೊರತೆ ಎದುರಿಸುತ್ತಿದ್ದ ಟಿವಿಕೆಗೆ ಬೆಂಬಲ ನೀಡುವಂತೆ ಎಐಎಡಿಎಂಕೆಯ ಒಂದು ಬಣ ಪ್ರತಿಪಾದಿಸಿದರೆ, ಮತ್ತೊಂದು ಬಣ ವಿರೋಧ ವ್ಯಕ್ತಪಡಿಸಿತ್ತು.

ನಾಯಕತ್ವಕ್ಕೆ ಪಟ್ಟು: ಪಕ್ಷದ ಪ್ರಧಾನ ಕಾರ್ಯದರ್ಶಿ ಪಳನಿಸ್ವಾಮಿ ಅವರನ್ನೇ ಶಾಸಕಾಂಗ ಪಕ್ಷದ ನಾಯಕರೆಂದು ಘೋಷಿಸುವಂತೆ ಥಲವೈ ಸುಂದರಂ ನೇತೃತ್ವದ ಶಾಸಕರ ಗುಂಪು ಹಂಗಾಮಿ ಸಭಾಧ್ಯಕ್ಷ ಕರುಪ್ಪಯ್ಯ ಅವರಿಗೆ ಪತ್ರ ನೀಡಿದೆ. ವೇಲುಮಣಿ ನೇತೃತ್ವದ ಭಿನ್ನಮತೀಯರ ಗುಂಪು, ಸಿ.ವಿ. ಷಣ್ಮುಗಂ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಮಾನ್ಯ ಮಾಡುವಂತೆ ಕೋರಿ ಪ್ರತ್ಯೇಕ ಪತ್ರ ನೀಡಿದೆ.

ಮೂಲಗಳ ಪ್ರಕಾರ, ಪಳನಿಸ್ವಾಮಿ ಅವರನ್ನು ಬೆಂಬಲಿಸುತ್ತಿರುವ ಸುಂದರಂ ನೇತೃತ್ವದ ಬಣದಲ್ಲಿ 17 ಶಾಸಕರಿದ್ದರೆ, ಷಣ್ಮುಗಂ ಅವರನ್ನು ಬೆಂಬಲಿಸುತ್ತಿರುವ ವೇಲುಮಣಿ ನೇತೃತ್ವದ ಗುಂಪು 30 ಶಾಸಕರ ಬೆಂಬಲ ಹೊಂದಿದೆ.

ಚುನಾವಣೆಯಲ್ಲಿ ಗೆದ್ದು ಅಧಿಕಾರದ ಚುಕ್ಕಾಣಿ ಹಿಡಿಯಲು ವಿಫಲವಾಗಿದ್ದಕ್ಕೆ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ರಾಜೀನಾಮೆ ನೀಡಬೇಕು ಎಂದು ಕೆಲವು ಶಾಸಕರು ಶಾಸಕಾಂಗ ಪಕ್ಷದ ಸಭೆಯಲ್ಲೇ ಒತ್ತಾಯಿಸಿದ್ದರು ಎಂದು ಎಐಎಡಿಎಂಕೆ ಮೂಲಗಳು ತಿಳಿಸಿವೆ.

ಎಡಪ್ಪಾಡಿ ಕೆ. ಪಳನಿಸ್ವಾಮಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮಾಜಿ ಸಚಿವರಾದ ಸಿ.ವಿ. ಷಣ್ಮುಗಂ, ಎಸ್.ಪಿ. ವೇಲುಮಣಿ ಅವರ ಬೆಂಬಲಿಗರು ವಿಜಯ್ ಪರ ಒಲವು ವ್ಯಕ್ತಪಡಿಸಿದ್ದರು ಎಂಬುದು ಗೊತ್ತಾಗಿದೆ.

'ಪಕ್ಷದೊಳಗೆ ಭಿನ್ನಾಭಿಪ್ರಾಯವಿದೆ. ಹಲವು ಶಾಸಕರು ನಾಯಕತ್ವ ಬದಲಾವಣೆ ಬಯಸುತ್ತಿದ್ದಾರೆ. ಪಳನಿಸ್ವಾಮಿ ಅವರೇ ನಾಯಕರಾಗಿ ಮುಂದುವರಿದರೆ, ಹಲವು ಶಾಸಕರು ಬಂಡಾಯದ ಬಾವುಟ ಹಾರಿಸಿ ಟಿವಿಕೆಗೆ ಬೆಂಬಲ ನೀಡುವ ಸಾಧ್ಯತೆ ಇದೆ' ಎಂದು ಎಐಎಡಿಎಂಕೆಯ ಮಾಜಿ ಮುಖಂಡ ಕೆ.ಸಿ. ಪಳನಿಸ್ವಾಮಿ ತಿಳಿಸಿದ್ದಾರೆ.

'ಪಳನಿಸ್ವಾಮಿ ಅವರು ಸ್ವಯಂಪ್ರೇರಿತರಾಗಿ ನಾಯಕತ್ವ ತೊರೆದರೆ ಮಾತ್ರ ಎಐಎಡಿಎಂಕೆಯೊಳಗೆ ಒಗ್ಗಟ್ಟು ಉಳಿಯಬಹುದು' ಎಂದಿದ್ದಾರೆ.

'ಎಐಎಡಿಎಂಕೆ ನಾಯಕರು ತಮ್ಮೊಳಗಿನ ಭಿನ್ನಾಭಿಪ್ರಾಯವನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳುತ್ತಾರೆ ಎಂಬುದು ನನ್ನ ಅನಿಸಿಕೆ. ಏಕೆಂದರೆ, ವಿಧಾನಸಭೆಯಲ್ಲಿ ಎಲ್ಲರೂ ಒಟ್ಟಿಗೆ ಕುಳಿತಿದ್ದಾರೆ' ಎನ್ನುತ್ತಾರೆ ರಾಜಕೀಯ ವಿಶ್ಲೇಷಕ ಸತ್ಯಾಲಯ ರಾಮಕೃಷ್ಣನ್.

ಸ್ಟಾಲಿನ್, ವೈಕೊ ಭೇಟಿ ಮಾಡಿದ ಮುಖ್ಯಮಂತ್ರಿ ವಿಜಯ್

ಮುಖ್ಯಮಂತ್ರಿ ವಿಜಯ್ ಅವರು ಡಿಎಂಕೆ ವರಿಷ್ಠ ಎಂ.ಕೆ. ಸ್ಟಾಲಿನ್ ಅವರನ್ನು ಸೋಮವಾರ ಭೇಟಿ ಮಾಡಿದರು.

ಆಳ್ವಾರ್‌ಪೇಟೆಯಲ್ಲಿರುವ ತಮ್ಮ ನಿವಾಸಕ್ಕೆ ಬಂದ ಮುಖ್ಯಮಂತ್ರಿಯನ್ನು ಸ್ಟಾಲಿನ್ ಹಾಗೂ ಅವರ ಪುತ್ರ, ಡಿಎಂಕೆ ಶಾಸಕಾಂಗ ಪಕ್ಷದ ನಾಯಕ ಉದಯನಿಧಿ ಸ್ಟಾಲಿನ್ ಅವರು ಆತ್ಮೀಯವಾಗಿ ಸ್ವಾಗತಿಸಿದರು.

ಸ್ಟಾಲಿನ್ ಹಾಗೂ ಉದಯನಿಧಿ ಇಬ್ಬರೂ ವಿಜಯ್ ಅವರನ್ನು ಅಪ್ಪಿಕೊಂಡು ಅಭಿನಂದಿಸಿದರು. ಪರಸ್ಪರ ರೇಷ್ಮೆಶಾಲು, ಹೂಗುಚ್ಛ ನೀಡಿ ಗೌರವಿಸಿದರು.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ವಿಜಯ್ ಅವರು ಈ ಹಿಂದಿನ ಡಿಎಂಕೆ ನೇತೃತ್ವದ ಸರ್ಕಾರವನ್ನು ಕಟುವಾಗಿ ಟೀಕಿಸಿದ್ದರು. ಅದರ ಮರುದಿನವೇ ಸ್ಟಾಲಿನ್ ಅವರನ್ನು ಭೇಟಿ ಮಾಡಿದ್ದಾರೆ.

ಎಂಡಿಎಂಕೆ ಮುಖಂಡ ವೈಕೊ ಅವರನ್ನೂ ವಿಜಯ್ ಭೇಟಿಯಾಗಿ ಮಾತುಕತೆ ನಡೆಸಿದರು.


ಡಿಎಂಕೆ ವರಿಷ್ಠ ಎಂ.ಕೆ. ಸ್ಟಾಲಿನ್ ಅವರು ತಮ್ಮ ನಿವಾಸಕ್ಕೆ ಭೇಟಿ ನೀಡಿದ ತಮಿಳುನಾಡು ಮುಖ್ಯಮಂತ್ರಿ ವಿಜಯ್ ಅವರನ್ನು ಕೈ ಹಿಡಿದು ಮನೆಯೊಳಗೆ ಕರೆದೊಯ್ದರು ಪಿಟಿಐ ಚಿತ್ರ

ಪ್ರಮುಖರನ್ನು ದೆಹಲಿಗೆ ಆಹ್ವಾನಿಸಿದ ಹೈಕಮಾಂಡ್
ಕೇರಳಂ: 'ಕೈ'ಗೆ ಬಿಸಿತುಪ್ಪ

ಪ್ರಜಾವಾಣಿ ವಾರ್ತೆ/ ಪಿಟಿಐ

ತಿರುವನಂತಪುರ: ಕೇರಳಂ ಮುಖ್ಯಮಂತ್ರಿ ಅಭ್ಯರ್ಥಿಯ ಆಯ್ಕೆಯು ಕಗ್ಗಂಟಾಗಿದ್ದು, ಕಾಂಗ್ರೆಸ್‌ನ ಹೈಕಮಾಂಡ್‌ಗೆ ಬಿಸಿತುಪ್ಪವಾಗಿ ಪರಿಣಮಿಸಿದೆ.

ಮುಖ್ಯಮಂತ್ರಿ ಆಯ್ಕೆಗೆ ಸಂಬಂಧಿಸಿದಂತೆ ಅಂತಿಮ ನಿರ್ಧಾರ ಕೈಗೊಳ್ಳಲಾಗದೆ ಪರದಾಡುತ್ತಿರುವ 'ಕೈ' ಹೈಕಮಾಂಡ್, ಕೇರಳಂ ಕಾಂಗ್ರೆಸ್‌ನ ಹಿರಿಯ ನಾಯಕರು, ಕೆಪಿಸಿಸಿಯ ಮಾಜಿ ಅಧ್ಯಕ್ಷರಿಗೆ ದೆಹಲಿಗೆ ದೌಡಾಯಿಸುವಂತೆ ಸೂಚಿಸಿದೆ.

ಚುನಾವಣಾ ಫಲಿತಾಂಶ ಪ್ರಕಟಗೊಂಡು ವಾರವಾದರೂ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಕಾಂಗ್ರೆಸ್ ಪ್ರಕಟಿಸದಿರುವುದಕ್ಕೆ ಮೈತ್ರಿಕೂಟದ ಮಿತ್ರ ಪಕ್ಷಗಳು ಅಸಮಾಧಾನ ವ್ಯಕ್ತಪಡಿಸಿವೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಹಾಗೂ ಶಾಸಕ ರಾಜೀವ್ ಚಂದ್ರಶೇಖರ್ ಅವರು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಬಿಜೆಪಿ ಅಣಕವಾಡಿದೆ.

ಕೆಪಿಸಿಸಿಯ ಮಾಜಿ ಅಧ್ಯಕ್ಷರಾದ ಕೆ. ಮುರಳೀಧರನ್, ವಿ.ಎಂ. ಸುಧೀರನ್ ಅವರಿಗೆ ದೆಹಲಿಗೆ ಬರುವಂತೆ ಎಐಸಿಸಿ ಬುಲಾವ್ ನೀಡಿದೆ ಎಂದು ಮೂಲಗಳು ಸೋಮವಾರ ಖಚಿತಪಡಿಸಿವೆ.

ಸಂಸದ, ಕೆಪಿಸಿಸಿಯ ಮಾಜಿ ಅಧ್ಯಕ್ಷರಾದ ಕೆ. ಸುಧಾಕರನ್, ಮಾಜಿ ಸಚಿವ ಮುಲ್ಲಪ್ಪಳ್ಳಿ ರಾಮಚಂದ್ರನ್, ಕೆಪಿಸಿಸಿಯ ಮಾಜಿ ಅಧ್ಯಕ್ಷ ಹಾಗೂ ಮಾಜಿ ಸಚಿವ ಎಂ.ಎಂ. ಹಸನ್ ಅವರಿಗೂ ಸಮಾಲೋಚನೆಗೆ ಬರುವಂತೆ ಸೂಚಿಸಿದೆ ಎನ್ನಲಾಗಿದೆ.

ಹಿರಿಯ ನಾಯಕ ಎ.ಕೆ. ಆಂಟನಿ ಅವರೊಂದಿಗೂ ಎಐಸಿಸಿಯ ನಾಯಕರು ಮಾತನಾಡುತ್ತಿದ್ದಾರೆ ಎಂಬುದು ಗೊತ್ತಾಗಿದೆ.

ಕೇರಳಂನ ನಾಯಕರೊಂದಿಗೆ ಸಮಾಲೋಚಿಸಿದ ಬಳಿಕ, ಖರ್ಗೆ ಅವರು ಸೋನಿಯಾ ಗಾಂಧಿ ಅವರನ್ನು ಭೇಟಿಯಾದ ನಂತರವಷ್ಟೇ ಮುಖ್ಯಮಂತ್ರಿ ಆಯ್ಕೆಯ ನಿರ್ಧಾರ ಪ್ರಕಟಿಸುವ ಸಾಧ್ಯತೆ ಇದೆ ಎಂಬುದು ಗೊತ್ತಾಗಿದೆ.

ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಬಹಿರಂಗವಾಗಿ ವಿ.ಡಿ. ಸತೀಸನ್ ಅವರಿಗೆ ಬೆಂಬಲ ನೀಡಿರುವುದು ಕಾಂಗ್ರೆಸ್‌ಗೆ ತಲೆನೋವಾಗಿ ಪರಿಣಮಿಸಿದೆ.

ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ಅವರು ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ ಗೆಲುವು ಸಾಧಿಸುವಲ್ಲಿ ಐಯುಎಂಎಲ್ ಪ್ರಮುಖ ಪಾತ್ರ ವಹಿಸಿದ್ದು, ಮಿತ್ರಪಕ್ಷವನ್ನು ಕಡೆಗಣಿಸದ ಸ್ಥಿತಿ ಕಾಂಗ್ರೆಸ್‌ನದ್ದಾಗಿದೆ ಎಂದು ಮೂಲಗಳು ತಿಳಿಸಿವೆ.

ಐಯುಎಂಎಲ್‌ನ ನಾಯಕರು ಪ್ರಿಯಾಂಕಾ ಗಾಂಧಿ ಅವರಿಗೆ ಸ್ಥಳೀಯ ಪರಿಸ್ಥಿತಿಯನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ ಎನ್ನಲಾಗಿದೆ.

ಬಿಕ್ಕಟ್ಟಿನ ಲಾಭಕ್ಕಾಗಿ ಪ್ರಯತ್ನ: 'ಬಿಕ್ಕಟ್ಟಿನ ಲಾಭ ಪಡೆಯಲು ಸಿಪಿಐ (ಎಂ) ಪ್ರಯತ್ನಿಸುತ್ತಿದೆ' ಎಂದು ಕಾಂಗ್ರೆಸ್ ಮುಖಂಡ ಪಿ.ಸಿ. ವಿಷ್ಣುನಾಥ್ ದೂರಿದ್ದಾರೆ.

ಕಾಂಗ್ರೆಸ್ ವರಿಷ್ಠರು ಫ್ಲೆಕ್ಸ್, ಬ್ಯಾನರ್‌ಗಳಿಂದ ದೂರವಿರುವಂತೆ ಪಕ್ಷದ ಕಾರ್ಯಕರ್ತರಿಗೆ ಸೂಚಿಸಿದ ನಂತರ, ಸಿಪಿಎಂನ ಕಾರ್ಯಕರ್ತರೊಬ್ಬರು ವೇಣುಗೋಪಾಲ್ ಪರ ಬ್ಯಾನರ್ ಪ್ರದರ್ಶಿಸಿರುವುದಕ್ಕೆ ವಿಷ್ಣುನಾಥ್ ಅವರು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.

ಟಿಎಂಸಿ ನಾಯಕ ಸುಜಿತ್ ಬೋಸ್ ಬಂಧನ

ಕೋಲ್ಕತ್ತ (ಪಿಟಿಐ): ರಾಜ್ಯದಲ್ಲಿ ನಡೆದ ಪುರಸಭೆ ಸಿಬ್ಬಂದಿ ನೇಮಕಾತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಪಶ್ಚಿಮ ಬಂಗಾಳದ ಮಾಜಿ ಸಚಿವ ಮತ್ತು ತೃಣಮೂಲ ಕಾಂಗ್ರೆಸ್ (ಟಿಎಂಸಿ) ನಾಯಕ ಸುಜಿತ್ ಬೋಸ್ ಅವರನ್ನು ಸೋಮವಾರ ಬಂಧಿಸಿದೆ.

ಅಸ್ಸಾಂ: ಹಿಮಂತ ಪ್ರಮಾಣ ಇಂದು

ಗುವಾಹಟಿ (ಪಿಟಿಐ): ಹಿಮಂತ ಬಿಸ್ವ ಶರ್ಮಾ ಅವರು ಅಸ್ಸಾಂ ಮುಖ್ಯಮಂತ್ರಿಯಾಗಿ ಸತತ ಎರಡನೇ ಅವಧಿಗೆ ಪ್ರಮಾಣ ವಚನ ಸ್ವೀಕರಿಸಲು ವೇದಿಕೆ ಸಜ್ಜಾಗಿದೆ.

ಖಾನಾಪಾರಾದ ಪಶುವೈದ್ಯಕೀಯ ಕಾಲೇಜು ಮೈದಾನದಲ್ಲಿ ಮಂಗಳವಾರ ಬೆಳಿಗ್ಗೆ 11.40ಕ್ಕೆ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದ್ದು, ರಾಜ್ಯಪಾಲ ಲಕ್ಷ್ಮಣ ಪ್ರಸಾದ್ ಆಚಾರ್ಯ ಪ್ರತಿಜ್ಞಾ ವಿಧಿ ಬೋಧಿಸುವರು.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರದ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್, ನಿರ್ಮಲಾ ಸೀತಾರಾಮನ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಪಾಲ್ಗೊಳ್ಳಲಿದ್ದಾರೆ.

2021ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಯಾದ ಹಿಮಂತ ಅವರು ಅಸ್ಸಾಂನಲ್ಲಿ ಸತತ ಎರಡು ಅವಧಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಮೊದಲ ಕಾಂಗ್ರೆಸ್ಸೇತರ ನಾಯಕ ಎನಿಸಿಕೊಳ್ಳಲಿದ್ದಾರೆ.

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಹೇಳಿಕೆ
ಬಾಂಗ್ಲಾ ಗಡಿ ಬೇಲಿಗೆ ಜಮೀನು

ಕೋಲ್ಕತ್ತ (ಪಿಟಿಐ): ಮುಖ್ಯಮಂತ್ರಿ ಸುವೇಂದು ಅಧಿಕಾರಿ ಸೋಮವಾರ ಚೊಚ್ಚಲ ಸಚಿವ ಸಂಪುಟ ನಡೆಸಿ, ಬಾಂಗ್ಲಾದೇಶದ ಗಡಿ ಭಾಗದಲ್ಲಿ ಬೇಲಿ ನಿರ್ಮಿಸಲು ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) ಜಮೀನು ಹಸ್ತಾಂತರವೂ ಸೇರಿದಂತೆ ಹಲವು ನಿರ್ಣಯಗಳಿಗೆ ಅನುಮೋದನೆ ನೀಡಿದರು.

ರಾಜ್ಯದಾದ್ಯಂತ ತಕ್ಷಣದಿಂದಲೇ ಜನಗಣತಿ ನಡೆಸಲು ಸಂಪುಟವು ಅನುಮತಿ ನೀಡಿದೆ. ಆಯುಷ್ಮಾನ್ ಭಾರತ್ ವಿಮಾ ಯೋಜನೆ ಸೇರಿದಂತೆ ಕೇಂದ್ರದ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸುವ ಪ್ರಸ್ತಾವಕ್ಕೂ ಸಭೆಯು ಒಪ್ಪಿಗೆ ನೀಡಿದೆ.

'ಬಾಂಗ್ಲಾದ ಗಡಿ ಭಾಗಗಳಲ್ಲಿ ಜನಸಂಖ್ಯೆಯು ತೀವ್ರತರದಲ್ಲಿ ಬದಲಾಗುತ್ತಿರುವ ಕಾರಣದಿಂದ ಗಡಿಗಳಲ್ಲಿ ಬೇಲಿ ನಿರ್ಮಿಸಲು ಬಿಎಸ್‌ಎಫ್‌ಗೆ ಅಗತ್ಯ ಜಮೀನು ವರ್ಗಾಯಿಸಲು ಅನುಮತಿ ನೀಡಲಾಗಿದೆ. ಮುಂದಿನ 45 ದಿನಗಳ ಒಳಗಾಗಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆಯ ಕಾರ್ಯದರ್ಶಿಗೆ ಸೂಚನೆ ನೀಡಲಾಗಿದೆ' ಎಂದು ಸುವೇಂದು ತಿಳಿಸಿದ್ದಾರೆ.

ಚುನಾವಣಾ ಪ್ರಚಾರದ ಸಮಯದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿದ ಭರವಸೆಯಂತೆ ಶಾಲಾ ಶಿಕ್ಷಕ ಹುದ್ದೆ ನೇಮಕಾತಿ ಪ್ರಕ್ರಿಯೆಯಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ವಯೋಮಿತಿಯನ್ನು ಐದು ವರ್ಷ ವಿಸ್ತರಿಸುವುದಕ್ಕೂ ಒಪ್ಪಿಗೆ ನೀಡಲಾಗಿದೆ.

ಇದುವರೆಗೂ ರಾಜ್ಯದಲ್ಲಿ ಜಾರಿಯಲ್ಲಿದ್ದ ಐಪಿಸಿ, ಸಿಆರ್‌ಪಿಸಿ ಬದಲಿಗೆ ಕೇಂದ್ರ ಸರ್ಕಾರದ ಹೊಸತಾಗಿ ಜಾರಿಗೆ ತಂದಿರುವ ಭಾರತೀಯ ನ್ಯಾಯಸಂಹಿತೆ (ಬಿಎನ್‌ಎಸ್) ಜಾರಿಗೆ ತರಲು ಅಧಿಕೃತವಾಗಿ ಅನುಮೋದನೆ ನೀಡಲಾಗಿದೆ.

ಚಂದ್ರನಾಥ್ ರಥ್ ಹತ್ಯೆ: ಮೂವರು ಆರೋಪಿಗಳು ಪೊಲೀಸ್ ಕಸ್ಟಡಿಗೆ

ಕೋಲ್ಕತ್ತ (ಪಿಟಿಐ): ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರ ಆಪ್ತ ಚಂದ್ರನಾಥ್ ರಥ್ ಅವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶ ಮತ್ತು ಬಿಹಾರದಿಂದ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಇವರನ್ನು 13 ದಿನಗಳವರೆಗೆ ಪೊಲೀಸ್ ಕಸ್ಟಡಿಗೆ ನೀಡಿ ನ್ಯಾಯಾಲಯ ಆದೇಶಿಸಿದೆ.


ಚಂದ್ರನಾಥ್ ರಥ್

ಮೂವರನ್ನೂ ಭಾನುವಾರ ವಶಕ್ಕೆ ಪಡೆಯಲಾಯಿತು. ನಂತರ ವಿಶೇಷ ತನಿಖಾ ತಂಡವು (ಎಸ್‌ಐಟಿ) ಆರೋಪಿಗಳನ್ನು ಬಂಧಿಸಿ ಬರಾಸತ್ ನ್ಯಾಯಾಲಯದಲ್ಲಿ ಸೋಮವಾರ ಹಾಜರುಪಡಿಸಿತು ಎಂದು ಪೊಲೀಸರು ತಿಳಿಸಿದರು.

ಮೇ 24ರಂದು ಆರೋಪಿಗಳನ್ನು ತನ್ನ ಮುಂದೆ ಹಾಜರುಪಡಿಸುವಂತೆಯೂ ನ್ಯಾಯಾಲಯ ಆದೇಶಿಸಿದೆ. ಆರೋಪಿಗಳನ್ನು ಎರಡು ವಾರ ಪೊಲೀಸ್ ಕಸ್ಟಡಿಗೆ ನೀಡುವಂತೆ ಎಸ್‌ಐಟಿಯು ನ್ಯಾಯಾಲಯವನ್ನು ಕೋರಿತು.

ಉತ್ತರ 24 ಪರಗಣ ಜಿಲ್ಲೆಯ ಮಧ್ಯಮ್‌ಗ್ರಾಮ್‌ನಲ್ಲಿ ಮೇ 6ರಂದು ಚಂದ್ರನಾಥ್ ಅವರನ್ನು ಹತ್ಯೆ ಮಾಡಲಾಗಿತ್ತು. ಈ ಪ್ರಕರಣದ ತನಿಖೆಗೆ ಎಸ್‌ಐಟಿಯನ್ನು ರಚಿಸಲಾಗಿದೆ.

'ಬಂಧಿತರ ಪೈಕಿ ಇಬ್ಬರು ಉತ್ತರ ಪ್ರದೇಶ ಮತ್ತು ಒಬ್ಬ ವ್ಯಕ್ತಿ ಬಿಹಾರದವನು. ಇವರಲ್ಲಿ ಒಬ್ಬ ಶಾರ್ಪ್‌ಶೂಟರ್ ಎಂದು ಶಂಕಿಸಲಾಗಿದೆ. ಹತ್ಯೆಯ ಸಂಚಿನಲ್ಲಿ ಕನಿಷ್ಠ ಎಂಟು ಮಂದಿ ಭಾಗಿಯಾಗಿದ್ದಾರೆ. ಇದು ಪೂರ್ವಯೋಜಿತ ಹತ್ಯೆ' ಎಂದು ಹೇಳಿದರು.

'ಯುಪಿಐ'ನಿಂದ ಆರೋಪಿಗಳ ಜಾಲ ಪತ್ತೆ: ದಾಳಿಕೋರರು ಬಳಸಿದ್ದರೆಂದು ಶಂಕಿಸಲಾದ ಕಾರು, ಘಟನೆಗೂ ಮುನ್ನ ಬಾಲಿ ಟೋಲ್ ಪ್ಲಾಜಾವನ್ನು ದಾಟಿತ್ತು. ಈ ವೇಳೆ ಒಬ್ಬ ಆರೋಪಿ ಯುಪಿಐ ಮೂಲಕ ಟೋಲ್ ಪಾವತಿ ಮಾಡಿದ್ದ. ಇದರಿಂದ ಆರೋಪಿಯ ಮೊಬೈಲ್ ಸಂಖ್ಯೆ ಪತ್ತೆಯಾಯಿತು. ಬಳಿಕ ಜಾಡು ಹಿಡಿದು ಸಾಗಿದಾಗ ಮೂವರು ಆರೋಪಿಗಳು ಸಿಕ್ಕಿಬಿದ್ದಿದ್ದಾರೆ.

ಟೋಲ್ ಪ್ಲಾಜಾದಲ್ಲಿನ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳು ಸೇರಿದಂತೆ ಡಿಜಿಟಲ್ ಪುರಾವೆಗಳು ಹಾಗೂ ಇತರ ಮಾಹಿತಿಗಳ ಆಧಾರದ ಮೇಲೆ ತನಿಖೆ ಮುಂದುವರಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

ಮೂಲಕ ಟೋಲ್ ಪಾವತಿ ಮಾಡಿದ್ದ. ಇದರಿಂದ ಆರೋಪಿಯ ಮೊಬೈಲ್ ಸಂಖ್ಯೆ ಪತ್ತೆಯಾಯಿತು. ಬಳಿಕ ಜಾಡು ಹಿಡಿದು ಸಾಗಿದಾಗ ಮೂವರು ಆರೋಪಿಗಳು ಸಿಕ್ಕಿಬಿದ್ದಿದ್ದಾರೆ.

ಟೋಲ್ ಪ್ಲಾಜಾದಲ್ಲಿರುವ ಸಿ.ಸಿ.ಟಿ.ವಿ ದೃಶ್ಯಾವಳಿಗಳು ಸೇರಿದಂತೆ ಡಿಜಿಟಲ್ ಪುರಾವೆಗಳು ಹಾಗೂ ಇತರ ಮಾಹಿತಿಗಳ ಆಧಾರದ ಮೇಲೆ ತನಿಖೆ ಮುಂದುವರಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

ಬಂಗಾಳ ಸಿಇಸಿ: ಮನೋಜ್ ನೇಮಕ

ಕೋಲ್ಕತ್ತ, ಪಶ್ಚಿಮ ಬಂಗಾಳ (ಪಿಟಿಐ): ಪಶ್ಚಿಮ ಬಂಗಾಳದ ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ಮನೋಜ್ ಅಗರ್‌ವಾಲ್ ಅವರನ್ನು ರಾಜ್ಯ ಸರ್ಕಾರದ ನೂತನ ಮುಖ್ಯ ಕಾರ್ಯದರ್ಶಿಯನ್ನಾಗಿ ನೇಮಿಸಿ ಸೋಮವಾರ ಆದೇಶದಲ್ಲಿ ಹೊರಡಿಸಲಾಗಿದೆ.

1990ನೇ ಬ್ಯಾಚ್‌ನ ಬಂಗಾಳದ ಕೇಡರ್‌ನ ಐಎಎಸ್ ಅಧಿಕಾರಿಯಾಗಿರುವ ಮನೋಜ್ ಅವರು ಕೇಂದ್ರ ಚುನಾವಣಾ ಆಯೋಗವು ನಡೆಸಿದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್)ಯ ಮೇಲುಸ್ತುವಾರಿ ನಿರ್ವಹಿಸಿದ್ದರು. ಈ ಪ್ರಕ್ರಿಯೆಯಲ್ಲಿ ಸುಮಾರು 91 ಲಕ್ಷ ಮತದಾರರನ್ನು ಪಟ್ಟಿಯಿಂದ ಹೊರಗಿಡಲಾಗಿತ್ತು.

ಭಾರತದ ತಲೆ ಬಾಗಿಸಲು ಯಾವುದೇ ಶಕ್ತಿಗೆ ಸಾಧ್ಯವಿಲ್ಲ: ಪ್ರಧಾನಿ ನರೇಂದ್ರ ಮೋದಿ
ಸೋಮನಾಥನ ಸನ್ನಿಧಿಯಲ್ಲಿ ಅಮೃತ ಪರ್ವ

ಪ್ರಜಾವಾಣಿ ವಾರ್ತೆ

ಸೋಮನಾಥ (ಗುಜರಾತ್): 1998ರ ಪೋಖರಣ್ ಪರಮಾಣು ಪರೀಕ್ಷೆಗಳನ್ನು ಉಲ್ಲೇಖಿಸಿದ ಪ್ರಧಾನಿ ನರೇಂದ್ರ ಮೋದಿ, 'ಭಾರತವನ್ನು ತಲೆಬಾಗಿಸಲು ಅಥವಾ ಒತ್ತಡಕ್ಕೆ ಮಣಿಯುವಂತೆ ಮಾಡಲು ವಿಶ್ವದ ಯಾವುದೇ ಶಕ್ತಿಗೆ ಸಾಧ್ಯವಿಲ್ಲ' ಎಂದು ಪ್ರತಿಪಾದಿಸಿದರು.

ದೇವಸ್ಥಾನದ ಪುನರ್ ನಿರ್ಮಾಣದ ಅಮೃತ ಮಹೋತ್ಸವದ ಅಂಗವಾಗಿ ಸೋಮವಾರ ಇಲ್ಲಿ ನಡೆದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಸಭೆಯಲ್ಲಿ ಭಾಗಿಯಾಗಿ ಮಾತನಾಡಿದ ಅವರು, 'ಸೋಮನಾಥ ದೇವಸ್ಥಾನದ ಅಮೃತ ಮಹೋತ್ಸವ ಕೇವಲ ಭೂತಕಾಲದ ಸ್ಮರಣೆಯಲ್ಲ. ಬದಲಾಗಿ ಮುಂದಿನ ಸಾವಿರ ವರ್ಷಗಳ ಕಾಲ ಭಾರತಕ್ಕೆ ಸ್ಫೂರ್ತಿಯ ಹಬ್ಬ' ಎಂದು ಒತ್ತಿ ಹೇಳಿದರು.

'ದೇಶದ ಪಾಲಿಗೆ ಮೇ 11 ಮಹತ್ವದ ದಿನ. ಸೋಮನಾಥ ದೇವಸ್ಥಾನದಲ್ಲಿ ಪವಿತ್ರ ಕಾರ್ಯ ನಡೆಯಿತು. ಮಾತ್ರವಲ್ಲದೇ, 1998ರಲ್ಲಿ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದಲ್ಲಿ ಪರಮಾಣು ಪರೀಕ್ಷೆಗಳನ್ನು ನಡೆಸಲಾಯಿತು. ನಮ್ಮ ವಿಜ್ಞಾನಿಗಳು ಭಾರತದ ಸಾಮರ್ಥ್ಯವನ್ನು ಇಡೀ ಜಗತ್ತಿಗೆ ಪ್ರದರ್ಶಿಸಿದರು' ಎಂದು ಮೋದಿ ಹೇಳಿದರು.

'ಈ ಪರೀಕ್ಷೆಗಳು ಜಗತ್ತಿನಾದ್ಯಂತ ಆಘಾತದ ಅಲೆಗಳನ್ನು ಉಂಟು ಮಾಡಿದವು ಹಾಗೂ ಹಲವಾರು ದೇಶಗಳು ಕೋಪದಿಂದ ಪ್ರತಿಕ್ರಿಯಿಸಿದವು. ಈ ಪರೀಕ್ಷೆಗಳ ನಂತರ ಜಾಗತಿಕ ಶಕ್ತಿಗಳು ನಿರ್ಬಂಧಗಳು ಮತ್ತು ಆರ್ಥಿಕ ಒತ್ತಡದ ಮೂಲಕ ಭಾರತವನ್ನು ಏಕಾಂಗಿಯಾಗಿಸಲು ಪ್ರಯತ್ನಿಸಿದವು. ಆದರೆ, ಭಾರತವು ದೃಢವಾಗಿ ನಿಂತಿತು' ಎಂದು ಅವರು ತಿಳಿಸಿದರು.

'ಅಂತರರಾಷ್ಟ್ರೀಯ ಸಮುದಾಯದ ಹೆಚ್ಚುತ್ತಿರುವ ಒತ್ತಡದ ಹೊರತಾಗಿಯೂ, ಭಾರತವು ಮೇ 13ರಂದು ಇನ್ನೂ ಎರಡು ಪರಮಾಣು ಪರೀಕ್ಷೆಗಳನ್ನು ನಡೆಸಿತು. ರಾಜಕೀಯ ಇಚ್ಛಾಶಕ್ತಿ ಎಷ್ಟು ಅಚಲವಾಗಿದೆ ಎಂಬುದನ್ನು ಜಗತ್ತಿಗೆ ಭಾರತ ಪ್ರದರ್ಶಿಸಿತು. ಅಟಲ್ ಅವರ ನೇತೃತ್ವದಲ್ಲಿ ಬಿಜೆಪಿ ಸರ್ಕಾರವು ನಮಗೆ ರಾಷ್ಟ್ರ ಮೊದಲು ಎಂದು ಸಾಬೀತುಪಡಿಸಿತು' ಎಂದರು.

'ಯಾವುದೇ ರಾಷ್ಟ್ರವು ತನ್ನ ಬೇರುಗಳೊಂದಿಗೆ ಸಂಪರ್ಕ ಹೊಂದಿಲ್ಲದಿದ್ದರೆ ಬಲವಾಗಿ ಉಳಿಯಲು ಸಾಧ್ಯವಿಲ್ಲ ಎಂಬುದನ್ನು ಸೋಮನಾಥ ನಮಗೆ ನೆನಪಿಸುತ್ತದೆ' ಎಂದು ಪ್ರಧಾನಿ ಹೇಳಿದರು.

'ವಿದೇಶಿ ಆಕ್ರಮಣಕಾರರು ಸೋಮನಾಥ ದೇವಾಲಯದ ವೈಭವ ಅಳಿಸಿಹಾಕಲು ಪ್ರಯತ್ನಿಸಿದರು. ಈ ದೇವಾಲಯವನ್ನು ಪದೇ ಪದೇ ಕೆಡವಿ ಹಾಕಿದರು. ಆದರೂ ಜನರು ಪುನರ್ ನಿರ್ಮಿಸಿ ಘನತೆಯನ್ನು ಎತ್ತಿ ಹಿಡಿದರು' ಎಂದು ಅವರು ನೆನಪಿಸಿಕೊಂಡರು.

'ದೇಗುಲ ಅಭಿವೃದ್ಧಿಗೂ ನೆಹರೂ ವಿರೋಧ'

ರಾಷ್ಟ್ರೀಯ ಸ್ವಾಭಿಮಾನಕ್ಕಿಂತ ತುಷ್ಟೀಕರಣಕ್ಕೆ ಆದ್ಯತೆ ನೀಡಿದ್ದ ಮೊದಲ ಪ್ರಧಾನಿ ಜವಾಹರ್ ಲಾಲ್ ನೆಹರೂ ಅವರು ಸೋಮನಾಥ ದೇವಸ್ಥಾನದ ಪುನರ್ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿದ್ದರು ಎಂದು ಮೋದಿ ಆರೋಪಿಸಿದರು.


'ನಮಗೆ ಸ್ವಾತಂತ್ರ್ಯ ಸಿಕ್ಕ ಬಳಿಕ ಸೋಮನಾಥ ದೇವಸ್ಥಾನದ ಪುನರ್ ನಿರ್ಮಾಣ ಮೊದಲ ಕರ್ತವ್ಯವಾಗಿತ್ತು. ಈ ಕಾರಣಕ್ಕಾಗಿ ಸರ್ದಾರ್ ವಲ್ಲಭಭಾಯಿ ಪಟೇಲ್ ಹಾಗೂ ಭಾರತದ ಮೊದಲ ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್ ಅವರು ಅಪಾರ ಪ್ರಯತ್ನಗಳನ್ನು ಮಾಡಿ ಯಶಸ್ಸು ಸಾಧಿಸಿದರು. ಆದರೆ, ಈ ಮಹಾನ್ ಕೆಲಸಕ್ಕೆ ನೆಹರೂ ಅವರು ವಿರೋಧ ವ್ಯಕ್ತಪಡಿಸಿದ್ದರು' ಎಂದರು.

'ತುಷ್ಟೀಕರಣ ರಾಜಕೀಯವನ್ನು ಉತ್ತೇಜಿಸುವ ಶಕ್ತಿಗಳು ಈಗಲೂ ದೇಶದಲ್ಲಿ ಸಕ್ರಿಯವಾಗಿವೆ. ರಾಮಮಂದಿರ ನಿರ್ಮಾಣಕ್ಕೂ ಈ ಶಕ್ತಿಗಳು ವಿರೋಧ ವ್ಯಕ್ತಪಡಿಸಿದವು. ಅಂತಹ ಸಂಕುಚಿತ ಮನಸ್ಥಿತಿಯ ವಿರುದ್ಧ ನಾವು ಜಾಗರೂಕರಾಗಿರಬೇಕು' ಎಂದು ಅವರು ಎಚ್ಚರಿಸಿದರು.

ಬಾನಂಗಳದಲ್ಲಿ ಸೂರ್ಯಕಿರಣ ಚಿತ್ತಾರ

ಅಮೃತ ಮಹೋತ್ಸವದ ಭಾಗವಾಗಿ ಐತಿಹಾಸಿಕ ದೇವಾಲಯದಲ್ಲಿ ಮೋದಿ ಅವರು ಮಹಾಪೂಜೆ ನೆರವೇರಿಸಿದರು.

ಸುಮಾರು 1.5 ಕಿ.ಮೀ. ರೋಡ್ ಶೋ ನಡೆಸಿದ ಬಳಿಕ ಪ್ರಧಾನಿ ಅವರು ದೇಗುಲದಲ್ಲಿ ವೇದ ಮಂತ್ರಗಳ ಪಠಣದೊಂದಿಗೆ ಶಿವಲಿಂಗದ ಮೇಲೆ ಜಲಾಭಿಷೇಕ ಹಾಗೂ ಮಹಾಪೂಜೆ ಮಾಡಿದರು.


ಬಾನಂಗಳದಲ್ಲಿ ಚಿತ್ತಾರ ಮೂಡಿಸಿದ ಸೂರ್ಯಕಿರಣ ತಂಡ

ಮೋದಿ ಅವರು 'ಕುಂಭಾಭಿಷೇಕ'ಕ್ಕೂ ಸಾಕ್ಷಿಯಾದರು. ದೇಶದ 11 ಪ್ರಮುಖ ಯಾತ್ರಾ ಸ್ಥಳಗಳಿಂದ ತಂದಿದ್ದ ಪವಿತ್ರ ನೀರನ್ನು ಕ್ರೇನ್ ಬಳಸಿ ದೇವಸ್ಥಾನದ ಶಿಖರದ ಮೇಲೆ ಅಭಿಷೇಕ ಮಾಡಲಾಯಿತು. ಐದು ಸೂರ್ಯಕಿರಣ ಯುದ್ಧ ವಿಮಾನಗಳು ನೀಲಿಯ ಬಾನಲ್ಲಿ ಓಲಾಡಿ ಸಾಗಿ ಬಂದು ದೇವ ಮಂದಿರಕ್ಕೆ ಪುಷ್ಪಾರ್ಚನೆ ಮಾಡಿದವು. ಆರ್ಭಟಿಸುತ್ತಾ ಶರವೇಗದಲ್ಲಿ ಸಾಗಿ ಬಂದು ಮುಗಿಲೆತ್ತರಕ್ಕೆ ಕಣ್ಣಳತೆಯಲ್ಲಿ ಮರೆಯಾಗುವ ಯುದ್ಧ ವಿಮಾನಗಳ ರುದ್ರ ನರ್ತನಕ್ಕೆ ತ್ರಿವೇಣಿ ಸಂಗಮ ಸಾಕ್ಷಿಯಾಯಿತು. ಆಕಾಶದಲ್ಲಿಯೇ ಪ್ರೀತಿಯ ಸಂಕೇತದ (ಹೃದಯದ ಚಿತ್ರ) ಚಿತ್ತಾರ ಮೂಡಿಸಿ ನೋಡುಗರ ಮನಸ್ಸಿನಲ್ಲಿ ಪ್ರೀತಿ ಉಕ್ಕಿಸಿದವು.



ಮುಯ್ಯಿ ತೀರಿಸಿಕೊಂಡ ಕ್ಯಾಪಿಟಲ್ಸ್

ಅಕ್ಷರ್, ಮಿಲ್ಲರ್ ಭರ್ಜರಿ ಅರ್ಧಶತಕ
• ಕಿಂಗ್ಸ್‌ಗೆ ಸತತ ನಾಲ್ಕನೇ ಸೋಲು

ಧರ್ಮಶಾಲಾ (ಪಿಟಿಐ): ನಾಯಕ ಅಕ್ಷರ್ ಪಟೇಲ್ ಮತ್ತು ಡೇವಿಡ್ ಮಿಲ್ಲರ್ ಅವರ ಅರ್ಧಶತಕಗಳ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಸೋಮವಾರ ಐಪಿಎಲ್‌ನ ರೋಚಕ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಮೂರು ವಿಕೆಟ್‌ಗಳಿಂದ ಮಣಿಸಿ ಗೆಲುವಿನ ಹಳಿಗೆ ಮರಳಿತು.

ಆರಂಭದ ಏಳು ಪಂದ್ಯಗಳಲ್ಲಿ ಅಜೇಯವಾಗಿದ್ದ ಶ್ರೇಯಸ್ ಅಯ್ಯರ್ ಪಡೆಯು ಸತತ ನಾಲ್ಕನೇ ಸೋಲು ಅನುಭವಿಸಿತು. ಈ ಹಿಂದಿನ ಎರಡು ಪಂದ್ಯಗಳಲ್ಲಿ ಸೋತಿದ್ದ ಡೆಲ್ಲಿ ತಂಡವು ಈ ಪಂದ್ಯದಲ್ಲಿ ಸಾಂಘಿಕ ಆಟ ಪ್ರದರ್ಶಿಸಿ ಜಯಭೇರಿ ಬಾರಿಸಿತು. ಈ ಮೂಲಕ ಡೆಲ್ಲಿ ತಂಡವು ತನ್ನ ತವರಿನಲ್ಲಿ (ಏ.25) ಅನುಭವಿಸಿದ್ದ 6 ವಿಕೆಟ್‌ಗಳ ಸೋಲಿಗೆ ಮುಯ್ಯಿ ತೀರಿಸಿಕೊಂಡಿತು.


ಧರ್ಮಶಾಲಾದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಡೆಲ್ಲಿ ತಂಡ ಫೀಲ್ಡಿಂಗ್ ಆಯ್ದುಕೊಂಡಿತು. ಆರಂಭಿಕ ಆಟಗಾರ ಪ್ರಿಯಾಂಶ್ ಆರ್ಯ (56; 33ಎ, 4x2, 6x6) ಮತ್ತು ಶ್ರೇಯಸ್ (59;36, 4x5, 6x3) ಅವರ ಅರ್ಧ ಶತಕಗಳ ನೆರವಿನಿಂದ ಪಂಜಾಬ್ ತಂಡ 5 ವಿಕೆಟ್‌ಗೆ 210 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಡೆಲ್ಲಿ ತಂಡಕ್ಕೆ ಆರಂಭದಲ್ಲೇ ಪಂಜಾಬ್ ವೇಗಿಗಳಾದ ಅರ್ಷದೀಪ್ ಸಿಂಗ್ (21ಕ್ಕೆ 2) ಮತ್ತು ಯಶ್ ಠಾಕೂರ್ (55ಕ್ಕೆ 2) ಆಘಾತ ನೀಡಿದರು. 14 ರನ್ ಗಳಿಸುವಷ್ಟರಲ್ಲಿ ಆರಂಭಿಕ ಆಟಗಾರರಾದ ಕೆ.ಎಲ್. ರಾಹುಲ್ (9) ಮತ್ತು ಅಭಿಷೇಕ್ ಪೊರೆಲ್ (5) ಡಗ್‌ಔಟ್ ಸೇರಿದರು. ನಂತರ ಬಂದ ಸಾಹಿಲ್ ಪರಾಖ್ (13) ಮತ್ತು ಟ್ರಿಸ್ಟನ್ ಸ್ಟಬ್ಸ್ (12) ಅವರೂ ನಿರಾಸೆ ಅನುಭವಿಸಿದರು.

74 ರನ್‌ಗೆ ಪ್ರಮುಖ ನಾಲ್ಕು ವಿಕೆಟ್ ಕಳೆದುಕೊಂಡು ಸೋಲಿನ ಭೀತಿಯಲ್ಲಿದ್ದ ತಂಡಕ್ಕೆ ಅಕ್ಷರ್ (56;30ಎ, 4x8, 6x2) ಮತ್ತು ಮಿಲ್ಲರ್ (51;28ಎ, 4x3, 6x4) ಅವರು ಐದನೇ ವಿಕೆಟ್ ಜೊತೆಯಾಟದಲ್ಲಿ 64 ರನ್ (34ಎ) ಸೇರಿಸಿ ಮಹತ್ವದ ಚೇತರಿಕೆ ನೀಡಿದರು. ಅಕ್ಷರ್ ವಿಕೆಟ್ ಪಡೆಯುವ ಮೂಲಕ ಈ ಜೊತೆಯಾಟವನ್ನು ಮಾರ್ಕಸ್ ಸ್ಟೊಯಿನಿಸ್ ಮುರಿದರು. ಗೆಲುವಿಗೆ 40 ರನ್ ಬೇಕಿದ್ದಾಗ ಮಿಲ್ಲರ್ ಕೂಡ ಔಟಾದರು. ಈ ಹಂತದಲ್ಲಿ ಪಂಜಾಬ್ ಬೌಲರ್‌ಗಳು ಪಂದ್ಯದ ಮೇಲೆ ಮರಳಿ ಹಿಡಿತ ಸಾಧಿಸುವಂತೆ ಕಂಡರು.

ಆದರೆ, ಆಶುತೋಷ್ ಶರ್ಮಾ (24;10ಎ) ಮತ್ತು ಮಾಧವ ತಿವಾರಿ (ಔಟಾಗದೇ 18;8ಎ) ಪಂಜಾಬ್ ತಂಡದ ಲೆಕ್ಕಾಚಾರವನ್ನು ತಲೆಕೆಳಗು ಮಾಡಿದರು. ಮಾಧವ ಅವರು ಅಕೀಬ್ ನಬಿ ದಾರ್ (ಔಟಾಗದೇ 10;2) ಜೊತೆಗೂಡಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಡೆಲ್ಲಿ ತಂಡ ಒಂದು ಓವರ್ ಇರುವಂತೆ 7 ವಿಕೆಟ್‌ಗೆ 216 ರನ್ ಗಳಿಸಿ ಸಂಭ್ರಮಿಸಿತು. ಅರ್ಷದೀಪ್ ಸಿಂಗ್ ಬಿಟ್ಟರೆ ಉಳಿದ ಬೌಲರ್‌ಗಳು ದುಬಾರಿಯಾದರು.





ಅರ್ಧಶತಕ ಗಳಿಸಿದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಅಕ್ಷರ್ ಪಟೇಲ್ (ಎಡ) ಹಾಗೂ ಡೇವಿಡ್ ಮಿಲ್ಲರ್ ಚಿತ್ರಗಳು: ಎಎಫ್‌ಪಿ



ಮಾಧವ ತಿವಾರಿ

ಇದಕ್ಕೂ ಮೊದಲು ಪ್ರಿಯಾಂಶ್ ಮತ್ತು ಪ್ರಭಸಿಮ್ರನ್ ಸಿಂಗ್ (18) ಪಂಜಾಬ್ ತಂಡಕ್ಕೆ ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್‌ಗೆ 78 (41ಎ) ರನ್ ಸೇರಿಸಿದರು. ಡೆಲ್ಲಿ ವೇಗಿಗಳಾದ ಮಿಚೆಲ್ ಸ್ಟಾರ್ಕ್, ಲುಂಗಿ ಎನ್‌ಗಿಡಿ ಮತ್ತು ಮುಕೇಶ್ ಕುಮಾರ್ ದಂಡನೆಗೆ ಒಳಗಾದರು. ಸ್ಟಾರ್ಕ್ ಅವರು ಒಟ್ಟು 57 ರನ್ ತೆತ್ತು ದುಬಾರಿಯಾದರು.

ಪವರ್‌ಪ್ಲೇ ಅವಧಿಯ ಕೊನೆಯ ಮೂರು ಓವರುಗಳಲ್ಲಿ ಅಕೀಬ್ ನಬಿ ಪರಿಪೂರ್ಣ ಲೆಂತ್‌ನಲ್ಲಿ ಬೌಲಿಂಗ್ ಮಾಡಿದರು. ಹೀಗಾಗಿ ಪ್ರಿಯಾಂಶ್ ಅಬ್ಬರ ಕೊಂಚ ತಗ್ಗಿತು. ಪ್ರಭಸಿಮ್ರನ್ ಏಳನೇ ಓವರಿನಲ್ಲಿ ಭರ್ಜರಿ ಹೊಡೆತಕ್ಕೆ ಹೋಗಿ ಯತ್ನಿಸಿ ಡೀಪ್ ಬ್ಯಾಕ್‌ವರ್ಡ್ ಸ್ಕ್ವೇರ್‌ಲೆಗ್‌ನಲ್ಲಿ ಕ್ಯಾಚಿತ್ತರು.

22 ವರ್ಷದ ವೇಗಿ ಮಾಧವ 9ನೇ ಓವರಿನಲ್ಲಿ ಪ್ರಿಯಾಂಶ್ ಅವರ ವಿಕೆಟ್ ಪಡೆದರು. ಅವರು ಡೀಪ್ ಪಾಯಿಂಟ್‌ನಲ್ಲಿ ಕ್ಯಾಚಿತ್ತರು. 10 ಓವರುಗಳ ನಂತರ ಪಂಜಾಬ್ 2 ವಿಕೆಟ್‌ಗೆ 107 ರನ್ ಗಳಿಸಿತ್ತು.

ಈ ಹಂತದಲ್ಲಿ ನಾಯಕ ಶ್ರೇಯಸ್ ಅಯ್ಯರ್ (ಅಜೇಯ 59 36 ಎಸೆತ) ಮತ್ತು ಕೂಪರ್ ಕಾನೊಲಿ (38, 27 ಎಸೆತ) ಅವರು ರನ್ ವೇಗ ಹೆಚ್ಚಿಸಲು ಶ್ರಮಪಟ್ಟರು. ಆದರೆ ಅವರು ಬಯಸಿದ ವೇಗದಲ್ಲಿ ರನ್ ಗಳಿಸಲಾಗಲಿಲ್ಲ.

ಈ ಪಂದ್ಯದ ಎರಡೂ ಇನಿಂಗ್ಸ್‌ನ ಒಟ್ಟು 39 ಓವರ್‌ಗಳನ್ನು ವೇಗಿಗಳೇ ಎಸೆದಿದ್ದು ವಿಶೇಷವಾಗಿತ್ತು.

ಸಂಕ್ಷಿಪ್ತ ಸ್ಕೋರು: ಪಂಜಾಬ್ ಕಿಂಗ್ಸ್: 20 ಓವರುಗಳಲ್ಲಿ 5ಕ್ಕೆ 210 (ಪ್ರಿಯಾಂಶ್ ಆರ್ಯ 56, ಶ್ರೇಯಸ್ ಅಯ್ಯರ್ ಔಟಾಗದೇ 59, ಕೂಪರ್ ಕಾನೊಲಿ 38, ಸೂರ್ಯಾಂಶ್ ಶೆಡ್ಗೆ 21; ಮಿಚೆಲ್ ಸ್ಟಾರ್ಕ್ 57ಕ್ಕೆ2, ಮಾಧವ ತಿವಾರಿ 40ಕ್ಕೆ2). ಡೆಲ್ಲಿ ಕ್ಯಾಪಿಟಲ್ಸ್: 19 ಓವರ್‌ಗಳಲ್ಲಿ 7ಕ್ಕೆ 216 (ಅಕ್ಷರ್ ಪಟೇಲ್ 56, ಡೇವಿಡ್ ಮಿಲ್ಲರ್ 51, ಆಶುತೋಷ್ ಶರ್ಮಾ 24, ಮಾಧವ ತಿವಾರಿ ಔಟಾಗದೇ 18; ಅರ್ಷದೀಪ್ ಸಿಂಗ್ 21ಕ್ಕೆ2, ಯಶ್ ಠಾಕೂರ್ 55ಕ್ಕೆ2)
ಪಂದ್ಯದ ಆಟಗಾರ: ಮಾಧವ ತಿವಾರಿ

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಸಿಬಿ	11	7	4	0	14	1.103
ಎಸ್‌ಆರ್‌ಎಚ್	11	7	4	0	14	0.737
ಜಿ ಟಿ	11	7	4	0	14	0.228
ಪಿಬಿಕೆಎಸ್	11	6	4	1	13	0.428
ಸಿಎಸ್‌ಕೆ	11	6	5	0	12	0.185
ಆರ್ ಆರ್	11	6	5	0	12	0.082
ಡಿ ಸಿ	12	5	7	0	10	- 0.993
ಕೆಕೆಆರ್	10	4	5	1	9	- 0.169
ಎಂ ಐ	11	3	8	0	6	- 0.585
ಎಲ್‌ಎಸ್‌ಜಿ	11	3	8	0	6	- 0.907

ಆರೆಂಜ್ ಕ್ಯಾಪ್: ಹೆನ್ರಿಚ್ ಕ್ಲಾಸೆನ್, ಎಸ್‌ಆರ್‌ಎಚ್ (494 ರನ್)
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (21 ವಿಕೆಟ್)

ಸನ್‌ರೈಸರ್ಸ್–ಟೈಟನ್ಸ್‌ಗೆ ಮಹತ್ವದ ಪಂದ್ಯ

ಅಹಮದಾಬಾದ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಈಗ ನಿರ್ಣಾಯಕ ಘಟ್ಟಕ್ಕೆ ಬಂದುನಿಂತಿದೆ. ಮಂಗಳವಾರ ನಡೆಯಲಿರುವ ಮಹತ್ವದ ಪಂದ್ಯದಲ್ಲಿ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡವು, ಮೂರನೇ ಸ್ಥಾನದಲ್ಲಿರುವ ಗುಜರಾತ್ ಟೈಟನ್ಸ್ ವಿರುದ್ಧ ಸೆಣಸಾಟಕ್ಕೆ ಸಜ್ಜಾಗಿದೆ.

ಪ್ಲೇಆಫ್‌ಗೆ ಸ್ಥಾನ ಖಚಿತಪಡಿಸಿಕೊಳ್ಳಲು ಈ ಪಂದ್ಯ ಎರಡೂ ತಂಡಗಳಿಗೆ ಮುಖ್ಯವಾಗಿದೆ. ಲೀಗ್‌ನಲ್ಲಿ ನಿಧಾನಗತಿಯ ಆರಂಭ ಪಡೆದು ನಂತರ ಸತತ ಗೆಲುವುಗಳನ್ನು ಪಡೆಯುತ್ತಾ ಬಂದಿರುವ ಗುಜರಾತ್ ಟೈಟನ್ಸ್ ಸದ್ಯ ಉತ್ತಮ ಲಯದಲ್ಲಿರುವಂತೆ ಕಾಣುತ್ತಿದೆ. ಅದು ತನ್ನ ಕೊನೆಯ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಮೇಲೆ 77 ರನ್‌ಗಳ ಸುಲಭ ಗೆಲುವು ದಾಖಲಿಸಿತ್ತು.

ಆರ್‌ಸಿಬಿ, ಸನ್‌ರೈಸರ್ಸ್ ಮತ್ತು ಟೈಟನ್ಸ್ ತಂಡಗಳು ತಲಾ 14 ಪಾಯಿಂಟ್ಸ್ ಹೊಂದಿದ್ದು, ನಿವ್ವಳ ರನ್‌ರೇಟ್ ಪ್ರಮುಖ ಪಾತ್ರ ವಹಿಸುವ ಸಾಧ್ಯತೆಯಿದೆ. ಸನ್‌ರೈಸರ್ಸ್ ಸಹ ಸಕಾಲದಲ್ಲಿ ಲಯಕ್ಕೆ ಮರಳಿದೆ. ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ 4 ವಿಕೆಟ್‌ಗೆ 235 ರನ್ ಗಳಿಸಿ ಗೆದ್ದ ರೀತಿ ಆ ತಂಡದ ಬ್ಯಾಟಿಂಗ್ ಸಾಮರ್ಥ್ಯವನ್ನು ಮತ್ತೊಮ್ಮೆ ತೆರೆದಿಟ್ಟಿದೆ.

ಗುಜರಾತ್ ಟೈಟನ್ಸ್ ತಂಡದ ಶಕ್ತಿಯೆಂದರೆ ಅದರ ಸಮತೋಲನ. ಆರಂಭ ಆಟಗಾರರಾದ ಶುಭಮನ್ ಗಿಲ್ ಮತ್ತು ಸಾಯಿ ಸುದರ್ಶನ್ ತಂಡಕ್ಕೆ ಉತ್ತಮ ಆರಂಭ ನೀಡುತ್ತಿದ್ದಾರೆ. ಪವರ್‌ಪ್ಲೇ ಅವಧಿಯಲ್ಲಿ ತಂಡ ಉತ್ತಮ ಮೊತ್ತ ಗಳಿಸಲು ನೆರವಾಗಿದ್ದಾರೆ. ಜೋಸ್ ಬಟ್ಲರ್ ಮತ್ತು ವಾಷಿಂಗ್ಟನ್ ಸುಂದರ್ ಮಧ್ಯಮ ಕ್ರಮಾಂಕಕ್ಕೆ ಬಲ ನೀಡಿದ್ದಾರೆ.

ಬೌಲಿಂಗ್ ಕೂಡ ಅಷ್ಟೇ ಉತ್ತಮವಾಗಿದೆ. ಮೊಹಮದ್ ಸಿರಾಜ್, ಕಗಿಸೊ ರಬಾಡ, ರಶೀದ್ ಖಾನ್ ಪರಿಣಾಮಕಾರಿಯಾಗಿದ್ದಾರೆ. ಆರಂಭದ ಪಂದ್ಯಗಳಲ್ಲಿ ದುಬಾರಿಯಾಗಿದ್ದ ರಶೀದ್ ಅವರು ಲಯ ಕಂಡುಕೊಂಡಿರುವುದು ಬೌಲಿಂಗ್ ಪಡೆಗೆ ಶಕ್ತಿ ತುಂಬಿದೆ. ಆದರೆ ಅಗ್ರ ಸರದಿಯ ಆಟಗಾರರನ್ನೇ ತಂಡವು ಹೆಚ್ಚಾಗಿ ಅವಲಂಬಿಸಿದೆ.

ಎಸ್‌ಆರ್‌ಎಚ್ ತಂಡವು, ಅಭಿಷೇಕ್ ಶರ್ಮಾ, ಟ್ರಾವಿಸ್ ಹೆಡ್, ಇಶಾನ್ ಕಿಶನ್, ಹೆನ್ರಿಚ್ ಕ್ಲಾಸೆನ್ ಅಂಥ ಬೀಸಾಟವಾಡುವ ಬ್ಯಾಟರ್‌ಗಳ ಪಡೆಯನ್ನೇ ಹೊಂದಿದೆ. ಎದುರಾಳಿಗಳಿಗೆ ಭೀತಿ ಹುಟ್ಟಿಸುವಂತೆ 200 ರನ್‌ಗಳ ಮೊತ್ತವನ್ನು ಸಲೀಸಾಗಿ ಕಲೆಹಾಕುತ್ತಿದೆ. ಮುಂಬೈ ಇಂಡಿಯನ್ಸ್ ಎದುರು 249 ರನ್ ಹೊಡೆದಿತ್ತು.

ನಾಯಕ ಪ್ಯಾಟ್ ಕಮಿನ್ಸ್ ಮರಳಿದ ನಂತರ ಸನ್‌ರೈಸರ್ಸ್ ಬೌಲಿಂಗ್ ದಾಳಿಗೂ ಬಲ ಬಂದಿದೆ. ಆಸ್ಟ್ರೇಲಿಯಾದ ಈ ಅನುಭವಿ ವೇಗಿ ತಂಡದ ಅರ್ಧಕ್ಕೂ ಹೆಚ್ಚಿನ ಪಂದ್ಯಗಳಲ್ಲಿ ಆಡಿರಲಿಲ್ಲ. ಲಂಕಾದ ವೇಗದ ಬೌಲರ್ ಇಶಾನ್ ಮಾಲಿಂಗ ಕೂಡ ಯಶಸ್ಸು ಗಳಿಸುತ್ತಿದ್ದಾರೆ. 16 ವಿಕೆಟ್ ಪಡೆದಿರುವ ಅವರು ಅಗ್ರ ಐವರು ಬೌಲರ್‌ಗಳಲ್ಲಿ ಒಬ್ಬರಾಗಿದ್ದಾರೆ.

ಆದರೆ ಅತಿಯಾದ ಆಕ್ರಮಣದ ಆಟ ಕೆಲವೊಮ್ಮೆ ಮುಳುವಾಗಿದ್ದು ಇದೆ. ಪ್ರಮುಖ ಬ್ಯಾಟರ್‌ಗಳು ಕೈಕೊಟ್ಟು ಕೆಳ ಮಧ್ಯಮ ಕ್ರಮಾಂಕದ ದೌರ್ಬಲ್ಯ ಬಯಲಾದ ನಿದರ್ಶನಗಳು ಕೆಲ ಪಂದ್ಯಗಳಲ್ಲಿ ಕಂಡುಬಂದಿದ್ದವು.

ಬಲಾಬಲ ಒಟ್ಟು ಪಂದ್ಯ 7

ಗುಜರಾತ್ ಗೆಲುವು	5
ಹೈದರಾಬಾದ್ ಜಯ	1
ಫಲಿತಾಂಶವಿಲ್ಲ	1

ಇಂದಿನ ಪಂದ್ಯ
ಗುಜರಾತ್ ಟೈಟನ್ಸ್ V/s ಸನ್‌ರೈಸರ್ಸ್ ಹೈದರಾಬಾದ್
ತಾಣ: ಅಹಮದಾಬಾದ್, ಆರಂಭ: ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಲ್ಯಾವೆಂಡರ್ ಬಣ್ಣದ ಜರ್ಸಿ

ಕ್ಯಾನ್ಸರ್ ವಿರುದ್ಧ ಹೋರಾಟಕ್ಕೆ ಬೆಂಬಲವಾಗಿ ಗುಜರಾತ್ ಟೈಟನ್ಸ್ ತಂಡದ ಆಟಗಾರರು ಮಂಗಳವಾರದ ಪಂದ್ಯದಲ್ಲಿ ಲ್ಯಾವೆಂಡರ್ ಬಣ್ಣದ ಜರ್ಸಿ ಧರಿಸಿ ಆಡಲಿದ್ದಾರೆ. ಟೈಟನ್ಸ್ ತಂಡವು ಸತತ ನಾಲ್ಕನೇ ವರ್ಷ ಒಂದು ಪಂದ್ಯಕ್ಕೆ ತಿಳಿನೇರಳೆ ಬಣ್ಣದ ಜರ್ಸಿ ಧರಿಸುತ್ತಿದೆ.

ಆಲ್‌ರೌಂಡರ್ ಕೃಣಾಲ್ ಪಾಂಡ್ಯ ಅಮೋಘ ಬ್ಯಾಟಿಂಗ್
ರಾಯಪುರದ ಮನ ಗೆದ್ದ ಆರ್‌ಸಿಬಿ

• ಗಿರೀಶ ದೊಡ್ಡಮನಿ

ರಾಯಪುರ: ದೃಷ್ಟಿ ಹಾಯಿಸಿದಷ್ಟು ದೂರ ಒಣಭೂಮಿ, ತಳದಲ್ಲಿ ಒಂದಿಷ್ಟು ನೀರು ಇರುವ ಕೆರೆ, ಕುಂಟೆಗಳು ಮತ್ತು ಬೆಳಿಗ್ಗೆ ಏಳರಿಂದಲೇ ಚುರುಕು ಮುಟ್ಟಿಸುವ ಬಿಸಿಲಿನ ಕಾವು. ಆದರೂ ಜನರ ಮುಖದ ಮೇಲೆ ಜೀವಂತಿಕೆಯ ಪ್ರತೀಕವೆಂಬಂತೆ ಕಾಣುವ ನಗುವಿನ ಜೊತೆಗೆ ಹಣೆ ಮೇಲೆ ಬಸಿಯುವ ಬೆವರಿನ ಹನಿಗಳು...

ಇಂತಹ ರಾಯಪುರದಲ್ಲಿ ಕ್ರಿಕೆಟ್ ಆಟಕ್ಕೆ ದೊಡ್ಡ ಇತಿಹಾಸವೇನೂ ಇಲ್ಲ. ಬೆಂಗಳೂರು, ಮುಂಬೈ, ದೆಹಲಿ, ಇಂದೋರ್, ಹೈದರಾಬಾದ್, ಕೋಲ್ಕತ್ತದಿಂದ ಬಂದಂತೆ ದೊಡ್ಡ ದಿಗ್ಗಜರೂ ಇಲ್ಲಿಲ್ಲ. ಆದರೆ ಇಲ್ಲಿಯ ಜನರ ಕ್ರಿಕೆಟ್ ಪ್ರೀತಿ ಮಾತ್ರ ಅಸಾಧಾರಣವಾದದ್ದು. ಭಾನುವಾರ ರಾತ್ರಿ ಅಂತಹ ಕ್ರಿಕೆಟ್ ಪ್ರಿಯರ ಮನಗೆಲ್ಲುವಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡ ಯಶಸ್ವಿಯಾಯಿತು. ತನ್ನ ಎರಡನೇ ತವರು ಶಹೀದ್ ವೀರನಾರಾಯಣ ಸಿಂಗ್ ಕ್ರೀಡಾಂಗಣದಲ್ಲಿ ಆರ್‌ಸಿಬಿ ಮುಂಬೈ ಇಂಡಿಯನ್ಸ್ ಎದುರಿನ ಪಂದ್ಯದಲ್ಲಿ 2 ವಿಕೆಟ್‌ಗಳ ರೋಚಕ ಜಯ ಸಾಧಿಸಿತು. ರಾತ್ರಿ 11.40ರ ಆಸುಪಾಸಿನಲ್ಲಿ ಈ ಪಂದ್ಯ ಮುಗಿದಾಗಲೂ ಜನರು ಕ್ರೀಡಾಂಗಣ ಬಿಟ್ಟು ತೆರಳಲಿಲ್ಲ. ಈ ಪಂದ್ಯದ ಗೆಲುವಿನ ರೂವಾರಿ ಭುವನೇಶ್ವರ್ ಕುಮಾರ್, ಕೃಣಾಲ್ ಪಾಂಡ್ಯ ಹಾಗೂ ದಿಗ್ಗಜ ವಿರಾಟ್ ಕೊಹ್ಲಿ ಅವರನ್ನು ಹತ್ತಿರದಿಂದ ನೋಡುವುದಕ್ಕಾಗಿ ಅಲ್ಲಲ್ಲಿ ನಿಂತಿದ್ದರು. ನಗರದಿಂದ ಸುಮಾರು 25 ಕಿ.ಮೀ ದೂರವಿರುವ ಕ್ರೀಡಾಂಗಣದ ಸುತ್ತಮುತ್ತ ಜನದಟ್ಟಣೆಯೇ ನೆರೆದಿತ್ತು.

167 ರನ್‌ಗಳ ಗುರಿ ಬೆನ್ನಟ್ಟಿದ್ದ ಆರ್‌ಸಿಬಿಯ ಅಗ್ರಕ್ರಮಾಂಕದ ಬ್ಯಾಟರ್‌ಗಳು ವಿಫಲರಾಗಿ ತಂಡ ಸೋಲಿನತ್ತ ಸಾಗಿತ್ತು. ಆ ಹಂತದಲ್ಲಿ ಕೃಣಾಲ್ ಪಾಂಡ್ಯ ತಮ್ಮ ಎಡಗಾಲಿನ ಸ್ನಾಯುಸೆಳೆತದ ನೋವಿನಲ್ಲಿಯೂ ಅಮೋಘ ಬ್ಯಾಟಿಂಗ್ ಮಾಡಿದರು. ಒಂಟಿ, ಎರಡು ರನ್ ಓಡುವುದಕ್ಕೂ ನೋವು ಅನುಭವಿಸಿದ ಅವರು ಸಿಕ್ಸರ್, ಬೌಂಡರಿಗಳನ್ನು ಬಾರಿಸಿ ತಂಡದ ಗೆಲುವಿನ ಆಸೆ ಜೀವಂತವಾಗಿಟ್ಟರು. 46 ಎಸೆತಗಳಲ್ಲಿ 73 ರನ್ ಬಾರಿಸಿದರು. ಅದರಲ್ಲಿ ಐದು ಸಿಕ್ಸರ್‌ಗಳೂ ಇದ್ದವು. ಅವರ ಈ ಆಟದಿಂದಾಗಿ ಹಾಲಿ ಚಾಂಪಿಯನ್ ಆರ್‌ಸಿಬಿಯು ಪ್ಲೇ ಆಫ್ ಹಂತಕ್ಕೆ ಮತ್ತಷ್ಟು ಸನಿಹಕ್ಕೆ ಬಂದು ನಿಂತಿತು.



ಕೃಣಾಲ್ ಪಾಂಡ್ಯ ಪಿಟಿಐ ಚಿತ್ರ

‘ನನ್ನ ಆಲ್‌ರೌಂಡ್ ಆಟ ಸುಧಾರಣೆಗೊಳ್ಳಲು ದಿನೇಶ್ ಕಾರ್ತಿಕ್ (ಮೆಂಟರ್) ಮತ್ತು ತಂಡದ ನೆರವು ಸಿಬ್ಬಂದಿಯ ಪಾತ್ರ ಬಹಳಷ್ಟಿದೆ. ತಂಡದ ಗೆಲುವಿನಲ್ಲಿ ಇಂತಹ ಪಾತ್ರ ನಿರ್ವಹಿಸಿದಾಗ ಅಪಾರ ಸಂತೃಪ್ತಿ ದೊರೆಯುತ್ತದೆ’ ಎಂದು ಪಂದ್ಯದ ನಂತರ ಕೃಣಾಲ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಪ್ರಾಮಾಣಿಕವಾಗಿ ಹೇಳುತ್ತೇನೆ. ಸವಾಲಿನ ಸಂದರ್ಭದಲ್ಲಿ ನಾನು ಹೆಚ್ಚು ಪರಿಣಾಮಕಾರಿಯಾಗಿ ಆಡಬಲ್ಲೆ. ಅದು ನನ್ನ ಆತ್ಮವಿಶ್ವಾಸ’ ಎಂದೂ ಕೃಣಾಲ್ ಹೇಳಿದರು.

ಕೃಣಾಲ್ ಅವರ ಆಟವು ಇಲ್ಲಿಯ ಜನರ ಮನಗೆದ್ದಿದೆ. ಅದೇ ರೀತಿ ಹೆಚ್ಚು ಐಪಿಎಲ್ ಪಂದ್ಯಗಳು ನಡೆಯಬೇಕು ಎನ್ನುವ ಬೇಡಿಕೆಯೂ ಇಲ್ಲಿ ಅಭಿಮಾನಿಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತವಾಗುತ್ತಿದೆ. ಈ ನಗರದಲ್ಲಿ ಈಗ ಕ್ರಿಕೆಟ್‌ನ ಹೊಸ ಅಧ್ಯಾಯದ ಆರಂಭದ ಲಕ್ಷಣಗಳೂ ಗೋಚರಿಸುತ್ತಿವೆ.

ಆರ್‌ಸಿಬಿಯು ತನ್ನ ಎರಡನೇ ತವರಿನ ಅಂಗಳದಲ್ಲಿ ನಡೆದ ಮೊದಲ ಪಂದ್ಯದಲ್ಲಿ ರೋಚಕ ಜಯಸಾಧಿಸಿದೆ. 13ರಂದು ಇನ್ನೊಂದು ಪಂದ್ಯವನ್ನು ಇಲ್ಲಿ ಆಡಲಿದೆ.

ಆ್ಯಂಡಿ, ಟಿಮ್‌ಗೆ ದಂಡ

ರಾಯಪುರ (ಪಿಟಿಐ): ಮುಂಬೈ ಇಂಡಿಯನ್ಸ್ ವಿರುದ್ಧ ಐಪಿಎಲ್ ಪಂದ್ಯದಲ್ಲಿ ನಾಲ್ಕನೇ ಅಂಪೈರ್ ಜೊತೆ ವಾಗ್ವಾದದಲ್ಲಿ ತೊಡಗಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮುಖ್ಯ ಕೋಚ್ ಆ್ಯಂಡಿ ಫ್ಲವರ್ ಅವರಿಗೆ ಪಂದ್ಯ ಸಂಭಾವನೆಯ ಶೇ 15ರಷ್ಟನ್ನು ದಂಡವನ್ನಾಗಿ ವಿಧಿಸಲಾಗಿದೆ.

ಇದೇ ಪಂದ್ಯದ ವೇಳೆ, ಅಸಭ್ಯ ಸಂಜ್ಞೆ ತೋರಿಸಿದ ಆರ್‌ಸಿಬಿ ಬ್ಯಾಟರ್ ಟಿಮ್ ಡೇವಿಡ್ ಅವರಿಗೆ ಪಂದ್ಯ ಸಂಭಾವನೆಯ ಶೇ.30ರಷ್ಟನ್ನು ದಂಡವನ್ನಾಗಿ ವಿಧಿಸಲಾಗಿದೆ. ಜೊತೆಗೆ, 2 ಡಿಮೆರಿಟ್ ಅಂಕಗಳನ್ನೂ ಅವರ ಖಾತೆಗೆ ಸೇರಿಸಲಾಗಿದೆ ಎಂದು ‘ಐಪಿಎಲ್’ ತಿಳಿಸಿದೆ.

ಬಿಎಫ್‌ಐಗೆ ಕೇಂದ್ರ ನೋಟಿಸ್

ನವದೆಹಲಿ (ಪಿಟಿಐ): ಗೊಂದಲಕಾರಿ ಆಯ್ಕೆ ನೀತಿ ಮತ್ತು ಜ್ಞಾಪನೆಗಳ ಹೊರತಾಗಿಯೂ ಉನ್ನತ ಕಾರ್ಯಕ್ಷಮತೆ ನಿರ್ದೇಶಕರ ನೇಮಕ ಮಾಡಲು ವಿಫಲವಾದ ಭಾರತ ಬಾಕ್ಸಿಂಗ್ ಫೆಡರೇಷನ್ (ಬಿಎಫ್‌ಐ)ಗೆ ಕೇಂದ್ರ ಕ್ರೀಡಾ ಸಚಿವಾಲಯ ಸೋಮವಾರ ಷೋಕಾಸ್ ನೋಟಿಸ್ ನೀಡಿದೆ.

ನೋಟಿಸ್‌ಗೆ ಪ್ರತಿಕ್ರಿಯಿಸಲು ಒಂದು ವಾರದ ಕಾಲಾವಕಾಶ ನೀಡಲಾಗಿದೆ.

ಕಾಮನ್‌ವೆಲ್ತ್ ಗೇಮ್ಸ್ ಮತ್ತು ಏಷ್ಯನ್ ಕ್ರೀಡಾಕೂಟಕ್ಕೆ ಬಾಕ್ಸರ್‌ಗಳನ್ನು ಆಯ್ಕೆ ಮಾಡಲು ಪಟಿಯಾಲದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ಷಮತೆ ಶಿಬಿರ ಸ್ಥಗಿತಗೊಳಿಸುವಂತೆ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಬಿಎಫ್‌ಐಗೆ ಭಾನುವಾರ ಸೂಚಿಸಿತ್ತು.

ಗೊಂಡಾದಲ್ಲಿ ಸ್ಪರ್ಧಾತಾಣಕ್ಕೆ ತೆರಳಿದ ಒಲಿಂಪಿಯನ್ ಕುಸ್ತಿಪಟು
ಕುಸ್ತಿ ಫೆಡರೇಷನ್ ವಿರುದ್ಧ ವಿನೇಶ್ ಕಿಡಿ

ಗೊಂಡಾ (ಉತ್ತರಪ್ರದೇಶ) (ಪಿಟಿಐ): ಒಲಿಂಪಿಯನ್ ಕುಸ್ತಿತಾರೆ ವಿನೇಶ್ ಫೋಗಟ್ ಅವರು ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ವಿಧಿಸಿದ್ದ ನಿರ್ಬಂಧವನ್ನು ಧಿಕ್ಕರಿಸಿ, ರಾಷ್ಟ್ರೀಯ ಓಪನ್ ರ‍್ಯಾಂಕಿಂಗ್ ಟೂರ್ನಿಯಲ್ಲಿ ಭಾಗವಹಿಸಲು ಮುಂದಾದರು. ಆದರೆ ಫೆಡರೇಷನ್ ಅವರಿಗೆ ಸ್ಪರ್ಧಿಸಲು ಅವಕಾಶ ನಿರಾಕರಿಸಿದ್ದು, ಈ ಬೆಳವಣಿಗೆ ಮತ್ತೊಂದು ಸಂಘರ್ಷಕ್ಕೆ ಎಡೆಮಾಡಿಕೊಟ್ಟಿದೆ.

ಷೋಕಾಸ್ ನೋಟಿಸ್‌ಗೆ ಅವರು ನೀಡಿದ ಉತ್ತರವನ್ನು ಡಬ್ಲ್ಯುಎಫ್‌ಐ ತಿರಸ್ಕರಿಸಿತು. ‘ಈ ಕ್ರಮವು ತಮ್ಮ ಪುನರಾಗಮನ ತಡೆಯಲು ಹೂಡಿದ ಪೂರ್ವಯೋಜಿತ ಸಂಚು’ ಎಂದು ವಿನೇಶ್ ಸೋಮವಾರ ಗುಡುಗಿದ್ದಾರೆ.

ಜೂನ್ 26ರವರೆಗೆ ಯಾವುದೇ ದೇಶಿ ಸ್ಪರ್ಧೆಗಳಲ್ಲಿ ಭಾಗವಹಿಸದಂತೆ ಅವರಿಗೆ ಫೆಡರೇಷನ್ ಶುಕ್ರವಾರ ನಿರ್ಬಂಧ ಹೇರಿತ್ತು. ಉದ್ದೀಪನ ಮದ್ದು ಸೇವನೆ (ಡೋಪಿಂಗ್) ತಡೆ ನಿಯಮಗಳ ಪ್ರಕಾರ ಪುನರಾಗಮನ ಮಾಡಿದ ನಂತರ ಆರು ತಿಂಗಳ ಕಡ್ಡಾಯ ನೋಟಿಸ್ ಅವಧಿಯನ್ನು ವಿನೇಶ್ ಪೂರೈಸಿಲ್ಲ ಎಂದು ಡಬ್ಲ್ಯುಎಫ್‌ಐ ಹೇಳಿದೆ.

‘ನಾನೇನು ಮಾಡಬೇಕೆಂದು ಬಯಸುತ್ತಿದ್ದೀರಿ? ಸನ್ಯಾಸ ಸ್ವೀಕರಿಸಬೇಕೇ? ಸೋಲು ಒಪ್ಪಿಕೊಳ್ಳಬೇಕೇ? ಆ ಮೂಲಕ ನನ್ನ ವಿರುದ್ಧ ಸಂಚು ಯಶಸ್ವಿಯಾಗಲು ಬಯಸಿದ್ದೀರಿಯೇ?’ ಎಂದು ಅವರು ಮಾಧ್ಯಮದ ಮುಂದೆ ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೂ ಮೊದಲು ಅವರು ಫೆಡರೇಷನ್ ಅಧ್ಯಕ್ಷ ಸಂಜಯ್ ಸಿಂಗ್ ಅವರನ್ನು ಭೇಟಿಯಾಗಿದ್ದರು.



ವಿನೇಶ್ ಫೋಗಟ್ ಅವರು ಉತ್ತರ ಪ್ರದೇಶದ ಗೊಂಡಾಗೆ ಸೋಮವಾರ ಭೇಟಿ ನೀಡಿದರು ಪಿಟಿಐ ಚಿತ್ರ

‘ನನಗೆ ಸ್ಪರ್ಧಿಸಲು ಬಿಡುತ್ತಿಲ್ಲ. ಬೇಸತ್ತು ನಾನೇ ನಿವೃತ್ತಳಾಗಬೇಕೆಂದು ಅವರು (ಫೆಡರೇಷನ್) ಬಯಸುತ್ತಿದ್ದಾರೆ. ನ್ಯಾಯಸಮ್ಮತವಾಗಿ ಸ್ಪರ್ಧಿಸುವ ಅವಕಾಶ ನನಗೂ ಕೊಡಿ ಎಂದಷ್ಟೇ ಕೇಳಿದ್ದೇನೆ. ಅವರ ನೋಟಿಸ್‌ಗೆ ನಾನು ಮೊದಲ ಉತ್ತರಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಇದೆಲ್ಲಾ ಸಂಚು’ ಎಂದು ವಿನೇಶ್ ದೂರಿದರು.

ಟೂರ್ನಿಯ ಮಹಿಳಾ ವಿಭಾಗದ ಸ್ಪರ್ಧೆಗಳು ಮಂಗಳವಾರ ನಡೆಯಲಿವೆ.

> ಡೋಪಿಂಗ್ ಪರೀಕ್ಷೆಗೆ ಸಂಬಂಧಿಸಿ ಡಿಸೆಂಬರ್‌ನಲ್ಲಿ ಒಮ್ಮೆ ‘ನಾಡಾ’ಕ್ಕೆ ವಾಸ್ತವ್ಯ ಮಾಹಿತಿ ನೀಡುವಲ್ಲಿ ತಪ್ಪಿದ್ದೆ. ಇಂಥ ಮೂರು ಅವಕಾಶಗಳಿರುತ್ತವೆ. ಆ ವೇಳೆ ನಾನು ತಾಯಿಯಾಗಿದ್ದೆ. ವಿಧಾನಸಭೆ ಅಧಿವೇಶನವೂ ನಡೆಯುತಿತ್ತು. ನಾನು ಅಪ್ಡೇಟ್ ಮಾಡಲು ಮರೆತೆ. ‘ವಾಡಾ’ದ ಕ್ಷಮೆಯನ್ನೂ ಕೇಳಿದ್ದೆ. ನನಗೆ ಕ್ಲೀನ್‌ಚಿಟ್ ನೀಡಿದ್ದಾರೆ. ನಾನು ಯಾವುದೇ ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಭಾಗವಹಿಸಬಹುದೆಂದು ಅವರು (ವಾಡಾ) ಹೇಳಿದ್ದಾರೆ
> **ವಿನೇಶ್ ಫೋಗಟ್,** ಕುಸ್ತಿಪಟು

‘ವಾಡಾ ಅಥವಾ ನಾಡಾದ ಯಾವುದೇ ನಿಯಮವನ್ನು ನಾನು ಉಲ್ಲಂಘಿಸಿಲ್ಲ. ಡೋಪ್ ಟೆಸ್ಟ್‌ಗಳಲ್ಲೂ ಕಳಂಕ ಎದುರಿಸಿಲ್ಲ’ ಎಂದು ವಿನೇಶ್ ಪುನರುಚ್ಚರಿಸಿದರು.

‘ನಾನು ಡೋಪಿಂಗ್ ಪರೀಕ್ಷೆ ನಿಯಮ ಉಲ್ಲಂಘಿಸಿದ್ದರೆ ನಾಡಾ ಅಥವಾ ವಾಡಾ ನನಗೆ ಷೋಕಾಸ್ ನೋಟಿಸ್ ನೀಡುತಿತ್ತು ಅಥವಾ ನಿರ್ಬಂಧ ವಿಧಿಸುತಿತ್ತು. ಇದರ ನಂತರವೂ ನಾನು ಪರೀಕ್ಷೆಗೆ ಒಳಗಾಗಿದ್ದೇನೆ. ನಾನು 2026ರ ಜನವರಿ 1ರಿಂದ ಭಾಗವಹಿಸಲು ಅರ್ಹಳಾಗಿದ್ದೇನೆ’ ಎಂದು ಅಂತರರಾಷ್ಟ್ರೀಯ ಟೆಸ್ಟಿಂಗ್ ಏಜನ್ಸಿ (ಐಟಿಎ) ಹೇಳಿದೆ’ ಎಂದು ವಿನೇಶ್ ವಿವರಿಸಿದರು.

‘ಕಾನೂನಿನ ಮೊರೆಹೋಗಲು ನನಗೆ ಅವಕಾಶ ಇರಬಾರದೆಂದು ಉದ್ದೇಶಪೂರ್ವಕವಾಗಿ ಸ್ಪರ್ಧೆಗೆ ಎರಡು ದಿನ ಮೊದಲು ನೋಟಿಸ್ ನೀಡಿದ್ದಾರೆ. ಶುಕ್ರವಾರ ರಾತ್ರಿ ನೋಟಿಸ್ ತಲುಪಿದೆ. ಶನಿವಾರ ನಾನು ತೂಕ ಇಳಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದೆ. ದಾಖಲೆಗಳನ್ನೂ ಸಿದ್ಧಪಡಿಸಿದ್ದೆ. ಯಾವ ಸಮಯದಲ್ಲಿ ನೋಟಿಸ್ ನೀಡಬೇಕೆಂಬುದು ಅವರಿಗೆ ಚೆನ್ನಾಗಿ ಗೊತ್ತು. ನ್ಯಾಯಾಲಯಗಳಿಗೆ ರಜೆಯಿರುವ ವೇಳೆಯನ್ನು ನೋಡಿಕೊಂಡು ಕೊಟ್ಟಿದ್ದಾರೆ. ಇದೆಲ್ಲಾ ಪೂರ್ವಯೋಜಿತ ಎಂದು ದೂರಿದರು.

‘ಅವರು ಇಲ್ಲಿಗೆ ಬರದಂತೆ ತಡೆಯುವುದಿಲ್ಲ. ಆದರೆ ನೋಟಿಸ್‌ನಲ್ಲಿ ಪ್ರಸ್ತಾಪಿಸಿರುವ ವಿಷಯಗಳಿಗೆ ಪೂರ್ಣ ಉತ್ತರ ನೀಡುವವರೆಗೆ ಸ್ಪರ್ಧಿಸಲು ಅವಕಾಶವಿಲ್ಲ. ಅಲ್ಲಿಯತನಕ ಆಕೆ ಕಾಯಬೇಕು’ ಎಂದು ಫೆಡರೇಷನ್ ಅಧ್ಯಕ್ಷ ಸಂಜಯ್ ಸಿಂಗ್ ಹೇಳಿದರು

ತಡವಾಗಿ ನೋಟಿಸ್ ನೀಡಿರುವ ಕ್ರಮದ ಬಗ್ಗೆ ಪ್ರತಿಕ್ರಿಯೆ ಕೇಳಿದಾಗ ಸಂಜಯ್ ಸಿಂಗ್ ಅವರು ‘ಗೊಂಡಾದಲ್ಲಿ ಸ್ಪರ್ಧಿಸಲು ಬಯಸಿರುವುದನ್ನು ವಿನೇಶ್ ಇತ್ತೀಚೆಗಷ್ಟೇ ಹೇಳಿದ್ದರು. ಅದಕ್ಕಿಂತ ಮೊದಲು ಅವರ ಪುನರಾಗಮನದ ಯೋಜನೆ ನಮಗೆ ತಿಳಿದಿರಲಿಲ್ಲ’ ಎಂದರು.

ಸಂಜೆ ವಿನೇಶ್ ಅವರು ಸ್ಪರ್ಧೆಯ ತಾಣದಿಂದ ನಿರ್ಗಮಿಸಿದರು. ಅಲ್ಲಿಂದ ಸಾಯ್‌ನ ಖೇಲೊ ಇಂಡಿಯಾ ಕೇಂದ್ರಕ್ಕೆ ತೆರಳಿದರು. ಆದರೆ ಅಲ್ಲಿಯೂ ಅವರಿಗೆ ತರಬೇತಿಗೆ ಅವಕಾಶ ಸಿಗಲಿಲ್ಲ.

ದರ್ಶನ್, ದಿನಿಧಿ ಕೂಟ ದಾಖಲೆ
ಕೆಎಸ್‌ಎ ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಬಸವನಗುಡಿ ಈಜು ಕೇಂದ್ರದ ದರ್ಶನ್ ಎಸ್. ಮತ್ತು ಡಾಲ್ಫಿನ್ ಈಜು ಕೇಂದ್ರದ ದಿನಿಧಿ ದೇಸಿಂಗು ಅವರು ಇಲ್ಲಿ ಸೋಮವಾರ ಆರಂಭಗೊಂಡ ಕೆಎಸ್‌ಎ ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನದ ಸಾಧನೆ ಮಾಡಿದರು.

ಬಸವನಗುಡಿ ಈಜು ಕೇಂದ್ರದಲ್ಲಿ (ಬಿಎಸಿ) ನಡೆದ ಪುರುಷರ 400 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ದರ್ಶನ್ 3 ನಿಮಿಷ 59.07ಸೆಕೆಂಡ್‌ಗಳಲ್ಲಿ ಗುರಿ ತಲುಪಿ, ಅನೀಶ್ ಎಸ್.ಗೌಡ ಹೆಸರಿನಲ್ಲಿದ್ದ ದಾಖಲೆಯನ್ನು ಮುಳುಗಿಸಿದರು.

ಒಲಿಂಪಿಯನ್ ದಿನಿಧಿ ಅವರು ಮಹಿಳೆಯರ 200 ಮೀ. ಫ್ರೀಸ್ಟೈಲ್‌ನಲ್ಲಿ (2ನಿಮಿಷ 04.20ಸೆ) ತಮ್ಮದೇ ದಾಖಲೆಯನ್ನು ಉತ್ತಮಪಡಿಸಿಕೊಂಡರು. ಬಿಎಸಿಯ ಪೃಥ್ವಿ ಎಂ. ಅವರು ಪುರುಷರ 50 ಮೀ. ಫ್ರೀಸ್ಟೈಲ್‌ನಲ್ಲಿ 23.97 ಸೆಕೆಂಡುಗಳಲ್ಲಿ ಗುರಿ ತಲುಪಿ, ಚಾಂಪಿಯನ್‌ಷಿಪ್‌ನ ವೇಗದ ಈಜುಪಟುವಾಗಿ ಹೊರಹೊಮ್ಮಿದರು.

ಏತನ್ಮಧ್ಯೆ, 79ನೇ ಸೀನಿಯರ್ ರಾಷ್ಟ್ರೀಯ ಅಕ್ವಾಟಿಕ್ ಚಾಂಪಿಯನ್‌ಷಿಪ್ ಜೂನ್ 16ರಿಂದ 21 ರವರೆಗೆ ಅಹಮದಾಬಾದ್‌ನ ವೀರ್ ಸಾವರ್ಕರ್ ಕ್ರೀಡಾ ಸಂಕೀರ್ಣದಲ್ಲಿ ನಡೆಯಲಿವೆ ಎಂದು ಭಾರತೀಯ ಈಜು ಫೆಡರೇಷನ್ ದೃಢಪಡಿಸಿದೆ.



ದಿನಿಧಿ ದೇಸಿಂಗು



ದರ್ಶನ್ ಎಸ್.

ಫಲಿತಾಂಶ: ಪುರುಷರು: 50 ಮೀ. ಫ್ರೀಸ್ಟೈಲ್: ಪೃಥ್ವಿ ಎಂ. (ಬಿಎಸಿ, ಕಾಲ: 23.97ಸೆ)–1, ಹರಿಕಾರ್ತಿಕ್ ವೇಲು (ಜಿ.ಎಫ್)–2, ಆರ್. ನವನೀತ್ ಗೌಡ (ಡಿ.ಎ)–3. 50 ಮೀ. ಬ್ಯಾಕ್‌ಸ್ಟ್ರೋಕ್: ಶ್ರೀಹರಿ ನಟರಾಜ್ (ಡಿ.ಎ, ಕಾಲ:25.86ಸೆ)–1, ಆಕಾಶ್ ಮಣಿ (ಬಿಎಸಿ)–2, ಇದಾಂತ್ ಶಾಶ್ವತ್ ಚತುರ್ವೇದಿ (ಬಿಎಸಿ)–3; 100 ಮೀ.ಫ್ರೀಸ್ಟೈಲ್: ಅನೀಶ್ ಎಸ್. ಗೌಡ (ಬಿಎಸಿ, ಕಾಲ: 51.40ಸೆ)–1, ಆಕಾಶ್ ಮಣಿ–2, ಚಿಂತನ್ ಎಸ್. ಶೆಟ್ಟಿ (ಎಲ್‌ಎಎಸ್)–3; 100 ಮೀ. ಬ್ಯಾಕ್‌ಸ್ಟ್ರೋಕ್: ಆಕಾಶ್ ಮಣಿ (ಕಾಲ: 58.13ಸೆ)–1, ಸಮರ್ಥ್ ಗೌಡ ಬಿ.ಎಸ್. (ಬಿಎಸಿ)–2, ವೇದಾಂತ ವಿ.ಎಂ. (ಬಿಎಸಿ)–3; 100 ಮೀ. ಬ್ರೆಸ್ಟ್‌ಸ್ಟ್ರೋಕ್: ವಿದಿತ್ ಎಸ್. ಶಂಕರ್ (ಡಿ.ಎ, ಕಾಲ: 1ನಿ.04.81ಸೆ)–1, ಮಣಿಕಂಠ ಎಲ್ (ಬಿಎಸಿ)–2, ಸೂರ್ಯ ಜೋಯಪ್ಪ ಒ.ಆರ್ (ಬಿಎಸಿ)–3; 400 ಮೀ. ಫ್ರೀಸ್ಟೈಲ್: ದರ್ಶನ್ ಎಸ್. (ಬಿಎಸಿ, ಕಾಲ: 3ನಿ.59.07ಸೆ)–1, ದಕ್ಷಣ್ ಎಸ್. (ಬಿಎಸಿ)–2, ಅನೀಶ್ ಎಸ್. ಗೌಡ (ಬಿಎಸಿ)–3; 200 ಮೀ. ವೈಯಕ್ತಿಕ ಮೆಡ್ಲೆ: ಶೋನ್ ಗಂಗೂಲಿ (ಬಿಎಸಿ, ಕಾಲ: 2ನಿ.08.55ಸೆ)–1, ಚಿಂತನ್ ಎಸ್.ಶೆಟ್ಟಿ (ಎಲ್‌ಎಎಸ್)–2, ಸೂರ್ಯ ಜೋಯಪ್ಪ–3. 4x200 ಫ್ರೀಸ್ಟೈಲ್ ರಿಲೇ: ಬಿಎಸಿ–ಎ (8ನಿ.01.63ಸೆ)–1, ಬಿಎಸಿ–ಬಿ (8 ನಿ.02.89ಸೆ)–2, ಡಾಲ್ಫಿನ್ ಅಕ್ವಾಟಿಕ್ಸ್–ಎ (8 ನಿ.06.09ಸೆ)–3.

ಮಹಿಳೆಯರು: 50 ಮೀ. ಬ್ಯಾಕ್‌ಸ್ಟ್ರೋಕ್: ಸುವನಾ ಸಿ ಭಾಸ್ಕರ್ (ಡಿ.ಎ, ಕಾಲ: 30.19ಸೆ)–1, ವಿಹಿತಾ ನಯನಾ (ಬಿಎಸಿ)–2, ನೈಶಾ (ಬಿಎಸಿ)–3; 50 ಮೀ. ಬ್ರೆಸ್ಟ್ ಸ್ಟ್ರೋಕ್: ಎಸ್.ಲಕ್ಷ್ಯಾ (ಬಿಎಸಿ, ಕಾಲ: 33.74ಸೆ)–1, ಲಿನೇಷಾ ಎ.ಕೆ. (ಡಿ.ಎ)–2, ಮಾನವಿ ವರ್ಮಾ (ಡಿ.ಸಿ)–3; 200 ಮೀ. ಫ್ರೀಸ್ಟೈಲ್: ದಿನಿಧಿ ದೇಸಿಂಗು (ಡಿ.ಎ, ಕಾಲ: 2ನಿ.04.20ಸೆ)–1, ಶ್ರೀಚರಣಿ ತುಮು (ಜೆಐಆರ್‌ಎಸ್)–2, ಸುಹಾಸಿನಿ ಘೋಷ್ (ಕೆಎಸ್‌ಎ)–3; 200 ಮೀ. ಬಟರ್‌ಫ್ಲೈ: ಸುಹಾನಿಸಿ ಘೋಷ್ (ಕಾಲ: 2ನಿ.29.60ಸೆ)–1, ಎಸ್.ಲಕ್ಷ್ಯಾ–2, ಅಂಜಲಿ ಹೊಸಕೆರೆ (ಬಿಎಸಿ)–3; 200 ಮೀ. ವೈಯಕ್ತಿಕ ಮೆಡ್ಲೆ: ತನಿಶಿ ಗುಪ್ತಾ (ಡಿ.ಎ, ಕಾಲ: 2ನಿ.22.76ಸೆ)–1, ದಿನಿಧಿ ದೇಸಿಂಗು–2, ತಾನ್ಯಾ ಎಸ್ (ಜೆಐಆರ್‌ಎಸ್)–3; 1500 ಮೀ. ಫ್ರೀಸ್ಟೈಲ್: ಶ್ರೀಚರಣಿ ತುಮು (ಕಾಲ: 18ನಿ.06.18ಸೆ)–1, ಅದಿತಿ ಎನ್. ಮುಲ್ಯೆ (ಬಿಎಸಿ)–2, ಶಿರಿನ್ (ಬಿಎಸಿ)–3; 4x100 ಫ್ರೀಸ್ಟೈಲ್ ರಿಲೇ: ಡಾಲ್ಫಿನ್ ಅಕ್ವಾಟಿಕ್ಸ್–ಎ (3ನಿ.58.72ಸೆ)–1, ಬಿಎಸಿ–ಎ (4ನಿ.07.55ಸೆ)–2, ಡಾಲ್ಫಿನ್ ಅಕ್ವಾಟಿಕ್ಸ್–ಬಿ (4ನಿ.09.37ಸೆ)–3.

ಸಂಕ್ಷಿಪ್ತ ಸುದ್ದಿ

ಲಕ್ಷ್ಯ, ಆಯುಷ್, ಸಿಂಧು ಮೇಲೆ ನಿರೀಕ್ಷೆ

ಬ್ಯಾಂಕಾಕ್ (ಪಿಟಿಐ): ಬ್ಯಾಡ್ಮಿಂಟನ್ ತಾರೆಯರಾದ ಲಕ್ಷ್ಯ ಸೇನ್ ಮತ್ತು ಪಿ.ವಿ. ಸಿಂಧು ಅವರು ಮಂಗಳವಾರ ಆರಂಭವಾಗಲಿರುವ ಥಾಯ್ಲೆಂಡ್ ಓಪನ್ ಸೂಪರ್ 500 ಟೂರ್ನಿಯಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ಈಚೆಗೆ ಥಾಮಸ್ ಕಪ್ ಫೈನಲ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಭಾರತ ತಂಡದ ಭಾಗವಾಗಿದ್ದ ಸೇನ್ ಅವರು ಮೊಣಕೈ ಗಾಯದ ಕಾರಣಕ್ಕೆ ಸೆಮಿಫೈನಲ್‌ನ ಪಂದ್ಯವನ್ನು ತಪ್ಪಿಸಿಕೊಂಡಿದ್ದರು. ಅವರು, ಪುರುಷರ ಸಿಂಗಲ್ಸ್‌ನಲ್ಲಿ ಸಿಂಗಪುರದ ಜೇಸನ್ ತೆಹ್ ಜಿಯಾ ಹೆಂಗ್ ವಿರುದ್ಧ ಅಭಿಯಾನ ಆರಂಭಿಸುವರು.

ಒಟ್ಟು ₹4.76 ಕೋಟಿ ಬಹುಮಾನ ಮೊತ್ತ ಒಳಗೊಂಡಿರುವ ಟೂರ್ನಿಯಲ್ಲಿ ಕನ್ನಡಿಗ ಆಯುಷ್ ಶೆಟ್ಟಿ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ. ಕಳೆದ ತಿಂಗಳು ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಐತಿಹಾಸಿಕ ಬೆಳ್ಳಿ ಪದಕ ಗೆದ್ದ ಆಯುಷ್, ಇಲ್ಲಿ ಆರನೇ ಶ್ರೇಯಾಂಕದ ಕೊಡೈ ನರವೋಕಾ (ಜಪಾನ್) ಅವರನ್ನು ಎದುರಿಸಲಿದ್ದಾರೆ.

ಮಹಿಳೆಯರ ಸಿಂಗಲ್ಸ್‌ನಲ್ಲಿ ಸಿಂಧು ಅವರು ತೈವಾನ್‌ನ ಟಂಗ್ ಸಿಯೊ-ಟಾಂಗ್ ವಿರುದ್ಧ ಕಣಕ್ಕಿಳಿಯಲಿದ್ದಾರೆ.

ಉಜ್ಬೇಕಿಸ್ತಾನಕ್ಕೆ ಮಣಿದ ಭಾರತ ತಂಡ

ಜೆದ್ದಾ (ಪಿಟಿಐ): ಭಾರತ ಬಾಲಕರ ತಂಡವು ಎಎಫ್‌ಸಿ 17 ವರ್ಷದೊಳಗಿನವರ ಏಷ್ಯಾ ಕಪ್ ಫುಟ್‌ಬಾಲ್ ಟೂರ್ನಿಯ ಗುಂಪು ಹಂತದ ತನ್ನ ಎರಡನೇ ಪಂದ್ಯದಲ್ಲಿ ಭಾನುವಾರ 0–3ರಿಂದ ಉಜ್ಬೇಕಿಸ್ತಾನ ಎದುರು ಸೋತಿತು. ಅದರೊಂದಿಗೆ ಫಿಫಾ 17 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಗೆ ಅರ್ಹತೆ ಪಡೆಯುವ ಭಾರತದ ಕನಸು ಭಗ್ನಗೊಂಡಿತು.

ಡಿ ಗುಂಪಿನ ಈ ಪಂದ್ಯದಲ್ಲಿ ಉಜ್ಬೇಕಿಸ್ತಾನದ ಲಝೀಝ್ ಅಬ್ದುರೈಮೊವ್ (32ನೇ ನಿ.) ಹಾಗೂ ಅಖ್ರೊರ್ಬೆಕ್ ರವ್‌ಶನ್‌ಬೆಕೊವ್ (78ನೇ ನಿ.) ತಲಾ ಒಂದು ಗೋಲು ಹೊಡೆದರೆ, ಭಾರತದ ವಾಂಗಖೆಮ್ ಡೆನ್ನಿ ಸಿಂಗ್ (60ನೇ ನಿ.) ಎದುರಾಳಿ ತಂಡಕ್ಕೆ ಗೋಲಿನ ಉಡುಗೊರೆ ನೀಡಿದರು. ಭಾರತವು ಈ ಪಂದ್ಯದಲ್ಲಿ ಗೆಲುವು ಸಾಧಿಸಿದ್ದರೆ ಕ್ವಾರ್ಟರ್‌ಫೈನಲ್ ಪ್ರವೇಶಿಸುತ್ತಿತ್ತು. ಜೊತೆಗೆ, ಕತಾರ್‌ನಲ್ಲಿ ವರ್ಷಾಂತ್ಯದಲ್ಲಿ ನಡೆಯುವ ಫಿಫಾ 17 ವರ್ಷದೊಳಗಿನವರ ವಿಶ್ವಕಪ್‌ಗೂ ಅರ್ಹತೆ ಪಡೆಯುತ್ತಿತ್ತು.

ಫುಟ್‌ಬಾಲ್: ಭಾರತ ವನಿತೆಯರಿಗೆ ನಿರಾಸೆ

ಸುಝೌ (ಚೀನಾ), (ಪಿಟಿಐ): ಭಾರತ ತಂಡವು ಸೋಮವಾರ ಎಎಫ್‌ಸಿ 17 ವರ್ಷದೊಳಗಿನವರ ಮಹಿಳಾ ಏಷ್ಯಾ ಕಪ್ ಫುಟ್‌ಬಾಲ್ ಟೂರ್ನಿಯ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ 0–3ರಿಂದ ಆತಿಥೇಯ ಚೀನಾ ತಂಡಕ್ಕೆ ಮಣಿದು, ಅಭಿಯಾನ ಮುಗಿಸಿತು.

ಈ ಸೋಲಿನಿಂದಾಗಿ 2026ರ ಫಿಫಾ 17 ವರ್ಷದೊಳಗಿನ ಮಹಿಳೆಯರ ವಿಶ್ವಕಪ್‌ಗೆ ಅರ್ಹತೆ ಪಡೆಯುವ ಭಾರತದ ಕನಸು ಭಗ್ನಗೊಂಡಿತು. ಆದರೂ, ಟೂರ್ನಿಯಲ್ಲಿ ಇದೇ ಮೊದಲ ಬಾರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿ ಅಭೂತಪೂರ್ವ ಸಾಧನೆ ಮೆರೆಯಿತು.